ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಡಿಸೆಂಬರ್ 05, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 203 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಜಾಗೃತ ಸಮಾಜ ನಿರ್ಮಾಣಕ್ಕೆ ಅಧ್ಯಾತ್ಮಿಕ ಮೌಲ್ಯ ಅಗತ್ಯ

### ಈಶ್ವರೀಯ ವಿಶ್ವ ವಿದ್ಯಾಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ



ದಾವಣಗೆರೆ, ಡಿ.4- ವಿಜ್ಞಾನದ ವೇಗ ದಿಂದಾಗಿ ಅಜ್ಞಾನಿಯಾಗುತ್ತಿರುವ ಮನುಷ್ಯನಿಗೆ ಅಧ್ಯಾತ್ಮಿಕ ಮೌಲ್ಯ ಶಿಕ್ಷಣ ಅಗತ್ಯವಾಗಿದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಪ್ರತಿಪಾದಿಸಿದರು.

ಇಲ್ಲಿನ ವಿದ್ಯಾನಗರದಲ್ಲಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಆವರಣದಲ್ಲಿ ಇಂದು ಆರಂಭಗೊಂಡ ಸುದೀರ್ಘ ಒಂದು ತಿಂಗಳ ಕಾಲ ನಡೆಯಲಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ ಉದ್ಘಾಟನಾ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಜಾಗೃತ ಸಮಾಜ ನಿರ್ಮಾಣಕ್ಕಾಗಿ ಅಧ್ಯಾತ್ಮಿಕ ಮೌಲ್ಯಗಳು ಅತ್ಯಗತ್ಯ. ಒಂದು ತಿಂಗಳು ನಡೆಯುವ ಈ ಪ್ರವಚನ ಮಾಲೆಯಲ್ಲಿ ಅಧ್ಯಾತ್ಮಿಕ ಮೌಲ್ಯ ಶಿಕ್ಷಣ ಪಡೆಯೋಣ. ಆ ಮೂಲಕ ಶರಣರ ಅನುಭಾವಿಕ ಸತ್ಯಗಳನ್ನು ಅರಿಯೋಣ ಎಂದು ಕರೆ ನೀಡಿದರು.

ಅರಿತರೆ ಶರಣ, ಮರೆತರೆ ಮಾನವ ಎಂಬ ಮಾತಿದೆ. ಹಾಗೆಯೇ ನಾವು ಅಧ್ಯಾತ್ಮಿಕ ಮೌಲ್ಯ ಗಳನ್ನು ಅರ್ಥೈಸಿಕೊಂಡು ಅನುಷ್ಠಾನಕ್ಕೆ ತಂದರೆ ಶರಣರಾಗುತ್ತೇವೆ. ಇಲ್ಲವಾದರೆ ಮಾನವರಾಗು ತ್ತೇವೆ. ಎಲ್ಲರೂ ಶ್ರೇಷ್ಠ ಶರಣರಾಗ ಬೇಕೆಂಬುದು ಶರಣರ ಉದ್ದೇಶವಾಗಿತ್ತು ಎಂದರು.

ಕಳಬೇಡ ಕೊಲಬೇಡ ವಚನಗಳ ಮೂಲಕ ಅಂತರರಾಷ್ಟ್ರೀಯ ಮಟ್ಟಕ್ಕೆ ಬೇಕಾದ ಜ್ಞಾನವನ್ನೂ ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿಯೇ ಸರಳವಾಗಿ ಹೇಳಿಕೊಟ್ಟಿದ್ದರು. ಆ ಶರಣ ಸಾಹಿತ್ಯವನ್ನು ನಾವು ಅರಗಿಸಿಕೊಳ್ಳಬೇಕಿದೆ ಎಂದು ಹೇಳಿದರು.

'ವ್ಯಾದನೊಂದು ಮೊಲವ ತಂದೊಡೆ' ವಚನ ಉದಾಹರಿಸಿದ ಬಸವರಾಜ ರಾಜಋಷಿ ಅವರು, ಬೇಟೆಯಾಡಿ ತಂದ ಮೊಲಕ್ಕೆ ಇರುವ ಬೆಲೆ ಮನುಷ್ಯನ ಶವಕ್ಕಿರುವುದಿಲ್ಲ. ಬೆಲೆ ಇಲ್ಲದ ಈ ಶರೀರವನ್ನು ನಂಬಿ ಕೆಡುತ್ತಿರುವ ಮಾನವನಿಗೆ ಆತ್ಮಜಾಗೃತಿ ಅಗತ್ಯವಾಗಿದೆ ಎಂದು ಹೇಳಿದರು.

ಬಾಂಬ್‌ಗಳನ್ನು ಹಾಕಲು ರಾಷ್ಟ್ರಮಟ್ಟದಲ್ಲಿ ಪೈಪೋಟಿ ನಡೆಯುತ್ತಿದೆ. ಮುಂದೊಂದು ದಿನ ನಮ್ಮ ಮೇಲೆಯೇ ನಾವು ಬಾಂಬ್ ಹಾಕಿಕೊಳ್ಳು ವಂತಹ ವ್ಯವಸ್ಥೆ ನಿರ್ಮಾಣವಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದರು. (3ನೇ ಪುಟಕ್ಕೆ)

### ಅಧ್ಯಾತ್ಮಿಕ ಮೌಲ್ಯ ಇದ್ದವನೇ ಶರಣ : ಶಿವಾನಂದ ಶ್ರೀ

**ತೃಪ್ತ ಭಾವನೆ, ಅಧ್ಯಾತ್ಮಿಕ ಮೌಲ್ಯ ಇದ್ದವನೇ ನಿಜವಾದ ಶರಣ ಎಂದು ಸ್ಥಳೀಯ ಶ್ರೀ ಜಡೆಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಮಹಾಸ್ವಾಮೀಜಿ ಹೇಳಿದರು.**

**'ಶರಣರು ಕಂಡ ಶಿವ' ಪ್ರವಚನ ಮಾಲೆಯ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ವೇಷ, ಭಾಷೆ, ಚಿಹ್ನೆಗಳಿಂದ ಶರಣರಾಗುವುದಿಲ್ಲ. ಅಂತರಂಗದ ಸಾಧನೆ ಮಾಡಿದವರೇ ಶರಣರು ಎಂದು ಹೇಳಿದರು.**

**ಜೀವನದಲ್ಲಿ ಯಾರೂ ಚಿರಂಜೀವಿಗಳಲ್ಲ. ಇಲ್ಲಿಯೇ ಇರಬೇಕೆಂದೂ ಬಂದಿಲ್ಲ. ಒಂದಲ್ಲಾ ಒಂದು ದಿನ ಜಾಗ ಖಾಲಿ ಮಾಡಲೇ ಬೇಕು. ಸಾಯುವುದೇ ನಿಜವೆಂದ ಮೇಲೆ ಶರಣರಾಗಿಯೇ ಜೀವ ಬಿಡಬೇಕು ಎಂದು ಹೇಳಿದರು. ಭಗವಂತನ ಸ್ಮರಣೆ, ಶುದ್ಧ ಕಾಯಕ ಮಾಡಬೇಕು. ಆಗ ಶಾಂತಿ, ತೃಪ್ತ ಜೀವನ ನಡೆಸಲು ಸಾಧ್ಯ. ಎಲ್ಲಿಯವರೆಗೆ ಶರಣರಾಗುವುದಿಲ್ಲವೋ ಅಲ್ಲಿಯವರಿಗೆ ಜೀವನದಲ್ಲಿ ಧನ್ಯಾತ್ಮರಾಗಲು ಸಾಧ್ಯವಿಲ್ಲ ಎಂದು ಹೇಳಿದರು.**

## ಎಲ್ಲೇ ರಸ್ತೆ ಅಪಘಾತವಾದರೂ ನಗದು ರಹಿತ ಚಿಕಿತ್ಸೆಗೆ ಕ್ರಮ

### ಮೂರ್ನಾಲ್ಕು ತಿಂಗಳಲ್ಲೇ ವ್ಯವಸ್ಥೆಗೆ ಕೇಂದ್ರ ನಿರ್ಧಾರ

ನವದೆಹಲಿ, ಡಿ. 4 – ದೇಶಾದ್ಯಂತ ಎಲ್ಲೇ ರಸ್ತೆ ಅಪಘಾತ ಸಂಭವಿಸಿದರೂ, ಸಂತ್ರಸ್ತರಿಗೆ ನಗದು ರಹಿತವಾಗಿ ಚಿಕಿತ್ಸಾ ಸೌಲಭ್ಯ ಕಲ್ಪಿಸಲು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಯೋಜಿಸಿದೆ.

ಇನ್‌ಸ್ಟಿಟ್ಯೂಟ್ ಆಫ್ ರೋಡ್ ಟ್ರಾಫಿಕ್ ಎಜುಕೇಷನ್ (ಐ.ಆರ್.ಟಿ.ಇ.) ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯದ ಕಾರ್ಯ ದರ್ಶಿ ಅನುರಾಗ್ ಜೈನ್, ಮೂರ್ನಾಲ್ಕು ತಿಂಗಳಲ್ಲೇ ಈ ಕುರಿತ ವ್ಯವಸ್ಥೆ ರೂಪಿಸಲಾಗುವುದು ಎಂದರು.

ಮೋಟಾರು ವಾಹನ ಕಾಯ್ದೆಗೆ 2019ರಲ್ಲಿ ತರಲಾದ ತಿದ್ದುಪಡಿಯ ಅನ್ವಯ, ಅಪಘಾತದಲ್ಲಿ ಗಾಯಗೊಂಡ ವರಿಗೆ ಉಚಿತ ಹಾಗೂ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಕೊಡಬೇಕಿದೆ. ಕೆಲ ರಾಜ್ಯಗಳು ಈ ಅಂಶವನ್ನು ಜಾರಿಗೆ ತಂದಿವೆ. ಆದರೆ, ಆರೋಗ್ಯ ಸಚಿವಾಲಯದ ಜೊತೆಗೂಡಿ ರಸ್ತೆ ಸಚಿವಾಲಯ ದೇಶಾದ್ಯಂತ ಈ ಯೋಜನೆ ಜಾರಿಗೆ ಸಂಪೂರ್ಣವಾಗಿ ತರಲು ಬಯಸಿದೆ ಎಂದರು.

ಅಪಘಾತದಲ್ಲಿ ಗಾಯಗೊಂಡವರಿಗೆ ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲು ವ್ಯವಸ್ಥೆ (5ನೇ ಪುಟಕ್ಕೆ)

## ಕಲ್ಯಾಣ ಕರ್ನಾಟಕ ಶಿಕ್ಷಕರ ಕೊರತೆ ನೀಗಿಸಲು ಕ್ರಮ



ಬೆಂಗಳೂರು, ಡಿ. 4 - ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಾಲಾ ಶಿಕ್ಷಕರ ಕೊರತೆಯನ್ನು ತುಂಬುವುದರ ಜೊತೆಗೆ ಈ ಭಾಗದ ಶಾಲೆಗಳಿಗೆ ಅಗತ್ಯವಿರುವ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಆದ್ಯತೆಯಲ್ಲಿ ಒದಗಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದ್ದಾರೆ.

ವಿಧಾನಪರಿಷತ್ತಿನಲ್ಲಿಂದು ಪ್ರಶ್ನೋತ್ತರ ಅವಧಿಯಲ್ಲಿ ಶಶಿಲ್ ನಮೋಶಿ ಪ್ರಶ್ನೆಗೆ ಉತ್ತರಿಸಿದ ಸಚಿವರು, ಶಾಲಾ (3ನೇ ಪುಟಕ್ಕೆ)

## ಪಿ.ಎಸ್.ಐ. ನೇಮಕಾತಿ ಪರೀಕ್ಷೆ ಮುಂದೂಡಿಕೆ

ಬೆಳಗಾವಿ, ಡಿ. 4 – ಬರುವ ಡಿಸೆಂಬರ್ 23ರಂದು ನಡೆಯಬೇಕಿದ್ದ ಪಿ.ಎಸ್.ಐ. ನೇಮಕಾತಿ ಪರೀಕ್ಷೆಯನ್ನು ಒಂದು ತಿಂಗಳ ಕಾಲ ಮುಂದೂಡಲಾಗಿದೆ.

545 ಪಿ.ಎಸ್.ಐ. ಹುದ್ದೆಗಳ ನೇಮಕಾತಿ ಪರೀಕ್ಷೆ ಮುಂದಿನ ವರ್ಷ ಜನವರಿ 23ಕ್ಕೆ ನಡೆಯಲಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಮರು ಪರೀಕ್ಷೆಯನ್ನು ಮುಂದೂಡು ವಂತೆ ಆಡಳಿತ ಮತ್ತು (2ನೇ ಪುಟಕ್ಕೆ)

## ಮಹಿಳೆಯರ ವಿರುದ್ಧ ಅಪರಾಧ 4.45 ಲಕ್ಷ ಪ್ರಕರಣಗಳು ದಾಖಲು

ನವದೆಹಲಿ, ಡಿ. 4 – ಮಹಿಳೆಯರ ವಿರುದ್ಧದ ಅಪರಾಧಗಳಿಗೆ ಸಂಬಂಧಿಸಿದಂತೆ 2022ರಲ್ಲಿ 4,45,256 ಎಫ್.ಐ.ಆರ್.ಗಳು ದಾಖಲಾಗಿವೆ. 2021ರಲ್ಲಿ ಈ ಸಂಬಂಧ 4,28,278 ಎಫ್.ಐ.ಆರ್.ಗಳು ದಾಖಲಾಗಿದ್ದವು ಎಂದು ಎನ್.ಸಿ. ಆರ್.ಬಿ. ಇತ್ತೀಚಿನ ವರದಿ ತಿಳಿಸಿದೆ.

ಪ್ರತಿ ಲಕ್ಷ ಮಹಿಳೆಯರ ವಿರುದ್ಧ 66.4ರಷ್ಟು ಅಪರಾಧಿಕ ಪ್ರಕರಣಗಳು ನಡೆದಿವೆ ಎಂದೂ ರಾಷ್ಟ್ರೀಯ ಅಪರಾಧ ದಾಖಲೆಗಳ ದಳದ ವರದಿಯಲ್ಲಿ ಹೇಳಲಾಗಿದೆ. ಗಂಡ ಹಾಗೂ ಸಂಬಂಧಿಗಳಿಂದ ಹಿಂಸಾಚಾರ ನಡೆದ ಬಗ್ಗೆ ಅತಿ ಹೆಚ್ಚಿನ ಶೇ.31.4ರಷ್ಟು ಪ್ರಕರಣಗಳು ದಾಖಲಾಗಿವೆ. ಅಪಹರಣಕ್ಕೆ ಸಂಬಂಧಿಸಿದಂತೆ ಶೇ.19.2, ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಶೇ.18.7 ಹಾಗೂ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಶೇ.7.1ರಷ್ಟು ಪ್ರಕರಣಗಳು ದಾಖಲಾಗಿವೆ.

ದೆಹಲಿಯಲ್ಲಿ 14,247 ಪ್ರಕರಣಗಳು ದಾಖಲಾಗಿವೆ. ಇದು (2ನೇ ಪುಟಕ್ಕೆ)

## 19.30 ಲಕ್ಷ ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ ವಿತರಣೆ

ಬೆಂಗಳೂರು, ಡಿ. 4 - ನಲವತ್ತು ಕೋಟಿ ರೂ. ವೆಚ್ಚದಲ್ಲಿ 19.30ಲಕ್ಷ ಹದಿಹರೆಯದ ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಸದಸ್ಯ ಕೆ.ಎ.ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಅವರು ಉತ್ತರಿಸಿದರು, ರಾಜ್ಯದಲ್ಲಿ ಮುಟ್ಟು ಮತ್ತು ಮುಟ್ಟಿನ ಶುಚಿತ್ವದ ಕುರಿತು ಅರಿವು ಮೂಡಿಸುವಲ್ಲಿ ಶುಚಿ ಕಾರ್ಯಕ್ರಮ ರೂಪಿಸಲಾಗಿದ್ದು, ವಿವಿಧ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು. ಶುಚಿ ಕಾರ್ಯಕ್ರಮದಡಿ ಹದಿಹರೆಯದವರಲ್ಲಿ ಋತುಸ್ರಾವದ ಶುಚಿತ್ವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. (3ನೇ ಪುಟಕ್ಕೆ)

## ರೈತರಿಂದ ಮೆಕ್ಕೆಜೋಳ ನೇರ ಖರೀದಿ

ದಾವಣಗೆರೆ, ಡಿ.4- ಶಿಕಾರಿಪುರದ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ವತಿಯಿಂದ ಕ್ವಿಂಟಾಲ್‌ಗೆ 2250 ರಂತೆ ನೇರವಾಗಿ ರೈತರಿಂದ ಮೆಕ್ಕೆಜೋಳವನ್ನು ಖರೀದಿಸಲಾಗುತ್ತದೆ ಎಂದು ಶಿಕಾರಿಪುರ ಪಶು ಆಹಾರ ಘಟಕ ವ್ಯವಸ್ಥಾಪಕರು ತಿಳಿಸಿದ್ದಾರೆ. ಮೆಕ್ಕೆಜೋಳ ಬೆಳೆದಿರುವ ಆಸಕ್ತ ರೈತರು ಸಮೀಪದ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಒಂದು ಕೆ.ಜಿ ಪ್ರಮಾಣದಷ್ಟು ಮೆಕ್ಕೆಜೋಳದ ಮಾದರಿಯನ್ನು ನೀಡಿ, ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಆಗಿರುವ ಸಂಖ್ಯೆಯೊಂದಿಗೆ ನೋಂದಾಯಿಸಿಕೊಳ್ಳಬಹುದು. ಪ್ರತಿ ಒಬ್ಬ ರೈತರಿಂದ ಗರಿಷ್ಠ 1000 ಕ್ವಿಂಟಾಲ್ ಮೆಕ್ಕೆಜೋಳ ಸರಬರಾಜಿಗೆ ಸೀಮಿತಗೊಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ.ಎಸ್.ಎಂ.ಮೂರ್ತಿ, ವ್ಯವಸ್ಥಾಪಕರು (ಶೇಮತಾಂ) ಮೊ.ಸಂ 7760980540 ಗೆ ಸಂಪರ್ಕಿಸಲು ತಿಳಿಸಿದ್ದಾರೆ.

## ಮೂರನೇ ದೊಡ್ಡ ಆರ್ಥಿಕತೆಯತ್ತ ಭಾರತ

### ಯುವ ಪೀಳಿಗೆಯಿಂದ ಸಾಧನೆಯಲ್ಲಿ ಸಹಭಾಗಿತ್ವ : ಶೊಲ್ಲಾಪುರ್

ದಾವಣಗೆರೆ, ನ. 3 - ಭಾರತದ ಆರ್ಥಿಕ ಬೆಳವಣಿಗೆ ವೇಗ ಈಗ ವಿಶ್ವದಲ್ಲೇ ಅತಿ ಹೆಚ್ಚಿನ ಶೇ.7.6 ಆಗಿದೆ. ಶೀಘ್ರದಲ್ಲೇ ಭಾರತ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದೆ ಹಾಗೂ 2030ರ ವೇಳೆಗೆ ಜಪಾನ್ ಹಿಂದೆ ಹಾಕಿ ಮೂರನೇ ಅತಿ ದೊಡ್ಡ ಆರ್ಥಿಕತೆ ಆಗಲಿದೆ ಎಂದು ಹುಬ್ಬಳ್ಳಿ ಕೆ.ಎಲ್.ಇ. ಟೆಕ್ನಾಲಜಿಕಲ್ ಯೂನಿವರ್ಸಿಟಿಯ ಸ್ಕೂಲ್ಸ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಡೀನ್ ಎಂ.ಆರ್. ಶೊಲ್ಲಾಪುರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಶನ್‌ನ ವಾಣಿಜ್ಯ ವಿಭಾಗದ ವತಿಯಿಂದ ಬಾಪೂಜಿ ಬಿ ಸ್ಕೂಲ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 5ನೇ ವಾಣಿಜ್ಯೋತ್ಸವ-2023 ಉದ್ಘಾಟಿಸಿ, ಅವರು ಮಾತನಾಡಿದರು.

ಭಾರತವನ್ನು ಅತಿ ದೊಡ್ಡ ಆರ್ಥಿಕ ಅಭಿವೃದ್ಧಿ ಹೊಂದಿದ ದೇಶವನ್ನಾಗಿ ರೂಪಿಸುವ ಪ್ರಕ್ರಿಯೆಯಲ್ಲಿ ಈಗಿನ ಯುವ ಪೀಳಿಗೆ ಭಾಗಿಯಾಗಲಿದೆ. ನೀವೆಲ್ಲರೂ ಈ ಸಾಧನೆಗೆ ಕಾರಣೀಭೂತರಾಗಲಿದ್ದೀರಿ ಎಂದವರು ಹೇಳಿದರು.

ದೇಶದ ಬೆಳವಣಿಗೆಯಲ್ಲಿ ವಾಣಿಜ್ಯಶಾಸ್ತ್ರ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಈ ವಲಯದಲ್ಲಿರುವ ವಿದ್ಯಾರ್ಥಿಗಳು ಭವಿಷ್ಯದ ಭಾರತ ನಿರ್ಮಿಸುವ ನಾಯಕರಾಗಲಿದ್ದಾರೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ಯಾವುದೇ ದೇಶ ಅಭಿವೃದ್ಧಿ ಹೊಂದಬೇಕಾದರೆ ಅದು ವ್ಯವಹಾರ ಹಾಗೂ ವಾಣಿಜ್ಯದಲ್ಲಿ ಶ್ರೇಷ್ಠತೆ ಹಾಗೂ ಪರಿಪಕ್ವತೆ ಹೊಂದಿರಬೇಕು. ಇತಿಹಾಸ ಕಾಲದಿಂದಲೂ ಉನ್ನತ ನಾಗರಿಕತೆಗಳಲ್ಲಿ ವ್ಯಾಪಾರ ಹಾಗೂ ವಾಣಿಜ್ಯ ಶ್ರೇಷ್ಠವಾಗಿರುವುದು ಕಂಡು ಬರುತ್ತದೆ. ಚೋಳರಿಂದ (3ನೇ ಪುಟಕ್ಕೆ)



### ಈಸ್ಟ್ ಇಂಡಿಯಾ ಕಂಪನಿ ನಾಣ್ಯಗಳಲ್ಲಿ ಹಿಂದೂ ದೇವರು

#### 1616ರ ಕಾಲದ ನಾಣ್ಯ ಧರ್ಮ ಆಧರಿತ ಆರ್ಥಿಕತೆಯ ಸಂಕೇತ

ವಾಣಿಜ್ಯೋತ್ಸವದ ಅಂಗವಾಗಿ ಆರ್ಥಿಕ ಚಟುವಟಿಕೆಗಳ ಬಿಂಬಿಸುವ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿತ್ತು. ಈ ವೇಳೆ ನಗರದ ಅಥಣಿ ಪಿ.ಯು. ಕಾಲೇಜಿನ ವಿದ್ಯಾರ್ಥಿನಿಯರಾದ ಕೆ.ಎಂ. ಅಕ್ಷತ ಹಾಗೂ ಕೆ. ಕಾವ್ಯ ಅವರು ಪ್ರದರ್ಶಿಸಿದ ಈಸ್ಟ್ ಇಂಡಿಯಾ ಕಂಪನಿಯ ಕಾಲದ ನಾಣ್ಯಗಳು ಗಮನ ಸೆಳೆದವು.

ಒಂದು ಹಾಗೂ ಎರಡು ಆಣೆಗಳ ಆ ಕಾಲದ ನಾಣ್ಯಗಳು ಈಗಿನ ನಾಣ್ಯಗಳಿಗಿಂತ ಹಲವು ಪಟ್ಟು ದೊಡ್ಡವು ಹಾಗೂ ಹೆಚ್ಚು ತೂಕದವುಗಳಾಗಿದ್ದವು.

ಅಲ್ಲದೇ, ಅವುಗಳ ಮೇಲೆ ಸೀತಾ ಲಕ್ಷ್ಮಣ ಸಮೇತ ಶ್ರೀರಾಮ, ಆಂಜನೇಯ, ಅಷ್ಟ ಲಕ್ಷ್ಮಿ, ಗಣಪತಿ, ಆಂಜನೇಯ, ಶಿವ ಪಾರ್ವತಿ, ದುರ್ಗೆ ಮುಂತಾದ ದೇವರ ಚಿತ್ರಗಳನ್ನು ಮುದ್ರಿಸಲಾಗಿತ್ತು.

1616ನೇ ಇಸವಿಯಲ್ಲಿ ಈಸ್ಟ್ ಇಂಡಿಯಾ ಕಂಪನಿ ಮುದ್ರಿಸಿದ್ದ ಎರಡು ಆಣೆಯ ನಾಣ್ಯದ ಮೇಲೆ ಓಂ ಗುರುತೂ ಸಹ ಇತ್ತು. ಈ ಬಗ್ಗೆ ಪ್ರಸ್ತಾಪಿಸಿದ ಕೆ.ಎಲ್.ಇ. ಡೀನ್ ಎಂ.ಆರ್. ಶೊಲ್ಲಾಪುರ್, ಆ ಕಾಲದ ಆರ್ಥಿಕ ವ್ಯವಸ್ಥೆ ಹಾಗೂ ಧಾರ್ಮಿಕತೆ ಜೊತೆಯಾಗಿ ಸಾಗುತ್ತಿದ್ದವು ಎಂಬುದನ್ನು ಈ ನಾಣ್ಯಗಳು ಬಿಂಬಿಸುತ್ತವೆ. ಧರ್ಮ ಆಧರಿತ ಚೌಕಟ್ಟಿನಲ್ಲಿ ವ್ಯವಹಾರ ನಡೆಸಲಾಗುತ್ತಿದ್ದ ಬಗ್ಗೆ ಇದು ವಸ್ತುನಿಷ್ಠ ದಾಖಲೆ ಎಂದರು.

## ರೈತರ ಪಂಪ್‌ಸೆಟ್‌ಗಳಿಗೆ 7 ಗಂಟೆ ತ್ರಿಫೇಸ್ ವಿದ್ಯುತ್




ಬೆಂಗಳೂರು, ಡಿ. 4 - ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿ ಯಲ್ಲಿ ಪ್ರಸ್ತುತ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ದಿನನಿತ್ಯ 7 ಗಂಟೆಗಳ ಕಾಲ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಪ್ರಶ್ನೆಗೆ ಇಂಧನ ಸಚಿವರ ಪರವಾಗಿ ಉತ್ತರಿಸಿದ ಅವರು, ರೈತರ ಪಂಪ್‌ಸೆಟ್‌ಗಳಿಗೆ 7 ಗಂಟೆಗಳ ಕಾಲ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ರಾಜ್ಯದ ವಿವಿಧ ಭಾಗಗಳಲ್ಲಿನ ಬೇಡಿಕೆಗಳ ಹಿನ್ನೆಲೆಯಲ್ಲಿ ಭತ್ತ ಮತ್ತು ಕಬ್ಬು ಬೆಳೆಗಳ ಕಟಾವು ಪೂರ್ವ ಅವಧಿಯಲ್ಲಿ 7 ಗಂಟೆಗಳಿಗೂ ಹೆಚ್ಚಿನ ಅವಧಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಸ್ಥಳೀಯ ಅವಶ್ಯಕತೆಗೆ ತಕ್ಕಂತೆ ಹಗಲಿನಲ್ಲಿ 4 ಗಂಟೆಗಳು ಹಾಗೂ ರಾತ್ರಿ ವೇಳೆ 3 ಗಂಟೆಗಳು ಸೇರಿ 7 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದರು.

ಈ ವರ್ಷ ಬರಗಾಲ ಇರುವುದರಿಂದ ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆ ಪ್ರಮಾಣ ದ್ವಿಗುಣವಾಗಿರುವುದರಿಂದ, ಲಭ್ಯ ಸಂಪನ್ಮೂಲಗಳಿಂದ ವಿದ್ಯುತ್ ಪಡೆದು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದ (2ನೇ ಪುಟಕ್ಕೆ)

## ಚುನಾವಣೆಯಲ್ಲಿ ಬಿಜೆಪಿಗೆ ಮುನ್ನಡೆ ಷೇರುಪೇಟೆಯಲ್ಲಿ ಶೇ.2ರ ಏರಿಕೆ



ಮುಂಬೈ, ಡಿ. 4 – ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಮುನ್ನಡೆ ಸಾಧಿಸಿದ ಬೆನ್ನಲ್ಲೇ ಷೇರು ಪೇಟೆಯಲ್ಲಿ ಉತ್ಸಾಹ ಕಂಡು ಬಂದಿದೆ. ಷೇರುಪೇಟೆಯ ಸೂಚ್ಯಂಕ ಶೇ.2ರ ಏರಿಕೆ ಕಂಡಿದೆ.

ಇದೇ ವೇಳೆ ಕಚ್ಚಾ ತೈಲದ ಬೆಲೆ 80 ಡಾಲರ್‌ಗಳಿಗೂ ಕಡಿಮೆ ಹಂತದಲ್ಲಿ ಮುಂದುವರೆದಿರುವುದೂ ಸಹ ಹೂಡಿಕೆದಾರರಲ್ಲಿನ ಉತ್ಸಾಹ ಹೆಚ್ಚಿಸಿದೆ. ಸಮಗ್ರ ಆರ್ಥಿಕ ವ್ಯವಸ್ಥೆಯಲ್ಲಿ ಬೆಳವಣಿಗೆ ಹಾಗೂ ವಿದೇಶಿ ಹರಿವು ಮುಂದುವರಿಕೆ ಯಿಂದಾಗಿ ಕಳೆದ ವಾರದಿಂದಲೂ ಷೇರು ಪೇಟೆಯಲ್ಲಿ ಉತ್ಸಾಹವಿದೆ.

ಬಿ.ಎಸ್.ಇ. ಸೂಚ್ಯಂಕ ಶೇ.2.05ರ ಏರಿಕೆ ಕಂಡು 68,865.12ರ ಹಂತಕ್ಕೆ ತಲುಪಿದೆ. ಮೇ 20, 2022ರ ನಂತರ ಒಂದೇ ದಿನ ಇಷ್ಟೊಂದು ಏರಿಕೆ ಕಂಡು ಬಂದಿದೆ. ನಿಫ್ಟಿ ಸೂಚ್ಯಂಕ ಶೇ.2.07ರ ಏರಿಕೆ ಕಂಡು (2ನೇ ಪುಟಕ್ಕೆ)

## ಕಾಡಾನೆ ದಾಳಿಗೆ ಅರ್ಜುನ ಆನೆ ಸಾವು



ಹಾಸನ, ಡಿ. 4 - ಮೈಸೂರು ದಸರಾದಲ್ಲಿ 8 ಬಾರಿ ಅಂಬಾರಿ ಹೊತ್ತಿದ್ದ ಅರ್ಜುನ ಆನೆ ಸಾವಿಗೀಡಾಗಿದೆ.

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಯಸಳೂರು ಬಳಿ ಕಾಡಾನೆ ಸೆರೆ ಹಿಡಿದು ಸ್ಥಳಾಂತರ ಮಾಡುವ ಕಾರ್ಯಾಚರಣೆ ನಡೆಯುತ್ತಿತ್ತು. ಈ ವೇಳೆ ಕಾಡಾನೆಗೆ ಅರಿವಳಿಕೆ ಚುಚ್ಚುಮದ್ದು ನೀಡುವಾಗ ಅರ್ಜುನನ ಮೇಲೆ ಒಂಟಿಸಲಗ ದಾಳಿ ಮಾಡಿದೆ. ಈ ಘಟನೆಯಲ್ಲಿ ಅರ್ಜುನ ಮೃತಪಟ್ಟಿದೆ.

## ಛತ್ತೀಸ್‌ಘಡ : ರಾಜ ಕುಟುಂಬಗಳ ಎಲ್ಲಾ 7 ಅಭ್ಯರ್ಥಿಗಳ ಸೋಲು

ರಾಯಪುರ, ಡಿ. 4 – 2000ದಲ್ಲಿ ಛತ್ತೀಸ್‌ಘಡ ರಚನೆಯಾದ ನಂತರ ಇದೇ ಮೊದಲ ಬಾರಿಗೆ ವಿಧಾನಸಭೆಯಲ್ಲಿ ರಾಜ ಕುಟುಂಬದ ಯಾವ ಸದಸ್ಯರೂ ಆಯ್ಕೆಯಾಗಿಲ್ಲ. ಕಾಂಗ್ರೆಸ್, ಬಿಜೆಪಿ ಹಾಗೂ ಎ.ಎ.ಪಿ.ಗಳಿಂದ ಕಣದಲ್ಲಿದ್ದ ರಾಜ ಕುಟುಂಬದ ಎಲ್ಲಾ ಏಳು ಅಭ್ಯರ್ಥಿಗಳು ಸೋತಿದ್ದಾರೆ.

ಕಾಂಗ್ರೆಸ್ ಹಿರಿಯ ನಾಯಕ ಹಾಗೂ ನಿರ್ಗಮಿತ ಉಪ ಮುಖ್ಯಮಂತ್ರಿ ಟಿ.ಎಸ್. ಸಿಂಗ್ ದೇವ್ ಅವರು ಪರಾಜಿತರಾದ ಪ್ರಮುಖ ರಾಜ ಕುಟುಂಬದ ಕುಡಿ.

ಕಾಂಗ್ರೆಸ್ ಹಾಗೂ ಬಿಜೆಪಿಗಳು ರಾಜ ಕುಟುಂಬದ ತಲಾ ಮೂವರನ್ನು ಕಣಕ್ಕಿಳಿಸಿದ್ದವು. ಆಮ್ ಆದ್ಮಿ ಪಾರ್ಟಿಯಿಂದ ಒಬ್ಬರು ಕಣದಲ್ಲಿದ್ದರು.

ಟಿ.ಎಸ್. ಸಿಂಗ್ ದೇವ್, ಅಂಬಿಕಾ ಸಿಂಗ್ ದೇವ್ ಹಾಗೂ ದೇವೇಂದ್ರ ಬಹದ್ದೂರ್ ಸಿಂಗ್ ಕಾಂಗ್ರೆಸ್‌ನವರು. ಸಂಯೋಗಿತ ಸಿಂಗ್ ಜುದೇವ್, ಪ್ರಬಲ್ ಪ್ರತಾಪ್ ಸಿಂಗ್ ಜುದೇವ್ ಹಾಗೂ ಸಂಜೀವ್ ಷಾ ಬಿಜೆಪಿಯವರು.

ಸುರ್ಗುಜಾ ರಾಜಕುಟುಂಬದ ಸಿಂಗ್ ದೇವ್ ಅವರು ಅಂಬಿಕಾಪುರ ಕ್ಷೇತ್ರದಲ್ಲಿ ಕೇವಲ 94 ಮತಗಳ ಅಂತರದಿಂದ ಬಿಜೆಪಿಯ ರಾಜೇಶ್ ಅಗರ್‌ವಾಲ್ ವಿರುದ್ಧ ಸೋತಿದ್ದಾರೆ.

ಸಿಂಗ್ ದೇವ್ ಅವರು 2018ರ ಚುನಾವಣೆ ಯಲ್ಲಿ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದರು. ಅವರು 2008, 2013 ಹಾಗೂ 2018ರ ಚುನಾವಣೆಗಳಲ್ಲಿ ಸತತವಾಗಿ ಆಯ್ಕೆಯಾಗಿದ್ದರು.

ಅವರ ಕುಟುಂಬ ಛತ್ತೀಸ್‌ಘಡದ ಉತ್ತರದಲ್ಲಿರುವ ಸುರ್ಗುಜಾ ಭಾಗದಲ್ಲಿ ಪ್ರಾಬಲ್ಯ ಹೊಂದಿದೆ. 2018ರಲ್ಲಿ ಇಲ್ಲಿನ ಎಲ್ಲಾ 14 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿತ್ತು. ಈ ಬಾರಿ ಉಲ್ಟಾ ಆಗಿ ಬಿಜೆಪಿ ಗೆಲುವು ಸಾಧಿಸಿದೆ.

ಸುರ್ಗುಜಾ ಪ್ರಾಂತ್ಯದ ಇನ್ನೋರ್ವ ರಾಜಕುಟುಂಬದ ಅಭ್ಯರ್ಥಿ ಅಂಬಿಕಾ ಸಿಂಗ್‌ದೇವ್ ಅವರು ಬೈಕುಂಠಪುರ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಭೈಯ್ಯಾಲಾಲ್ ರಾಜವಾಡೆ ವಿರುದ್ಧ (3ನೇ ಪುಟಕ್ಕೆ)

## ಚುನಾವಣೆ : ಮಹಿಳೆಯರ ಆಯ್ಕೆ ಪ್ರಮಾಣ ಕಡಿಮೆ

ನವದೆಹಲಿ, ಡಿ. 4 – ಇತ್ತೀಚೆಗೆ ಪೂರ್ಣಗೊಂಡ ಛತ್ತೀಸ್‌ಘಡ, ರಾಜಸ್ಥಾನ, ತೆಲಂಗಾಣ ಹಾಗೂ ಮಧ್ಯ ಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಆಯ್ಕೆಯಾದ ಮಹಿಳೆಯರ ಸಂಖ್ಯೆ ಮೂರನೇ ಒಂದು ಭಾಗಕ್ಕಿಂತಲೂ ಕಡಿಮೆ ಇದೆ.


ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಸ್ಥಾನಗಳನ್ನು ಕಾಯ್ದಿರಿಸಲು ಕಾಯ್ದೆ ಜಾರಿಗೆ ತರಲಾಗಿದೆ. ಆದರೆ, ಸದ್ಯಕ್ಕೆ ಅದಿನ್ನೂ ಜಾರಿಗೆ ಬಂದಿಲ್ಲ.

ಛತ್ತೀಸ್‌ಘಡ, ತೆಲಂಗಾಣ ಹಾಗೂ ಮಧ್ಯ ಪ್ರದೇಶ ವಿಧಾನಸಭೆಗಳಲ್ಲಿ ಶಾಸಕಿಯರ ಸಂಖ್ಯೆ ಕಳೆದ ವಿಧಾನಸಭೆಗಿಂತ ಹೆಚ್ಚಾಗಿದೆ. ಆದರೆ, ರಾಜಸ್ಥಾನದಲ್ಲಿ ಕಡಿಮೆಯಾಗಿದೆ ಎಂದು ಪಿ.ಆರ್.ಎಸ್. ಲೆಜಿಸ್ಲೇಟಿವ್ ರೀಸರ್ಚ್ ವರದಿ ತಿಳಿಸಿದೆ.

ಛತ್ತೀಸ್‌ಘಡದಲ್ಲಿ ಶೇ.21ರಷ್ಟು ಮಹಿಳೆಯರು ಆಯ್ಕೆಯಾಗಿದ್ದಾರೆ. ಪ್ರಸಕ್ತ 19 ಮಹಿಳೆಯರು ಸದನ ಪ್ರವೇಶಿಸಿದ್ದಾರೆ. ಕಳೆದ 2018ರ ಸದನದಲ್ಲಿ ಮಹಿಳೆಯರ ಸಂಖ್ಯೆ 13 ಆಗಿತ್ತು.

ತೆಲಂಗಾಣದಲ್ಲಿ 2018ರಲ್ಲಿ ಆರು ಶಾಸಕಿಯರಿದ್ದರೆ, ಈ ಬಾರಿ 10 ಶಾಸಕಿಯರಿದ್ದಾರೆ. ಈ (2ನೇ ಪುಟಕ್ಕೆ)

ವಿದೇಶ ಪ್ರಯಾಣ-ಶುಭ ಹಾರೈಕೆ



ಶ್ರೀ ಹೆಚ್.ಬಿ. ಪ್ರಕಾಶ್, ನಿವೃತ್ತ ದಂತ ಅಧಿಕಾರಿ ಮತ್ತು ಶ್ರೀಮತಿ ಎಸ್. ಕಸ್ತೂರಿ ಪ್ರಕಾಶ್, ನಿವೃತ್ತ ನರ್ಸಿಂಗ್ ಸೂಪರಿಂಟೆಂಡೆಂಟ್, ಸಿ.ಜಿ. ಆಸ್ಪತ್ರೆ, ದಾವಣಗೆರೆ. ಇವರುಗಳು 20 ದಿನಗಳ ಕಾಲ Australia & NewZeland ದೇಶಗಳಿಗೆ ಪ್ರವಾಸಕ್ಕೆ ತೆರಳುತ್ತಿದ್ದು, ಇವರಿಗೆ ಶುಭ ಹಾರೈಸುವವರು...

- ಮಗಳು-ಅಳಿಯ: ಶ್ರೀಮತಿ ಹೆಚ್.ಪಿ. ಚೈತ್ರ, ಶ್ರೀ ಸಿದ್ದೇಶ್ವರ ಸ್ವಾಮಿ ಎನ್.ಪಿ.
- ಸಾನ್ವಿ ಎನ್.ಪಿ., ದಕ್ಷ ಎನ್.ಪಿ. (ದುಬೈ)
- ಮಗಳು-ಅಳಿಯ: ಶ್ರೀಮತಿ ಹೆಚ್.ಪಿ. ದೀಪ್ತಿ ಮತ್ತು ಶಶಾಂಕ್ ಹಿರೇಮಠ್
- ವಿಹಾನ್ ಹಿರೇಮಠ್ (ಯು.ಎಸ್.ಎ.)
- ಮಗ, ಸೊಸೆ : ಹೆಚ್.ಪಿ. ಅಭಿಷೇಕ್, ಶ್ರೀಮತಿ ಅಶ್ವಿನಿ ಅಭಿಷೇಕ್ (ಲಂಡನ್)
- ಅಕ್ಕ, ಭಾವ : ಶ್ರೀಮತಿ ಹೆಚ್.ಬಿ. ಅನುಸೂಯಮ್ಮ, ಶ್ರೀ ಕೆ.ಎಂ. ಬಸವರಾಜಯ್ಯ, ನಿವೃತ್ತ ಶಿರಸ್ತೇದಾರರು, ಜಿಲ್ಲಾ ನ್ಯಾಯಾಲಯ, ದಾವಣಗೆರೆ.

# ಭಾರತಕ್ಕೊಂದು ಶ್ರೇಷ್ಠ ಸಂವಿಧಾನ ರೂಪಿಸಿದ ಕೀರ್ತಿಯ ಸಿಂಹಪಾಲು ವಕೀಲ ವೃತ್ತಿಗೆ ಸಲ್ಲುತ್ತದೆ

## ಹರಪನಹಳ್ಳಿ : ವಕೀಲರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಧೀಶರಾದ ಎಂ.ಭಾರತಿ

ಹರಪನಹಳ್ಳಿ, ಡಿ.4- ಜಗತ್ತಿನ ಬಹುತೇಕ ತತ್ವ, ಸಿದ್ಧಾಂತ, ಹಕ್ಕು ಮತ್ತು ಕರ್ತವ್ಯಗಳ ಆಳವಾದ ಅಧ್ಯಯನ ನಡೆಸಿ ಸ್ವತಂತ್ರ ಭಾರತಕ್ಕೊಂದು ಶ್ರೇಷ್ಠ ಸಂವಿಧಾನ ರೂಪಿಸಿದ ಕೀರ್ತಿಯ ಸಿಂಹಪಾಲು ವಕೀಲ ವೃತ್ತಿಗೆ ಸಲ್ಲುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಧೀಶರಾದ ಎಂ.ಭಾರತಿ ಹೇಳಿದರು.




ಪಟ್ಟಣದ ವಕೀಲರ ಸಂಘದ ಆವರಣದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ 'ವಕೀಲರ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ವಹಿಸಿದ ನಾಯಕತ್ವ, ಸಮನ್ವಯತೆ ಹಾಗೂ ಸಹಬಾಳ್ವೆ ಅಜರಾಮರ. ಇಂದು ನಾವು ನೋಡುತ್ತಿರುವ ಸರ್ವವ್ಯಾಪಿ, ಸರ್ವ ಕಾನೂನುಗಳ ಮೂಲ ಅಥವಾ ತಾಯಿ ನಮ್ಮ ಸಂವಿಧಾನ. ಈ ಸಂವಿಧಾನವನ್ನು ಕಾಲಕಾಲಕ್ಕೆ ಸೂಕ್ತವಾಗಿ ವ್ಯಾಖ್ಯಾನ ಮಾಡುತ್ತಿರುವುದು ವಕೀಲರೇ. ಸಾಂವಿಧಾನಿಕ ಪೀಠಗಳನ್ನು ಅಲಂಕರಿಸಿ ಸಮರ್ಪಕ ತೀರ್ಪುಗಳನ್ನು ನೀಡುವವರು ಕೂಡ ಮೂಲತಃ ವಕೀಲರೇ ಆಗಿರುತ್ತಾರೆ. ಹಾಗಾಗಿ ವಕೀಲರ ವಿಶೇಷವಾದ ಸ್ಥಾನಮಾನ ಮತ್ತು ಜವಾಬ್ದಾರಿಗಳನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಈ ಕೊಡುಗೆ ಮತ್ತು ಜವಾಬ್ದಾರಿಗಳ ಅವಲೋಕನಕ್ಕಾಗಿ ಮತ್ತು ಭಾರತದ ರಾಜೇಂದ್ರಪ್ರಸಾದ್ ಅವರ ಜನ್ಮದಿನದ ಸವಿನೆನಪಿಗಾಗಿ ಪ್ರತಿ ವರ್ಷ ಡಿಸೆಂಬರ್ 3ನ್ನು ವಕೀಲರ ದಿನವಾಗಿ ಆಚರಿಸಲಾಗುತ್ತದೆ ಎಂದರು.

ಕಿರಿಯ ಸಿವಿಲ್ ನ್ಯಾಯಾಧೀಶರಾದ ಪಕ್ಕಿರವ್ವ ಕೆಳಗೇರಿ ಮಾತನಾಡಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ನಾಯಕತ್ವ ವಹಿಸಿದ್ದ ನಾಯಕರನ್ನು ಗಮನಿಸಿದರೆ, ಬಹುತೇಕರು ವಕೀಲರಾಗಿದ್ದರು ಅಥವಾ ಕಾನೂನಿನ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದರು ಎಂಬುದು ವಿಶೇಷ. ಗಾಂಧೀಜಿ, ಲಾಲಾ ಲಜಪತ್ ರಾಯ್, ಬಾಬು ರಾಜೇಂದ್ರಪ್ರಸಾದ್, ಸರ್ದಾರ್ ವಲ್ಲಭಭಾಯ್ ಪಟೇಲ್, ದಾದಾಭಾಯಿ ನವರೋಜಿ, ಸುರೇಂದ್ರನಾಥ ಬ್ಯಾನರ್ಜಿ, ಮದನಮೋಹನ ಮಾಳವೀಯ, ಮೋತಿಲಾಲ್ ನೆಹರು, ಲೋಕಮಾನ್ಯ ಬಾಲಗಂಗಾಧರ ತಿಲಕ್, ಸಿ. ರಾಜಗೋಪಾಲಾಚಾರಿ, ಸಿ.ಆರ್.ದಾಸ್, ಬುಲಾಭಾಯಿ ದೇಸಾಯಿ, ಅಸಫ್ ಅಲಿ, ಗೋವಿಂದ ವಲ್ಲಭ ಪಂತ್, ಕೈಲಾಶ್ ನಾಥ್ ಕಟ್ಜು ಹೀಗೆ ಹಲವರ ನಿದರ್ಶನ ನೀಡಬಹುದು ಎಂದರು.


ವಕೀಲರ ಸಂಘದ ಅಧ್ಯಕ್ಷ ಎಂ.ಅಜ್ಜಣ್ಣ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಮಾಜದ ಡೊಂಕನ್ನು ತಿದ್ದುವಲ್ಲಿ ವಕೀಲರ ಪಾತ್ರ ಮಹತ್ವದ್ದು. ಸಾಮಾಜಿಕ ಸುಧಾರಣೆಗಳನ್ನು ತರಲು ಮತ್ತು ಪಿಡುಗುಗಳನ್ನು ಕೊನೆಗಾಣಿಸಲು ಮಹತ್ವದ ಪಾತ್ರ ವಹಿಸಬೇಕಾಗುತ್ತದೆ. ಕಾಲಕಾಲಕ್ಕೆ ಜನಪರ ಹೋರಾಟ, ಚಳವಳಿಗಳಿಗೆ ನಾಯಕತ್ವ ನೀಡುವುದು ಮಾತ್ರವಲ್ಲದೆ ನ್ಯಾಯಾಲಯಗಳಲ್ಲಿ ದೀನ, ದಲಿತ, ಶೋಷಿತ, ಅಸಂಘಟಿತ ವರ್ಗ ಕ್ಷೇತ್ರಗಳ ಹಕ್ಕುಗಳಿಗಾಗಿ, ಅಭಿವೃದ್ಧಿಗಾಗಿ ನ್ಯಾಯಯುತ ಹೋರಾಟ ಮಾಡಬೇಕಾದದ್ದು ವಕೀಲರೇ. ವಕೀಲರನ್ನು 'ಸಾಮಾಜಿಕ ಇಂಜಿನಿಯರ್‌ಗಳು' ಎಂದೂ ಕರೆಯುವುದುಂಟು. ಏಕೆಂದರೆ ದೇಶದ ಸಮಗ್ರ ಅಭಿವೃದ್ಧಿ, ಮೂಲಭೂತ ಸೌಕರ್ಯಗಳನ್ನು ಜನಮಾನಸಕ್ಕೆ ತಲುಪಿಸುವಂತೆ ಮಾಡುವುದಲ್ಲದೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇತ್ಯಾದಿಗಳಿಂದ ಸಮಾಜವನ್ನು ಮುಕ್ತಗೊಳಿಸಲು ಬಹುಪಾಲು ಹೋರಾಟ ವಕೀಲರದ್ದೇ. ತುರ್ತುಪರಿಸ್ಥಿತಿಯ ಕರಾಳ ದಿನಗಳಲ್ಲಿ ಜನರು ಎಲ್ಲ ಮೂಲಭೂತ ಹಕ್ಕುಗಳನ್ನು ಕಳೆದುಕೊಂಡಾಗ ನ್ಯಾಯಾಲಯದ ಕದ ತಟ್ಟುವಲ್ಲಿ ಹಾಗೂ ಜಾಗೃತಿ ಮೂಡಿಸುವಲ್ಲಿ ವಕೀಲರ ಪಾತ್ರವನ್ನು ಮರೆಯುವಂತಿಲ್ಲ ಎಂದರು.

ಹಿರಿಯ ವಕೀಲರಾದ ಬಿ.ಕೃಷ್ಣಮೂರ್ತಿ ಮಾತನಾಡಿ, ಸದಾ ಅಧ್ಯಯನಶೀಲರಾಗಿ ಇರುವಂಥ ವೃತ್ತಿ ಎಂದರೆ ಅದು ವಕೀಲ ವೃತ್ತಿ. ಪ್ರತಿದಿನ, ಪ್ರತಿಕ್ಷಣ ಹೊಸ ವಿಚಾರ, ವಿಷಯ ಹಾಗೂ ಅನುಭವಗಳನ್ನು ಪಡೆಯುತ್ತಾ ಹೋಗುವ ವೃತ್ತಿ ವಕೀಲ ವೃತ್ತಿಯಾಗಿದೆ. ವೃತ್ತಿಗೆ ಹೊಸದಾಗಿ ಬರುವ ಯುವ ವಕೀಲರುಗಳಿಗೆ ಸೂಕ್ತ ಮಾರ್ಗದರ್ಶನ, ಅವಕಾಶ, ಪ್ರೋತ್ಸಾಹ ನೀಡುವ ಜವಾಬ್ದಾರಿ ಹಿರಿಯರದ್ದಾಗಿದ್ದರೆ, ಗೌರವ, ಶ್ರದ್ಧೆಯಿಂದ ಹಿರಿಯರ ಸಲಹೆ, ಸಹಕಾರಗಳನ್ನು ಪಾಲಿಸುವುದು ಕಿರಿಯರ ಜವಾಬ್ದಾರಿ. ತಮಗೆ ಸಿಕ್ಕಿದ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ವೃತ್ತಿಯಲ್ಲಿ ಬೆಳೆಯುವುದರೊಂದಿಗೆ ಘನತೆ, ಗೌರವ ಸಂಪಾದಿಸುವುದು ಮುಖ್ಯ. ಅಂದಿನಿಂದ ಇಂದಿನವರೆಗೂ ಸಮಾಜಕ್ಕೆ ನಾಯಕತ್ವ ಕೊಡುತ್ತಾ ಬಂದಿರುವ ಕಾನೂನು ಕ್ಷೇತ್ರ ನಿಜಕ್ಕೂ ಮಹತ್ತರವಾದುದು ಎಂದರು.

ಇದೇ ವೇಳೆ ವಕೀಲರಾದ ಬಿ.ಕೃಷ್ಣಮೂರ್ತಿ. ಪಿ.ಜಗದೀಶಗೌಡ, ಚಿಗಟೇರಿ ವೀರಣ್ಣ, ಕೇಶವಮೂರ್ತಿ ಅವರನ್ನು ವಕೀಲರ ಸಂಘದಿಂದ ಸನ್ಮಾನಿಸಲಾಯಿತು.

ಈ ವೇಳೆ ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶಗೌಡ, ಸರ್ಕಾರಿ ಅಭಿಯೋಜಕರಾದ ನಿರ್ಮಲ, ಸಹಾಯಕ ಸರ್ಕಾರಿ ಅಭಿಯೋಜಕ ಮೀನಾಕ್ಷಿ, ವಕೀಲರ ಸಂಘದ ಉಪಾಧ್ಯಕ್ಷರಾದ ಕೆ.ವಿರೂಪಾಕ್ಷಪ್ಪ, ಕಾರ್ಯದರ್ಶಿ ಕೆ.ಆನಂದ, ಜಂಟಿ ಕಾರ್ಯದರ್ಶಿ ಹೂಲೆಪ್ಪ, ವಕೀಲರಾದ ಬಿ. ಹಾಲೇಶ್, ಎಸ್.ಎಂ.ರುದ್ರಮುನಿ ಸ್ವಾಮಿ, ಕೆ.ಪ್ರಕಾಶ, ಬಿ.ಗೋಣಿಬಸಪ್ಪ, ಎಂ.ಮೃತ್ಯುಂಜಯ, ರೇಣುಕಾ ಮೇಟಿ, ಮಲ್ಲಮ್ಮ ಜೆ.ಸೀಮಾ, ರಾಜಪ್ಪ, ಗುಡಿಬಿಂದು ಮಾಧವ, ಕೆ.ನಾಗರಾಜ, ಮುತ್ತಿಗಿ ರೇವಣಸಿದ್ದಪ್ಪ, ಬಿ.ಗೋಣಿಬಸಪ್ಪ, ಜಿಟ್ಟಿನಕಟ್ಟಿ ಮಂಜುನಾಥ ಸೇರಿದಂತೆ ಇತರರು ಇದ್ದರು.

# ಹೊನ್ನಾಳಿ : ಒತ್ತುವರಿಯಾಗಿದ್ದ ಸ್ಮಶಾನ ಜಾಗವನ್ನು ತೆರವುಗೊಳಿಸಿದ ಕಂದಾಯ ಅಧಿಕಾರಿಗಳು



ಹೊನ್ನಾಳಿ, ಡಿ. 4- ಸಾಸ್ವೆಹಳ್ಳಿ ಹೋಬಳಿ ವ್ಯಾಪ್ತಿಯ ಬೀರಗೊಂಡನಹಳ್ಳಿ ಗ್ರಾಮ ಪಂಚಾಯತಿಗೆ ಒಳಪಡುವ ಸದಾಶಿವಪುರ ಗ್ರಾಮದಲ್ಲಿ ಕಳೆದ 11 ವರ್ಷಗಳಿಂದ ಒತ್ತುವರಿಯಾಗಿದ್ದ ಸ್ಮಶಾನ ಜಾಗವನ್ನು ತಹಶೀಲ್ದಾರ್ ಒಳಗೊಂಡ ಅಧಿಕಾರಿಗಳ ತಂಡ ತೆರವುಗೊಳಿಸಿದೆ.

ಈ ಜಾಗದ ಸಮಸ್ಯೆ 11 ವರ್ಷಗಳಾದರೂ ಬಗೆಹರಿಯದ ಕಾರಣ ಗ್ರಾಮದಲ್ಲಿ ಯಾರಾದರೂ ಮೃತರಾದರೆ ಅವರ ಸಂಬಂಧಿಕರು ಮೃತ ದೇಹವನ್ನು ತಮ್ಮ ಜಮೀನುಗಳಲ್ಲಿ ಮತ್ತು ಕೆರೆ-ರಸ್ತೆಯ ಅಕ್ಕಪಕ್ಕದಲ್ಲಿ ಸ್ಮಶಾನ ಹೂಳುತ್ತಿದ್ದರು.

ತಾಲ್ಲೂಕು ಆಡಳಿತ ಈ ಹಿಂದೆಯೇ ಒತ್ತುವರಿಯಾಗಿದ್ದ ಜಾಗವನ್ನು ಗ್ರಾಮಸ್ಥರ ಮನವಿ ಮೇರೆಗೆ ಜಾಗದ ಅಳತೆ ಮಾಡಿಸಿ ಒತ್ತುವರಿ ಮಾಡಿದ್ದ ಜಮೀನುಗಳ ಮಾಲೀಕರಿಗೆ ನೋಟೀಸ್ ಜಾರಿ ಮಾಡಿದ್ದರೂ ಸ್ಮಶಾನದ ಜಾಗವನ್ನು ತೆರವುಗೊಳಿಸದೇ, ಯಾರೇನು ಮಾಡಿಯಾರು ಎಂಬ ಧೋರಣೆಯಲ್ಲಿದ್ದರು ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ.

ಸ್ಮಶಾನಕ್ಕೆ ಮೀಸಲಿರಿಸಿದ್ದ ಜಾಗವನ್ನು ಒತ್ತುವರಿ ಮಾಡಲಾಗಿರುವ ಬಗ್ಗೆ ಸೋಮವಾರ ತಹಶೀಲ್ದಾರ್ ಪಟ್ಟರಾಜೇಗೌಡ ಅವರ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ತಕ್ಷಣವೇ ತಹಶೀಲ್ದಾರ್ ಅವರು ಕಂದಾಯ ಅಧಿಕಾರಿಗಳ ತಂಡವನ್ನು ರಚಿಸಿ, ಒತ್ತುವರಿಯಾಗಿದ್ದ ಜಾಗದ ತೆರವು ಕಾರ್ಯಾಚರಣೆ ನಡೆಸಿ, ಶವಸಂಸ್ಕಾರ ಮಾಡುವ ವ್ಯವಸ್ಥೆಯನ್ನು ಇಂದು ಸಂಜೆಯೊಳಗೆ ಮಾಡಿಸುವಂತೆ ಸೂಚನೆ ನೀಡಿದ್ದರ ಹಿನ್ನೆಲೆಯಲ್ಲಿ ಕಂದಾಯ ಅಧಿಕಾರಿಗಳ ತಂಡದವರು ಒತ್ತುವರಿಯಾಗಿದ್ದ ಜಾಗವನ್ನು ತೆರವುಗೊಳಿಸಿ ಮೃತ ದೇಹದ ಅಂತಿಮ ಸಂಸ್ಕಾರ ಮಾಡಲು ಅನುವು ಮಾಡಿದ ಅಪರೂಪದ ಮಾನವೀಯತೆ, ಘಟನೆ ನಡೆದಿದೆ.

ಅನೇಕ ಬಾರಿ ಜಾಗ ತೆರವುಗೊಳಿಸುವಂತೆ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಒತ್ತಾಯಿಸುತ್ತಲೇ ಬರಲಾಗಿತ್ತು. ಇಂದು (ಸೋಮವಾರ) ಮೃತ ವ್ಯಕ್ತಿ ಭೋವಿ ಜನಾಂಗದ ಬೀರೇಶ್ ಅವರ ಅಂತಿಮ ಸಂಸ್ಕಾರ ಮಾಡಲು ಸ್ಮಶಾನ ಜಾಗದ ಒತ್ತುವರಿ ಸಮಸ್ಯೆಯ ಬಗ್ಗೆ ತಹಶೀಲ್ದಾರ್ ಪಟ್ಟರಾಜೇಗೌಡ ಅವರ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ರಾಜಸ್ವ ನಿರೀಕ್ಷಕ ದಿನೇಶ್ ಬಾಬು ಅವರ ನೇತೃತ್ವದಲ್ಲಿ ತಂಡ ರಚಿಸಿ, ಒತ್ತುವರಿ ಜಾಗ ಅಳತೆ ಮಾಡಿಸಿ ಜೆಸಿಬಿ ಮೂಲಕ ಅಗೆಸಿ ಮೃತರ ಅಂತಿಮ ಸಂಸ್ಕಾರವನ್ನು ಸಂಜೆಯೊಳಗೆ ಮುಗಿಸಲು ಅಧಿಕಾರಿಗಳು, ಕುಟುಂಬ ವರ್ಗದವರೊಂದಿಗೆ ಅಧಿಕಾರಿಗಳು ಸಹಕರಿಸಿದ ಅಪರೂಪದ ಘಟನೆಗೆ ಸಾಕ್ಷಿಯಾಯಿತು.

ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ರಾಜಸ್ವ ನಿರೀಕ್ಷಕ ದಿನೇಶ್ ಬಾಬು, ಗ್ರಾಮದ ಆಡಳಿತಾಧಿಕಾರಿ ಧರ್ಮಪ್ಪ, ಸರ್ವೇಯರ್ ಲೋಕೇಶ್ ನಾಯ್ಕ, ಗ್ರಾ.ಪಂ. ಕಾರ್ಯದರ್ಶಿ ಲೋಕೇಶ್, ಮೃತರ ಕುಟುಂಬ ವರ್ಗದವರು, ಗ್ರಾಮಸ್ಥರು ಹಾಜರಿದ್ದರು.

ತಹಶೀಲ್ದಾರ್ ಮತ್ತವರ ತಂಡದ ಕಾರ್ಯವನ್ನು ಗ್ರಾಮಸ್ಥರು ಶ್ಲಾಘಿಸಿ, ಅಭಿನಂದಿಸಿದ್ದಾರೆ.

# ಆರೋಗ್ಯಕರ ಜೀವನಕ್ಕೆ ಯೋಗ - ಧ್ಯಾನ ಅತ್ಯವಶ್ಯಕ

## ಹೊನ್ನಾಳಿ ಕಾರ್ಯಕ್ರಮದಲ್ಲಿ ಪಂಚಮಸಾಲಿ ಸಮಾಜದ ಹರಿಹರ ಪೀಠದ ಜಗದ್ಗುರು ವಚನಾನಂದ ಶ್ರೀ

ಹೊನ್ನಾಳಿ, ಡಿ.4- ಯೋಗ - ಧ್ಯಾನ - ಪ್ರಾಣಾಯಾಮವನ್ನು ನಿಯಮಿತವಾಗಿ ಮಾಡುವುದರಿಂದ ರೋಗಮುಕ್ತ ಜೀವನ ಮಾಡಬಹುದು ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಹರಿಹರ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಪ್ರತಿಪಾದಿಸಿದರು.



ಎಚ್. ಕಡದಕಟ್ಟೆಯ ಶ್ರೀ ಸಾಯಿ ಗುರುಕುಲ ವಸತಿಯುತ ಸಿಬಿಎಸ್‌ಇ ಶಾಲಾ-ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾಲಾ ವಾರ್ಷಿಕೋತ್ಸವ ಸಂಭ್ರಮ-15ರ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ದೇಶೀಯ ಆಹಾರವನ್ನು ಸೇವಿಸುವುದರ ಮೂಲಕ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದಾಗಿದೆ. ಬೆಳಿಗ್ಗೆ, ಸಂಜೆ ಪ್ರತಿಯೊಬ್ಬರೂ ಬಿಡುವು ಮಾಡಿಕೊಂಡು ಕಾಲ್ನಡಿಗೆ, ಯೋಗಾಸನ, ಧ್ಯಾನ ಮಾಡುವುದರ ಮೂಲಕ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವಂತೆ ಸಲಹೆ ನೀಡಿದರು.

ಪ್ರತಿಯೊಬ್ಬರೂ ಪರಿಸರವನ್ನು ಉಳಿಸಿ, ಬೆಳೆಸುವ ಕೆಲಸ ಮಾಡಬೇಕಾದ ಅನಿವಾರ್ಯತೆ ಬಂದೊದಗಿದೆ ಎಂದು ಕೋವಿಡ್ ಸಂದರ್ಭ ದಲ್ಲಾದ ಸಾವು-ನೋವುಗಳ ಬಗ್ಗೆ ವಿವರಿಸಿದರು.

ಜೀವನದ ನಾಗಾಲೋಟದಲ್ಲಿ ನಂಬರ್ 1 ಆಗಬೇಕೆಂದು ಹುಚ್ಚು ಹಿಡಿದವರಂತೆ ಓಡುತ್ತಿದ್ದಾರೆ. ಇದು ಸಲ್ಲ, ಈ ಮನಸ್ಥಿತಿಯ ಬದಲಾಗಿ, ನಾನು ಗೆಲ್ಲುವುದರ ಜೊತೆಗೆ ನಾವೆಲ್ಲರೂ ಗೆಲ್ಲಬೇಕೆಂಬ ಮನೋಭಾವನೆಯನ್ನು ಮಕ್ಕಳಲ್ಲಿ ಪೋಷಕರು, ಶಿಕ್ಷಕರು ಬೆಳೆಸಬೇಕು. ಆಗ ಸ್ವಾಸ್ಥ್ಯ ಸಮಾಜವನ್ನು ನಿರ್ಮಾಣ ಮಾಡಬಹುದೆಂದು ಕಿವಿಮಾತು ಹೇಳಿದರು.

ಮಕ್ಕಳಲ್ಲಿ ದೈವ ಭಕ್ತಿಯನ್ನು ಬೆಳೆಸುವುದರ ಜೊತೆಗೆ ನಮ್ಮ ದೇಶ-ನಮ್ಮ ಸಂಸ್ಕೃತಿ-ಆಚಾರ-ವಿಚಾರಗಳನ್ನು ಪ್ರೀತಿಸುವುದನ್ನು ಕಲಿಸಬೇಕಿದೆ.ಪ್ರತಿಭಾ ಪಲಾಯನವಾಗುತ್ತಿದ್ದು, ನಮ್ಮ ಪ್ರತಿಭೆಗಳು ನಮ್ಮ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಂತಾಗಬೇಕೆಂದು ದೃಷ್ಟಾಂತಗಳ ಮೂಲಕ ಮನ ಮುಟ್ಟುವಂತೆ ಹೇಳಿದರು.

ಸಂಸ್ಥೆಯ ಅಧ್ಯಕ್ಷರೂ ಆಗಿರುವ ಶಾಸಕ ಡಿ.ಜಿ.ಶಾಂತನಗೌಡ ಮಾತನಾಡಿ, ತಮ್ಮ ಜೀವವನ್ನು ಒತ್ತೆಯಿಟ್ಟು ನಮ್ಮ ದೇಶ ಮತ್ತು ನಮ್ಮೆಲ್ಲರನ್ನೂ ರಕ್ಷಣೆ ಮಾಡುತ್ತಿರುವ ವೀರ ಯೋಧರ ನಿಧಿಯನ್ನು ಪ್ರಾರಂಭಿಸಿ, ಸಿಹಿ ತಿನಿಸುಗಳ ಬದಲಾಗಿ ಹಣವನ್ನು ಸಂಗ್ರಹಿಸಿ ಸೈನಿಕರ ಕಲ್ಯಾಣಕ್ಕಾಗಿ ಕಳುಹಿಸಿಕೊಡುವ ಯೋಜನೆ ಹಾಕಿಕೊಳ್ಳಲಾಗಿದ್ದು, ಎಲ್ಲಾ ಪೋಷಕರು ಸಹಕರಿಸುವಂತೆ ವಿನಂತಿಸಿದರು.

ಶಿಕ್ಷಕರು, ಪೋಷಕರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ವಿದ್ಯಾರ್ಥಿಗಳ ಶೈಕ್ಷಣಿಕ-ದೈಹಿಕ-ಮಾನಸಿಕ ಬೆಳವಣಿಗೆಯ ಬಗ್ಗೆ ವಿಶೇಷ ಗಮನಹರಿಸಲು ಸಲಹೆ ನೀಡಿದರು.

ಪೋಷಕರು ತಮ್ಮ ಮಕ್ಕಳು ಕೇವಲ ಅಂಕ ಗಳಿಕೆಯ ಬಗ್ಗೆ ಗಮನಹರಿಸದೇ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುವತ್ತ ಗಮನಹರಿಸಬೇಕು.

ಸಂಸ್ಥೆಯ ಪ್ರಾಂಶುಪಾಲ ಎಚ್. ಎಂ.ದರ್ಶನ್ ವಾರ್ಷಿಕ ವರದಿ ವಾಚನ ಮಾಡಿದರು. ಶಿಕ್ಷಣ ಸಂಯೋಜಕ ಎ.ಜಿ. ಹರೀಶ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಸ್ಥೆಯ ಉಪಾಧ್ಯಕ್ಷ ಶಂಕ್ರಪ್ಪಗೌಡ್ರು, ಕಾರ್ಯದರ್ಶಿ ಸೌಮ್ಯ ಪ್ರದೀಪ್, ಸಹಕಾರ್ಯದರ್ಶಿ ಎಚ್. ಬಿ.ಅರುಣ್, ಖಜಾಂಚಿ ಡಿ.ಜಿ.ಸೋಮಪ್ಪ, ಟ್ರಸ್ಟಿಗಳಾದ ಗೌರಮ್ಮ, ವಾಣಿ ಸುರೇಂದ್ರಗೌಡ, ಶಾಲಾಭಿವೃದ್ಧಿ ಸದಸ್ಯರಾದ ಡಿ.ಎಸ್.ಅರುಣ್‌ಕುಮಾರ್, ಡಿ.ಎಸ್.ಪ್ರದೀಪ್ ಗೌಡ, ಡಿ.ಎಸ್. ಸುರೇಂದ್ರಗೌಡ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅಧಿವೇಶನ ವಿಳಂಬಕ್ಕೆ ಶಾಸಕರ ಆಕ್ಷೇಪ

ಬೆಳಗಾವಿ, ಡಿ. 4 - ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಅಧಿವೇಶನದ ಆರಂಭ ಒಂದು ಗಂಟೆ ವಿಳಂಬವಾಗಿದ್ದಕ್ಕೆ ಬಿಜೆಪಿ ಹಾಗೂ ಕಾಂಗ್ರೆಸ್ ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



11 ಗಂಟೆಗೆ ಅಧಿವೇಶನ ಆರಂಭವಾಗಬೇಕಿತ್ತು. ಆದರೆ, ಗಂಟೆ ವಿಳಂಬವಾಗಿ, ಮಧ್ಯಾಹ್ನದ ನಂತರ ಕಲಾಪಕ್ಕೆ ಚಾಲನೆ ದೊರೆಯಿತು. ಈ ಬಗ್ಗೆ ಬಿಜೆಪಿ ಹಿರಿಯ ಶಾಸಕ ಸುರೇಶ್ ಕುಮಾರ್ ಹಾಗೂ ಕಾಂಗ್ರೆಸ್ ಶಾಸಕ ಬಸವರಾಜ ರಾಯರೆಡ್ಡಿ ಆಕ್ಷೇಪಿಸಿದರು.

ಶಾಸಕರಿಗೆ ಯಾವುದೇ ಮಾಹಿತಿ ನೀಡದೇ ಕಾಯುವಂತೆ ಮಾಡಲಾಗಿದೆ. ಇದರಿಂದ ರಾಜ್ಯಕ್ಕೆ ತಪ್ಪು ಸಂದೇಶ ಹೋಗುತ್ತದೆ. ಇದು ನಿಯಮ ಹಾಗೂ ಪ್ರಕ್ರಿಯೆಗಳ ಉಲ್ಲಂಘನೆಯೂ ಆಗಿದೆ ಎಂದು ಸುರೇಶ್ ಕುಮಾರ್ ಹೇಳಿದರು. ರಾಯರೆಡ್ಡಿ ಮಾತನಾಡಿ, ಬೆಳಗಾವಿಯಲ್ಲಿ ಸದನ ನಡೆಯುವಾಗಲೆಲ್ಲಾ ಸಮರ್ಪಕವಾಗಿ ನಡೆಯುವುದಿಲ್ಲ ಎಂದು ಈಗಾಗಲೇ ಸದನದ ಹೊರಗೆ ಭಾವನೆ ಇದೆ. ಈ ರೀತಿ ವಿಳಂಬವಾದಾಗ ಅದು ಮಾಧ್ಯಮಗಳಲ್ಲಿ ಪ್ರಕಟವಾಗುತ್ತದೆ ಎಂದರು.

ಇದರಿಂದ ಉತ್ತರ ಕರ್ನಾಟಕಕ್ಕೂ ಕೆಟ್ಟ ಹೆಸರು ಬರುತ್ತದೆ. ಯಾರು ಬರಲಿ, ಬರದೇ ಇರಲಿ, ಸಮಯಕ್ಕೆ ಸರಿಯಾಗಿ ಕಲಾಪ ಆರಂಭವಾಗಬೇಕು. ಯಾವುದಾದರೂ ಕಾರಣಕ್ಕೆ ವಿಳಂಬವಾಗುವುದಾದರೆ, ಸದನಕ್ಕೆ ಮಾಹಿತಿ ನೀಡಬೇಕು ಎಂದವರು ಆಗ್ರಹಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಕೆಲ ಕಾರಣಗಳು ಹಾಗೂ ಪರಿಸ್ಥಿತಿಗಳಿಂದಾಗಿ ಕೆಲವೊಮ್ಮೆ ವಿಳಂಬವಾಗುತ್ತದೆ. ಎಲ್ಲಾ ಶಾಸಕರು ಸಹಕರಿಸಬೇಕು ಎಂದು ಹೇಳಿದರು.

## ಮಹಿಳೆಯರ ಆಯ್ಕೆ ಪ್ರಮಾಣ ಕಡಿಮೆ


**(1ನೇ ಪುಟದಿಂದ)** ಬಾರಿ ಒಟ್ಟು ಶಾಸಕಿಯರ ಪ್ರಮಾಣ ಶೇ.8 ರಷ್ಟಿದೆ. ರಾಜಸ್ಥಾನದಲ್ಲಿ 2018 ರಲ್ಲಿ 24 ಶಾಸಕಿಯರಿದ್ದರು. ಈ ಬಾರಿ 20ಕ್ಕೆ ಇಳಿಕೆಯಾಗಿದೆ.

ಮಧ್ಯ ಪ್ರದೇಶದಲ್ಲಿ 2018 ರಲ್ಲಿ 21 ಶಾಸಕಿಯರಿದ್ದರು. ಈ ಬಾರಿ ಶಾಸಕಿಯರ ಸಂಖ್ಯೆ 27ಕ್ಕೆ ಏರಿಕೆಯಾಗಿದೆ.

## ತ್ರಿಫೇಸ್ ವಿದ್ಯುತ್

**(1ನೇ ಪುಟದಿಂದ)** ಸಚಿವ ಪ್ರಿಯಾಂಕ್ ಖರ್ಗೆ, ಕೆಲವು ಸಮಯಗಳಲ್ಲಿ ತಾಂತ್ರಿಕ ಕಾರಣಗಳಿಂದ ವಿದ್ಯುತ್ ಲಭ್ಯತೆ ಮತ್ತು ಉತ್ಪಾದನೆ ಕುಂಠಿತಗೊಂಡು ಸೀಮಿತ ಪ್ರಮಾಣದಲ್ಲಿ ವಿದ್ಯುತ್ ಸರಬರಾಜು ಮಾಡಿರುವುದಾಗಿ ಹೇಳಿದರು.

## ನಗರದ ಶ್ರೀ ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿಂದು ಜ್ಞಾನಯಜ್ಞ ಸಪ್ತಾಹ




ಎಸ್.ಎಸ್.ಲೇ-ಔಟ್ 'ಬಿ' ಬ್ಲಾಕ್, ರಿಂಗ್ ರಸ್ತೆಯಲ್ಲಿರುವ ಶ್ರೀ ಸ.ಸ. ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಶ್ರೀ ಗೌರಮ್ಮಾಜಿ ಮಹಾರಾಜರ 28ನೇ ಜ್ಞಾನಯಜ್ಞ ಸಪ್ತಾಹ ಮತ್ತು ಕಾರ್ತಿಕ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಇಂದು ಮಾತೋಶ್ರೀಯವರ ಕರ್ತ ಗದ್ದುಗೆಗೆ ಮಹಾಭಿಷೇಕ ನೆರವೇರುವುದು. ಬೆಳಿಗ್ಗೆ 10 ಗಂಟೆಯಿಂದ ವೀಣಾ ಸ್ಥಾಪನೆಯೊಂದಿಗೆ ಸಪ್ತಾಹ ಪ್ರಾರಂಭವಾಗುತ್ತದೆ. ದಾಸಭೋದ ಗ್ರಂಥ ಪಠಣ, ಭಜನೆ ನಂತರ ಸಂಜೆ ಸಂಕೀರ್ತನೆ ನಡೆಯಲಿದೆ.

ನಾಳೆ ಬುಧವಾರ ಬೆಳಿಗ್ಗೆ ಕಾಕಡಾರತಿ, ಪೂಜೆ, ಭಜನೆ ನಂತರ ಸಂಜೆ 4 ಗಂಟೆಯಿಂದ ಪೂಜ್ಯ ಮಾತೋಶ್ರಿ ಗೌರಮ್ಮಾಜಿ ಉತ್ಸವ ಭಾವಚಿತ್ರದ ಅಲಂಕೃತ ಪಾಲಕಿಯ ಮೆರವಣಿಗೆ ಜರುಗಲಿದೆ. ರಾತ್ರಿ 10 ಗಂಟೆಗೆ ಕಾರ್ತಿಕ ದೀಪಗಳನ್ನು ಬೆಳಗಿಸಿ, ಜಾಗರಣೆ ಆಚರಿಸಲಾಗುವುದು.

7ರಂದು ಬೆಳಗಿನ ಪೂಜಾದಿ ಕಾರ್ಯಕ್ರಮಗಳ ನಂತರ ಮಧ್ಯಾಹ್ನ 12 ಗಂಟೆಗೆ ಮಾತೋಶ್ರೀಯವರ 'ಪುಣ್ಯಸ್ಮರಣೆ' ಮತ್ತು ಪುಷ್ಪವೃಷ್ಟಿಗೈಯ್ಯುವ ಕಾರ್ಯಕ್ರಮವಿದೆ.

## ನಾಡಿದ್ದು ನಗರದ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಕಾರ್ತಿಕೋತ್ಸವ



ದಾವಣಗೆರೆ,ಡಿ.4- ನಗರದ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಇದೇ ದಿನಾಂಕ 7ರ ಗುರುವಾರ ಸಂಜೆ 6 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ. ಕಾರ್ತಿಕೋತ್ಸವದ ಅಂಗವಾಗಿ ಅಂದು ಬೆಳಿಗ್ಗೆ 6ಕ್ಕೆ ಕಾಕಡಾರತಿ, ಬೆಳಿಗ್ಗೆ 8ಕ್ಕೆ ಆರತಿ, ಬೆಳಿಗ್ಗೆ 8.30ರಿಂದ ಲಲಿತ ಸಹಸ್ರ ನಾಮಾವಳಿ, ವಿಷ್ಣು ಸಹಸ್ರ ನಾಮಾವಳಿ, ಬೆಳಿಗ್ಗೆ 10.30ರಿಂದ ಸಾಯಿ ಭಜನಾಮೃತ - ಶ್ರೀ ಶಿರಡಿ ಸಾಯಿಬಾಬಾ ಭಜನಾ ಮಂಡಳಿಯಿಂದ ಸಾಯಿ ಭಜನೆ, ಮಧ್ಯಾಹ್ನ 12ಕ್ಕೆ ಆರತಿ, ಪ್ರಸಾದ ಕಾರ್ಯಕ್ರಮ, ಸಂಜೆ 6 ಗಂಟೆಗೆ ದೂಪಾರತಿ, ಪ್ರಸಾದ ವಿನಿಯೋಗ, ದುನಿ ಪೂಜೆ, ರಾತ್ರಿ 9ಕ್ಕೆ ಶೇಜಾರತಿ ಕಾರ್ಯಕ್ರಮಗಳು ಜರುಗಲಿವೆ. ಶ್ರೀ ಸಾಯಿ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಕಾರ್ಯಾಧ್ಯಕ್ಷ ಎಸ್.ಎಸ್. ಗಣೇಶ್, ಉಪಾಧ್ಯಕ್ಷ ಅಥಣಿ ವೀರಣ್ಣ ಸೇರಿದಂತೆ ಗಣ್ಯರು ಈ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿರುವರು.

## ಪರೀಕ್ಷೆ ಮುಂದೂಡಿಕೆ

**(1ನೇ ಪುಟದಿಂದ)** ವಿಪಕ್ಷಗಳ ಸದಸ್ಯರು ಆಗ್ರಹಿಸಿದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಂಡಿರುವುದಾಗಿ ಅವರು ಹೇಳಿದ್ದಾರೆ.

## ಪ್ರಕರಣಗಳು ದಾಖಲು


**(1ನೇ ಪುಟದಿಂದ)** ಪ್ರತಿ ಲಕ್ಷಕ್ಕೆ ಸರಾಸರಿ 144.4ರಷ್ಟಾಗಿದೆ. ಸರಾಸರಿ ಆಧಾರದ ಮೇಲೆ ದೆಹಲಿಯಲ್ಲೇ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಹರಿಯಾಣ (118.7), ತೆಲಂಗಾಣ (117), ರಾಜಸ್ಥಾನ (115.1), ಒಡಿಶಾ (103), ಆಂಧ್ರ ಪ್ರದೇಶ (96.2) ನಂತರದ ಸ್ಥಾನಗಳಲ್ಲಿವೆ.

ಅಪರಾಧ ಪ್ರಕರಣಗಳನ್ನು ದಾಖಲಿಸುವುದು ಹೆಚ್ಚಾಗಿದೆ ಎಂದಾಕ್ಷಣ ಅದು ಪೊಲೀಸರ ಅದಕ್ಷತೆ ತೋರಿಸುತ್ತದೆ ಎಂದು ಭಾವಿಸುವುದು ತಪ್ಪಾಗುತ್ತದೆ ಎಂದು ಎನ್.ಸಿ.ಆರ್.ಬಿ. ತಿಳಿಸಿದೆ.

ಅಪರಾಧ ಹೆಚ್ಚಾಗುವುದಕ್ಕೂ ಹಾಗೂ ಅಪರಾಧ ಪ್ರಕರಣಗಳನ್ನು ಪೊಲೀಸರಲ್ಲಿ ದಾಖಲಿಸುವುದು ಹೆಚ್ಚಾಗುವುದಕ್ಕೂ ವ್ಯತ್ಯಾಸ ಇದೆ. ಪೊಲೀಸರು ನಾಗರಿಕ ಸ್ನೇಹಿ ಕ್ರಮಗಳನ್ನು ತೆಗೆದುಕೊಂಡ ಸಂದರ್ಭದಲ್ಲಿ, ಜನರು ಅಪರಾಧಗಳ ಬಗ್ಗೆ ಹೆಚ್ಚು ಮಾಹಿತಿ ನೀಡುತ್ತಾರೆ. ಇ-ಎಫ್.ಐ.ಆರ್. ಹಾಗೂ ಮಹಿಳಾ ಸಹಾಯವಾಣಿಗಳಂತಹ ಕ್ರಮಗಳಿಂದ ಪೊಲೀಸರಲ್ಲಿ ಪ್ರಕರಣ ದಾಖಲಿಸುವುದು ಹೆಚ್ಚಾಗುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

## ಆರ್.ಎಂ. ಉಮಾದೇವಿ ಶಂಕ್ರಿಮಠ ನಿಧನ



ದಾವಣಗೆರೆ ಸಿಟಿ ವಿನೋಬನಗರ, 2ನೇ ಮೇನ್, 7ನೇ ಕ್ರಾಸ್ ವಾಸಿ ಲಿಂ. ಆರ್.ಎಂ. ಕೊಟ್ರಯ್ಯ ಶಂಕ್ರಿಮಠ ಇವರ ಧರ್ಮಪತ್ನಿ ಶ್ರೀಮತಿ ಆರ್.ಎಂ. ಉಮಾದೇವಿ (75) ಇವರು ದಿನಾಂಕ 04.12.2023ರ ಸೋಮವಾರ ಸಂಜೆ 5.15ಕ್ಕೆ ನಿಧನರಾದರು. ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05.12.2023ರ ಮಂಗಳವಾರ ಮಧ್ಯಾಹ್ನ 1 ಕ್ಕೆ ನಗರದ ಬೂದಿಹಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಬಿಜೆಪಿಗೆ ಮುನ್ನಡೆ ಷೇರುಪೇಟೆಯಲ್ಲಿ ಶೇ.2ರ ಏರಿಕೆ

**(1ನೇ ಪುಟದಿಂದ)** ಸಾರ್ವಕಾಲಿಕ ದಾಖಲೆಯಾದ 20,686.80ರ ಹಂತಕ್ಕೆ ತಲುಪಿದೆ. ಐ.ಸಿ.ಐ.ಸಿ.ಐ. ಬ್ಯಾಂಕ್ ಷೇರುಗಳ ಮೌಲ್ಯ ಶೇ.4.68 ಹಾಗೂ ಎಸ್.ಬಿ.ಐ. ಷೇರುಗಳ ಮೌಲ್ಯ 4.68 ಏರಿಕೆ ಕಂಡಿದೆ. ಲಾರ್ಸನ್ ಅಂಡ್ ಟರ್ಬೋ, ಕೋಟಕ್ ಮಹಿಂದ್ರ ಬ್ಯಾಂಕ್ ಹೆಚ್.ಡಿ.ಎಫ್.ಸಿ. ಷೇರುಗಳ ಬೆಲೆಯೂ ಏರಿಕೆಯಾಗಿದೆ. ಆದರೆ, ವಿಪ್ರೋ ಹಾಗೂ ಟಾಟಾ ಮೋಟರ್ಸ್ ಮಾತ್ರ ಕುಸಿತ ಕಂಡಿವೆ.

## 15ನೇ ಪುಣ್ಯಸ್ಮರಣೆ



ಶ್ರೀಮತಿ ಮಟ್ಟಿಕಲ್ ಹನುಮಮ್ಮ ಬಿ. ರುದ್ರಪ್ಪ

*ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳು ಕಳೆದಿವೆ. ಸದಾ ತಮ್ಮ ನೆನಪಿನಲ್ಲಿ ಹಾಗೂ ತಾವು ಹಾಕಿಕೊಟ್ಟ ಹಾದಿಯಲ್ಲೇ ನಡೆಯುತ್ತಿರುವ,*

ಮಕ್ಕಳು : **ಪ್ರದೀಪ್ ಕುಮಾರ್, ರಮೇಶ್, ಶಿವಮ್ಮ (ಶೋಭ),**
ಅಳಿಯಂದಿರಾದ : **ಎಂ. ವೆಂಕೋಬಪ್ಪ**
ಮೊಮ್ಮಕ್ಕಳಾದ : **ರಶ್ಮಿ, ಅಭಿಷೇಕ್, ಪೂಜಾ ಸುಹಾಸ್, ಸುಮಂತ, ಸುಬ್ರಹ್ಮಣ್ಯ, ತಿಪ್ಪೇಸ್ವಾಮಿ,**
14ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ.

# ದುಶ್ಚಟಗಳ ಜೊತೆಗೆ ಮೊಬೈಲ್ ಬಳಕೆಯಿಂದಲೂ ದೂರವಿರಿ

## ಜಿಗಳಿಯ ಎನ್ನೆಸ್ಸೆಸ್ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಡಾ. ಅಪೂರ್ವ ಕಿವಿಮಾತು

ಮಲೇಬೆನ್ನೂರು, ಡಿ.4- ವಿದ್ಯಾರ್ಥಿಗಳು ದುಶ್ಚಟಗಳ ಜೊತೆಗೆ ಮೊಬೈಲ್ ಬಳಕೆಯಿಂದಲೂ ದೂರವಿದ್ದಷ್ಟು ಒಳ್ಳೆಯದೆಂದು ಮಲೇಬೆನ್ನೂರಿನ ಅಪೂರ್ವ ಆಸ್ಪತ್ರೆಯ ವೈದ್ಯ ಡಾ. ಅಪೂರ್ವ ಅಭಿಪ್ರಾಯಪಟ್ಟರು.



ಅವರು, ಸೋಮವಾರ ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹರಿಹರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿರುವ ಎನ್ನೆಸ್ಸೆಸ್ ಶಿಬಿರದ 3ನೇ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ದುಶ್ಚಟಗಳಾದ ಮದ್ಯಪಾನ, ಗುಟ್ಕಾ, ತಂಬಾಕು, ಸಿಗರೇಟ್ ಇವುಗಳ ಕಡೆಗೆ ತಿರುಗಿಯೂ ನೋಡಬೇಡಿ. ಮೊಬೈಲ್ ಬಳಕೆಗೆ ಮಿತಿ ಇರಲಿ. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಬಳಸಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜನ್ಮನೀಡಿದ ತಂದೆ-ತಾಯಿಗಳಿಗೆ, ಶಿಕ್ಷಣ ಕಲಿಸಿದ ಗುರುಗಳಿಗೆ ಖುಷಿ ಆಗುವಂತಹ ಒಳ್ಳೆಯ ಕೆಲಸಗಳನ್ನು ಮಾಡುವುದರ ಜೊತೆಗೆ ಚೆನ್ನಾಗಿ ಓದಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ಗ್ರಾಮದ ವೈದ್ಯ ಹಾಗೂ ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಡಾ. ಎನ್.ನಾಗರಾಜ್ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಓದಿದ ಮಕ್ಕಳಲ್ಲಿ ವಿಶೇಷ ಗುಣಗಳಿರುತ್ತವೆ. ತಂದೆ-ತಾಯಿಗಳು ಕಷ್ಟಪಟ್ಟು ನಿಮ್ಮನ್ನು ಚೆನ್ನಾಗಿ ಓದಿಸುತ್ತಾರೆ. ಆದರೆ, ಅನೇಕರು ಕೆಲಸ ಸಿಕ್ಕನಂತೆ ತಂದೆ-ತಾಯಿಗಳನ್ನು ಊರಿನಲ್ಲೇ ಬಿಟ್ಟು ನಗರ ಅಥವಾ ವಿದೇಶಗಳಿಗೆ ಹೋಗುತ್ತಾರೆ. ತಂದೆ-ತಾಯಿಗಳನ್ನು ನಿಮ್ಮನ್ನು ಓದಿಸಿದ ತಪ್ಪಿಗಾಗಿ ಅನಾಥರಂತೆ ಬದುಕುವಂತೆ ಮಾಡಬೇಡಿ ಎಂದು ವಿದ್ಯಾರ್ಥಿಗಳನ್ನು ಎಚ್ಚರಿಸಿದರು.

ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಗೌರಮ್ಮ ಮಾತನಾಡಿ, ದೇಶದ ಬಗೆಗೆ ಕಾಳಜಿ ಮೂಡಿಸುವ ವಿಶೇಷ ಶಿಬಿರ ಇದಾಗಿದೆ ಎಂದರು.

ಪ್ರಗತಿಪರ ರೈತ ಹೊಳೆಸಿರಿಗೆರೆಯ ಕುಂದೂರು ಮಂಜಪ್ಪ ಮಾತನಾಡಿ, ಏನೇ 3ಜಿ, 4ಜಿ, 5ಜಿ ಬಂದರೂ ಹಸಿದವರಿಗೆ ಗಂಜಿ ಕೊಡುವವರು ರೈತರು ಮಾತ್ರ. ಅಂತಹ ರೈತರನ್ನು ಗೌರವದಿಂದ ಕಾಣುವ ಕೆಲಸ ಆಗಬೇಕು. ನಾಟಕ ಮಾಡಿ, ಕಣ್ಣೀರನ್ನು ತರಿಸಬಹುದು. ಆದರೆ, ಬೆವರು ಕಷ್ಟಪಟ್ಟರೆ ಮಾತ್ರ ಬರುತ್ತದೆ. ಅಂತಹ ಶ್ರಮಿಕ ವರ್ಗಗಳ ಮತ್ತು ದೇಶ ಕಾಯುವ ಸೈನಿಕರ ಕಷ್ಟವನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕೆಂದರು.

ಪಿಎಸಿಎಸ್ ನಿರ್ದೇಶಕ ಸಿ.ಎನ್. ಪರಮೇಶ್ವರಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ಎಕ್ಕೆಗೊಂದಿ ರುದ್ರಗೌಡ, ಜಿ.ಪಿ. ಹನುಮಗೌಡ, ಕುಂಬಳೂರಿನ ಕೆ.ಕಾಮರಾಜ್ ಮಾತನಾಡಿದರು.

ಜಿಗಳಿ ಪಿಎಸಿಎಸ್ ಅಧ್ಯಕ್ಷ ಬಿ.ಎಸ್. ಕುಬೇರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಿ.ಎಂ.ದೇವೇಂದ್ರಪ್ಪ, ಎಂ.ವಿ.ನಾಗರಾಜ್, ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್, ಬಾಲಕೇಂದ್ರದ ಅಧ್ಯಕ್ಷ ಜಿ.ಆರ್.ಚಂದ್ರಪ್ಪ, ಶಿಕ್ಷಕರಾದ ದೊಡ್ಮನಿ ಶಿವಕುಮಾರ್, ಜಿ.ಆರ್. ನಾಗರಾಜ್, ಬಿ.ರವೀಂದ್ರಚಾರಿ, ಬಿ. ಸೋಮಶೇಖರಚಾರಿ, ಬೆಣ್ಣೇರ ನಂದ್ಯೆಪ್ಪ, ಕೆ.ಸಿ.ಬಸವರಾಜ್, ಪತ್ರಕರ್ತ ಪ್ರಕಾಶ್, ಶಿಬಿರದ ಕಾರ್ಯಕ್ರಮಾಧಿಕಾರಿಗಳಾದ ಡಾ. ಬಿ.ಕೆ.ಮಂಜುನಾಥ್, ಡಾ. ಸಿ.ಚಂದ್ರಶೇಖರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**☞ ವಕೀಲರ ಮಸೂದೆಗೆ ಲೋಕಸಭೆ ಒಪ್ಪಿಗೆ**

ನವದೆಹಲಿ : ವಕೀಲ ವೃತ್ತಿಯನ್ನು ಒಂದೇ ನಿಯಂತ್ರಣಕ್ಕೆ ಒಳಪಡಿಸುವ ಮಸೂದೆಗೆ ಲೋಕಸಭೆ ಅಂಗೀಕರಿಸಿದೆ. ರಾಜ್ಯಸಭೆ ಕಳೆದ ಮುಂಗಾರು ಅಧಿವೇಶನದಲ್ಲಿ ಮಸೂದೆಗೆ ಒಪ್ಪಿಗೆ ನೀಡಿತ್ತು. ವಕೀಲರ (ತಿದ್ದುಪಡಿ) ಮಸೂದೆ 2023ರ ಮೂಲಕ ಗ್ರಾಹಕರನ್ನು ವಕೀಲರಿಗೆ ಕಮೀಷನ್ ಆಧಾರದ ಮೇಲೆ ತರುವ ವ್ಯಕ್ತಿಗಳನ್ನು ತಡೆಯುವ ಉದ್ದೇಶವೂ ಇದೆ.

**☞ ಮಿಜೋರಾಂನಲ್ಲಿ ಝುಡ್.ಪಿ.ಎಂ. ಪಕ್ಷಕ್ಕೆ ಜಯ**

ಐಜಾವ್ಲ್ : ಮಿಜೋರಾಂನ 40 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಮಿಜೋರಾಮ್ ಪೀಪಲ್ಸ್ ಮೂವ್‌ಮೆಂಟ್ (ಝುಡ್.ಪಿ.ಎಂ.) 27 ಸ್ಥಾನ ಗೆಲ್ಲುವ ಮೂಲಕ ಅಧಿಕಾರಕ್ಕೆ ಬಂದಿದೆ. ಇದರಿಂದಾಗಿ ಮಿಜೋ ನ್ಯಾಷನಲ್ ಫ್ರಂಟ್ (ಎಂ.ಎನ್.ಎಫ್.) ಕೇವಲ 10 ಸ್ಥಾನ ಪಡೆಯಲು ಮಾತ್ರ ಸಾಧ್ಯವಾಗಿದೆ. ಬಿಜೆಪಿ ಎರಡು ಹಾಗೂ ಕಾಂಗ್ರೆಸ್ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿದೆ.

**☞ ಚಂಡಮಾರುತದಿಂದ ಚೆನ್ನೈ ಸುತ್ತಲಿನ ಪ್ರದೇಶ ತತ್ತರ**

ಚೆನ್ನೈ : ಚಂಡಮಾರುತದ ಕಾರಣದಿಂದಾಗಿ ತಮಿಳುನಾಡಿನ ಚೆನ್ನೈ ಹಾಗೂ ಸುತ್ತಲಿನ ಪ್ರದೇಶದಲ್ಲಿ ಧಾರಾಕಾರ ಮಳೆಯಾಗಿದೆ. ನಗರದ ಹಲವು ಭಾಗ ಜಲಾವೃತಗೊಂಡಿದೆ. ಇದರಿಂದಾಗಿ ವಿಮಾನ ಹಾಗೂ ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಮಳೆ ಸಂಬಂಧದ ಅನಾಹುತಗಳಲ್ಲಿ ಐವರು ಸಾವನ್ನಪ್ಪಿದ್ದಾರೆ. ಮುಳುಗಡೆಯಾದ ರಸ್ತೆಯಲ್ಲಿ ಮೊಸಳೆಯೊಂದು ಕಂಡು ಬಂದ ದೃಶ್ಯ ವೈರಲ್ ಆಗಿದೆ.

**☞ ನೌಕಾ ದಳದಲ್ಲಿ ಮಹಿಳಾ ಶಕ್ತಿ ಹೆಚ್ಚಳ : ಮೋದಿ**

ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರದ ಸಿಂಧುದುರ್ಗದಲ್ಲಿ ಆಯೋಜಿಸಲಾಗಿದ್ದ ನೌಕಾ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ನೌಕಾ ದಳದಲ್ಲಿ ಮಹಿಳೆಯರ ಶಕ್ತಿ ಹೆಚ್ಚಿಸಲು ಸರ್ಕಾರ ಬದ್ಧವಾಗಿದೆ ಎಂದವರು ಹೇಳಿದ್ದಾರೆ.

**☞ ಮಣಿಪುರದಲ್ಲಿ ಉಗ್ರ ಸಂಘಟನೆಗಳ ನಡುವೆ ಘರ್ಷಣೆ; 13 ಸಾವು**

ಇಂಫಾಲ್ : ಮಣಿಪುರದ ಟೆಂಗ್ನೌಪಲ್ ಜಿಲ್ಲೆಯಲ್ಲಿ ಎರಡು ಉಗ್ರವಾದಿ ಗುಂಪುಗಳ ನಡುವೆ ಗುಂಡಿನ ಘರ್ಷಣೆ ನಡೆದು 13 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಲೈತು ಎಂಬ ಹಳ್ಳಿಯಲ್ಲಿ ಈ ಘಟನೆ ನಡೆದಿದೆ.

**☞ ನೌಕಾ ದಳದ ಶ್ರೇಣಿಗಳ ಹೆಸರು ಭಾರತೀಕರಣ**

ಮಾಲ್ವಾನ್ : ನೌಕಾ ದಳದ ಶ್ರೇಣಿಗಳ ಹೆಸರುಗಳನ್ನು ಭಾರತೀಯ ಸಂಪ್ರದಾಯಗಳಿಗೆ ಅನುಗುಣವಾಗಿ ಬದಲಿಸಲಾಗುವುದು. ಗುಲಾಮಗಿರಿಯ ಮನೋಭಾವದಿಂದ ದೇಶ ಹೊರ ಬರಬೇಕಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**☞ ವಲಸೆಯ ಮೇಲೆ ಬ್ರಿಟನ್ ಕಡಿವಾಣ**

ಲಂಡನ್ : ವಲಸೆ ಮೇಲೆ ಕಡಿವಾಣ ಹಾಕಲು ಬ್ರಿಟನ್ ಸರ್ಕಾರ ಮುಂದಾಗಿದೆ. ಉದ್ಯೋಗಕ್ಕೆ ಆಗಮಿಸುವವರ ವೇತನ ಮಿತಿ ಹೆಚ್ಚಿಸಲು ಹಾಗೂ ವಲಸಿಗರು ಕುಟುಂಬದವರನ್ನು ಕರೆ ತರುವುದರ ಮೇಲೆ ನಿಯಂತ್ರಣ ಹೇರಲು ಬ್ರಿಟನ್ ನಿರ್ಧರಿಸಿದೆ.

# ಭಾರತದಲ್ಲಿ ಸಿರಿಧಾನ್ಯಗಳ ಮೌಲ್ಯವರ್ಧನೆ ತೀರಾ ಕಡಿಮೆ

## ಸಿರಿಧಾನ್ಯಗಳ ಬಗ್ಗೆ ಗ್ರಾಮೀಣ ಮಹಿಳೆಯರ ತರಬೇತಿ ಕಾರ್ಯಕ್ರಮದಲ್ಲಿ ರಾಜಸ್ಥಾನದ ಡಾ.ರಂಜಿತ್



ದಾವಣಗೆರೆ, ಡಿ.4- ನಗರದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ರಾಜಸ್ಥಾನದ ಜೈಪುರದ ಚೌಧರಿ ಚರಣ್ ಸಿಂಗ್ ರಾಷ್ಟ್ರೀಯ ಕೃಷಿ ಮಾರುಕಟ್ಟೆ ಸಂಸ್ಥೆ ಇವರುಗಳ ಸಂಯುಕ್ತಾಶ್ರಯದಲ್ಲಿ ಸಿರಿಧಾನ್ಯಗಳ ಮೌಲ್ಯ ವರ್ಧನೆ, ಪ್ಯಾಕಿಂಗ್, ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆಯ ಬಗ್ಗೆ ಮೂರು ದಿನಗಳ ಎರಡು ತರಬೇತಿಯನ್ನು ಗ್ರಾಮೀಣ ಮಹಿಳೆಯರಿಗೆ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿಯ ಎರಡನೇ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿದ ಚೌಧರಿ ಚರಣ್ ಸಿಂಗ್ ರಾಷ್ಟ್ರೀಯ ಕೃಷಿ ಮಾರುಕಟ್ಟೆ ಸಂಸ್ಥೆಯ ಸಂಶೋಧನಾ ಅಧಿಕಾರಿ ಡಾ.ರಂಜಿತ್ ಮಾತನಾಡಿ, ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಮೌಲ್ಯವರ್ಧನೆ ತೀರಾ ಕಡಿಮೆಯಾಗಿದ್ದು, ಇದರಿಂದ ರೈತರು ಆರ್ಥಿಕ ಲಾಭ ಪಡೆಯಲು ವಿಫಲರಾಗಿದ್ದಾರೆ ಎಂದು ತಿಳಿಸಿದರು.

ಜೈಪುರದ ಸಂಸ್ಥೆಯು ಕೃಷಿ ಬೆಳೆಗಳ ಮೌಲ್ಯವರ್ಧನೆ ಹಾಗೂ ಮಾರಾಟಕ್ಕೆ ರೈತರಿಗೆ ಸ್ಪಂದಿಸುವ ರಾಷ್ಟ್ರದ ಏಕೈಕ ಸಂಸ್ಥೆಯಾಗಿದ್ದು, ತರಳಬಾಳು ಕೆ.ವಿ.ಕೆಯು ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಬಗ್ಗೆ ತರಬೇತಿ ಹಮ್ಮಿಕೊಂಡಿದ್ದು ಅತ್ಯಂತ ಶ್ಲಾಘನೀಯ. ಸಂಬಂಧಪಟ್ಟ ಸಂಸ್ಥೆಗಳು ರೈತರ ಕೈಹಿಡಿದು ಮೌಲ್ಯವರ್ಧನೆ ಹಾಗೂ ಮಾರುಕಟ್ಟೆಯ ಬಗ್ಗೆ ತಿಳುವಳಿಕೆ ಕೊಡುವುದು ಹಾಗೂ ತಾಂತ್ರಿಕ ಮಾರ್ಗದರ್ಶನ ನೀಡುವುದು ಅತ್ಯವಶ್ಯಕವಾಗಿದ್ದು ಇದರಿಂದ ರೈತ ಬಾಂಧವರು ಹೆಚ್ಚಿನ ಲಾಭಗಳಿಸುವ ಅವಕಾಶವಿದೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ ಮಾತನಾಡಿ, ಈ ಮೌಲ್ಯವರ್ಧನೆ ತರಬೇತಿಯಲ್ಲಿ ಗ್ರಾಮೀಣ ಮಹಿಳೆಯರು ಸಿರಿಧಾನ್ಯಗಳನ್ನು ಉಪಯೋಗಿಸಿ ಅವರ ಮನೆಯಲ್ಲಿಯೇ ಸರಳವಾದ, ಆರೋಗ್ಯಕರ ಪದಾರ್ಥಗಳನ್ನು ತಯಾರಿಸಿ ಉಪಯೋಗಿಸಿಕೊಳ್ಳಲು ಪ್ರಾತ್ಯಕ್ಷಿಕೆ ಗಳನ್ನು ಮಾಡಿ ತೋರಿಸಲಾಗುವುದು ಎಂದರು. ತರಬೇತಿ ಪಡೆದ ಗ್ರಾಮೀಣ ಮಹಿಳೆಯರು ಮೊದಲು ತಮ್ಮ ಮನೆಯಲ್ಲಿ ಮೌಲ್ಯವರ್ಧನೆ ಮಾಡಿ ಉಪಯೋಗಿಸಲು ಪ್ರಾರಂಭಿಸಬೇಕು, ತದನಂತರ ತಾನಾಗಿಯೇ ಅಕ್ಕಪಕ್ಕದ ಊರಿನ ಜನರು ಇದನ್ನು ಅನುಸರಿಸುತ್ತಾರೆ ಎಂದು ತಿಳಿಸಿದರು.

ತರಬೇತಿಯಲ್ಲಿ ಸಿರಿಧಾನ್ಯಗಳ ಉತ್ಪಾದನಾ ತಾಂತ್ರಿಕತೆ, ಪೋಷಕಾಂಶಗಳು, ಸಿರಿಧಾನ್ಯಗಳ ಲಡ್ಡು, ಅವಲಕ್ಕಿ, ರವೆ, ಇಡ್ಲಿ ಮತ್ತು ಬಿಸ್ಕೆಟ್ಸ್ ಮುಂತಾದವುಗಳನ್ನು ತಯಾರಿಸುವ ಬಗ್ಗೆ ಪ್ರಾತ್ಯಕ್ಷಿಕೆ ಮಾಡಿ ತೋರಿಸಲಾಯಿತು. ಸಿರಿಧಾನ್ಯ ಮೂಲವರ್ಧನೆಯಲ್ಲಿ ತೊಡಗಿರುವ ಗ್ರಾಮೀಣ ಉದ್ದೆಮೆದಾರರ ಜೊತೆ ಸಂವಾದ ನಡೆಸಲಾಯಿತು.

# ರಾಜ್ಯಾಧ್ಯಕ್ಷ, ವಿಪಕ್ಷ ನಾಯಕನ ಬದಲಾವಣೆಯಾಗಲಿದೆ



ಬೆಂಗಳೂರು, ಡಿ. 4 - ಲೋಕಸಭಾ ಚುನಾವಣೆ ಬಳಿಕ ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕನ ಸ್ಥಾನ ಬದಲಾವಣೆ ಆಗಲಿದೆ ಎಂದು ಪಕ್ಷದ ಹಿರಿಯ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಬಾಂಬ್ ಸಿಡಿಸಿದ್ದಾರೆ.

ಬೆಳಗಾವಿಯ ಸುವರ್ಣ ಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಬರುವ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿಟ್ಟು ಕೊಂಡು ದಕ್ಷಿಣ ಕರ್ನಾಟಕದ ಇಬ್ಬರನ್ನು ಪಕ್ಷದ ಉನ್ನತ ಸ್ಥಾನಕ್ಕೆ ಕೂರಿಸಲಾಗಿದೆ ಎಂದು ಹೇಳಿದರು.

ಯತ್ನಾಳ್ ಈ ಹೇಳಿಕೆ ನೀಡುತ್ತಿ ದ್ದಂತೆ ವಿಜಯಪುರ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಾಗೂ ಬಿ.ವೈ. ವಿಜಯೇಂದ್ರ ಅವರ ಆಪ್ತ ಶಿಷ್ಯ ಬಿರಾದಾರ್ ಹೇಳಿಕೆ ನೀಡಿ, ಬಸನಗೌಡ ಪಾಟೀಲ್ ನಾಲಿಗೆ ಮತ್ತು ಮೆದುಳಿನ ನಡುವೆ ಸಂ ಪರ್ಕ ಕಡಿದುಹೋಗಿದೆ ಎಂದು ವ್ಯಂಗ್ಯವಾಡಿದ್ದಾರೆ.

ನಾಲಿಗೆ ಮತ್ತು ಮೆದುಳಿನ ನಡುವೆ ಸಂ ಪರ್ಕ ಕಡಿತಗೊಂಡಿರುವು ದರಿಂದ ಯತ್ನಾಳ್ ಮನಬಂದಂತೆ ಮಾತನಾ ಡುತ್ತಿದ್ದಾರೆ, ಅವರ ಹೇಳಿಕೆಗಳಿಗೆ ಬೆಲೆ ಕೊಡಬಾರದೆಂದು ತಿಳಿಸಿದ್ದಾರೆ.

ಬಿರಾದಾರ್ ಹೇಳಿಕೆಯಿಂದ ಪರೋಕ್ಷವಾಗಿ ಯತ್ನಾಳ್ ಮತ್ತು ವಿಜಯೇಂದ್ರ ನಡುವೆ ಮುಸುಕಿನ ಗುದ್ದಾಟ ಜೋರಾಗಿದೆ. ಉತ್ತರ ಕರ್ನಾಟಕಕ್ಕೆ ನ್ಯಾಯ ಕೊಡುವವರೆಗೆ ನಾನು ಬಿಜೆಪಿ ಶಾಸಕಾಂಗ ಸಭೆಗೆ ಹಾಜರಾಗುವುದಿಲ್ಲ, ನಾವು ದಕ್ಷಿಣ ಕರ್ನಾಟಕದವರ ಗುಲಾಮರಲ್ಲ ಎಂದು ಯತ್ನಾಳ್ ಹೇಳಿದ್ದಾರೆ.

ವರಿಷ್ಠರು ಮಾಡಿರುವ ಎರಡೂ ಆಯ್ಕೆ ಯನ್ನು ನಾನು ವಿರೋಧಿಸುತ್ತೇನೆ. ಕುಟುಂಬ ರಾಜಕಾರಣ ಕಿತ್ತುಹಾಕಬೇಕು, ಇಡೀ ರಾಷ್ಟ್ರದಲ್ಲಿ ಕುಟುಂಬ ರಾಜಕಾರಣ ಅಂತ್ಯವಾಗುತ್ತದೆ. ವಂಶವಾದ ನಿರ್ಮೂಲನೆ ಮಾಡುವುದೇ ನನ್ನ ಗುರಿ. ಇನ್ನು ಮೇಲೆ ಬದಲಾವಣೆ ಆಗುತ್ತದೆ, ನರೇಂದ್ರ ಮೋದಿ ನಾಯಕತ್ವ ಇಡೀ ದೇಶದ ಜನರು ಒಪ್ಪಿಕೊಂಡಿದ್ದಾರೆ.

ಮೋದಿ ಗ್ಯಾರಂಟಿ ದೇಶಕ್ಕೆ ಇರುವುದರಿಂದ ಗೆಲುವು ನಮ್ಮದಾಗಿದೆ, ಹೊಂದಾಣಿಕೆ ಇಲ್ಲದ ರಾಜಕಾರಣ, ಹಿಂದುತ್ವ ಮತ್ತಷ್ಟು ಗಟ್ಟಿಗೊಳ್ಳಲಿದೆ ಎಂದರು.

# ಮಲೇಬೆನ್ನೂರಿನಲ್ಲಿ ಮತ್ತೆ ನಾಲ್ವರನ್ನು ಗಾಯಗೊಳಿಸಿದ ಮುಷ್ಯ



**ಮಂಗಳವಾರ ಮುಷ್ಯ ಸೆರೆ ಹಿಡಿಯುವ ಕಾರ್ಯಾಚರಣೆ ತೀವ್ರ : ಪುರಸಭೆ ಸಿಓ ಸುರೇಶ್**

ಮಲೇಬೆನ್ನೂರು, ಡಿ.4- ಪಟ್ಟಣದಲ್ಲಿ ಸೋಮವಾರ ನಾಲ್ವರ ಮೇಲೆ ಮುಷ್ಯ ದಾಳಿ ಮಾಡಿ ಗಾಯಗೊಳಿಸಿದ ಘಟನೆ ಜನರನ್ನು ಮತ್ತಷ್ಟು ಭಯಭೀತರನ್ನಾಗಿ ಮಾಡಿದೆ.

ಬೆಳಿಗ್ಗೆ ನಿಟ್ಟೂರು ರಸ್ತೆಯಲ್ಲಿ ಓರ್ವ ವ್ಯಕ್ತಿಯ ಮೇಲೆ ದಾಳಿ ಮಾಡಿದ್ದ ಮುಷ್ಯವು, ಸಂಜೆ ಸಮುದಾಯ ಆರೋಗ್ಯ ಕೇಂದ್ರದ ಹಿಂಭಾಗ ಕನಕದಾಸ ರಸ್ತೆಯಲ್ಲಿ ಕಡ್ಲೆಗೊಂದಿ ಬಸವರಾಜ್, ಡ್ರೈವರ್ ರಾಜಣ್ಣ ಮತ್ತು ಪೂಜಾರ್ ಗಂಗೇನಳ್ಳೆಪ್ಪರ ಮೊಮ್ಮಗ ಹನುಮಂತ ಎಂಬುವವರ ಮೇಲೆ ಪ್ರತ್ಯೇಕವಾಗಿ ದಾಳಿ ಮಾಡಿ ಕೈಗಳನ್ನು ಕಚ್ಚಿ ಗಾಯಗೊಳಿಸಿದೆ.

ಭಾನುವಾರ ಸಂಜೆ ಮತ್ತು ಸೋಮವಾರ ಬೆಳಿಗ್ಗೆ ಮುಷ್ಯವು ಜನರ ಮೇಲೆ ದಾಳಿ ಮಾಡಿದ ವಿಷಯ ತಿಳಿದ ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಅವರು, ಅರಣ್ಯ ಇಲಾಖೆಯ ಸಿಬ್ಬಂದಿಗಳನ್ನು ಕರೆಸಿಕೊಂಡು ನಿಟ್ಟೂರು ರಸ್ತೆಯಲ್ಲಿ ಬೋನ್ ಇಟ್ಟು ಮುಷ್ಯವನ್ನು ಸೆರೆ ಹಿಡಿಯಲು ಪ್ರಯತ್ನಿಸಿದ್ದಾರೆ. ಆದರೆ, ಮುಷ್ಯ ಆ ಜಾಗದಲ್ಲಿ ಕನಕದಾಸ ರಸ್ತೆಗೆ ಬಂದು ಮೂವರಿಗೆ ದಾಳಿ ಮಾಡಿದೆ. ಈ ವಿಷಯ ತಿಳಿದು ಬೋನ್ ಅನ್ನು ದಾಳಿ ಮಾಡಿದ ಸ್ಥಳಕ್ಕೆ ತಂದಿಟ್ಟು ಮುಷ್ಯವನ್ನು ರಾತ್ರಿವರೆಗೂ ಕಾದು ಹೋಗಿದ್ದಾರೆ. ಮಂಗಳವಾರ ಬೆಳಿಗ್ಗೆಯಿಂದ ಮುಷ್ಯವನ್ನು ಸೆರೆ ಹಿಡಿಯುವ ಕಾರ್ಯಾಚರಣೆಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ತೀವ್ರಗೊಳಿಸುವುದಾಗಿ ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ 'ಜನತಾವಾಣಿ'ಗೆ ತಿಳಿಸಿದ್ದಾರೆ. ಮುಷ್ಯವು ದಾಳಿ ವೇಳೆ ಮನುಷ್ಯರನ್ನು ತೀವ್ರವಾಗಿ ಗಾಯಗೊಳಿಸುತ್ತಿದ್ದು, ಇದನ್ನು ನೋಡಿದ ನಾವು ಗಾಬರಿಯಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗಾಯಾಳುಗೆ ಚಿಕಿತ್ಸೆ ನೀಡಿದ ಹಿರಿಯ ವೈದ್ಯ ಡಾ. ಬಿ.ಚಂದ್ರಶೇಖರ್ ತಿಳಿಸಿದರು.

ಆ ಮುಷ್ಯವನ್ನು ಕೂಡಲೇ ಸೆರೆ ಹಿಡಿಯದಿದ್ದರೆ ಇನ್ನಷ್ಟು ಜನರ ಮೇಲೆ ದಾಳಿ ಮಾಡುವ ಸಾಧ್ಯತೆ ಇದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಡಾ. ಬಿ.ಚಂದ್ರಶೇಖರ್ ಮನವಿ ಮಾಡಿದ್ದಾರೆ.

# ಛತ್ತೀಸ್‌ಘಡ : ರಾಜ ಕುಟುಂಬಗಳ ಎಲ್ಲಾ 7 ಅಭ್ಯರ್ಥಿಗಳ ಸೋಲು

**(1ನೇ ಪುಟದಿಂದ)** 25,413 ಮತಗಳಿಂದ ಸೋತಿದ್ದಾರೆ.

ಅಂಬಿಕಾ ಸಿಂಗ್‌ದೇವ್ ಅವರು ಕೊರಿಯಾ ರಾಜ ಕುಟುಂಬದ ಸದಸ್ಯೆ. ಅವರು ಸುದೀರ್ಘ ಕಾಲದಿಂದ ರಾಜಕೀಯದಲ್ಲಿದ್ದಾರೆ. ಈ ಹಿಂದೆ ಅಜಿತ್ ಜೋಗಿ ಸರ್ಕಾರದಲ್ಲಿ ಅವರು ಹಣಕಾಸು ಸಚಿವೆಯೂ ಆಗಿದ್ದರು.

ಗೊಂಡ್ ರಾಜಕುಟುಂಬದ ಸದಸ್ಯರಾದ ಕಾಂಗ್ರೆಸ್ ನಾಯಕ ದೇವೇಂದ್ರ ಬಹದ್ದೂರ್ ಸಿಂಗ್ ಅವರು ಬಿಜೆಪಿಯ ಸಂಪತ್ ಅಗರ್‌ವಾಲ್ ವಿರುದ್ಧ ಬಸ್ನಾ ಕ್ಷೇತ್ರದಲ್ಲಿ 36,793 ಮತಗಳಿಂದ ಸೋತಿದ್ದಾರೆ.

ಪ್ರಭಾವಿ ಜುದೇವ್ ರಾಜಕುಟುಂಬದ ಸಂಯೋಗಿತ ಸಿಂಗ್ ಅವರು ಚಂದ್ರಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ರಾಮಕುಮಾರ್ ಯಾದವ್ ವಿರುದ್ಧ 15,976 ಮತಗಳಿಂದ ಸೋತಿದ್ದಾರೆ. ಪ್ರಬಲ್ ಪ್ರತಾಪ್ ಸಿಂಗ್ ಜುದೇವ್ ಅವರು ಕೋಟ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಅಟಲ್ ಶ್ರೀವಾಸ್ತವ ವಿರುದ್ಧ 7,957 ಮತಗಳಿಂದ ಸೋತಿದ್ದಾರೆ. ನಾಗವಂಶಿ ಗೊಂಡ್ ರಾಜಕುಟುಂಬದ ಸದಸ್ಯ ಸಂಜೀವ್ ಷಾ ಅವರು ಮೊಹ್ಲ -ಮನಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಇಂದ್ರಷಾ ಮಂಡವಿ ವಿರುದ್ಧ 31,741 ಮತಗಳ ಸೋಲು ಕಂಡಿದ್ದಾರೆ.

ಆಮ್ ಆದ್ಮಿ ಪಾರ್ಟಿಯಿಂದ ಲೊಹಾರಾ ರಾಜವಂಶದ ಖಡ್ಗರಾಜ್ ಸಿಂಗ್ ಅವರು ಕವರ್ಧ ಕ್ಷೇತ್ರದಲ್ಲಿ ಕಣದಲ್ಲಿದ್ದರು. ಆದರೆ, ಅವರು 6,334 ಮತ ಪಡೆಯಲಷ್ಟೇ ಸಾಧ್ಯವಾಗಿದೆ. ಈ ಕ್ಷೇತ್ರದಲ್ಲಿ ಬಿಜೆಪಿಯ ವಿಜಯ್ ಶರ್ಮ ಗೆಲುವು ಸಾಧಿಸಿದ್ದಾರೆ.

# ಜಾಗೃತ ಸಮಾಜ ನಿರ್ಮಾಣಕ್ಕೆ ಅಧ್ಯಾತ್ಮಿಕ ಮೌಲ್ಯ ಅಗತ್ಯ



**(1ನೇ ಪುಟದಿಂದ)** ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಮಾತನಾಡಿ, ಜೀವನದ ಜಂಜಾಟದಲ್ಲಿ ದುಃಖದ ದಿನಗಳೇ ಹೆಚ್ಚಾದ ಪರಿಸ್ಥಿತಿಯಲ್ಲಿ ಅಧ್ಯಾತ್ಮಿಕತೆ ಮೂಲಕ ಜೀವನದ ಶ್ರೇಷ್ಠತೆ ಕಂಡುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಪ್ರವಚನ ವೇದಿಕೆ ಉತ್ತಮ ಮಾರ್ಗದರ್ಶನ ನೀಡಲಿದೆ ಎಂದು ಹೇಳಿದರು.

ತನ್ನನ್ನು ತಾನು ಅರಿಯುವುದೇ ಶ್ರೇಷ್ಠತೆ ಎಂದು ಶರಣರು ಹೇಳಿದ್ದರು. ಯಾರಿಗೆ ಜೀವನದ ಅರಿವು ಬರುತ್ತದೆಯೋ ಅವರೇ ಶರಣರಾಗುತ್ತಾರೆ. ಹುಟ್ಟು- ಸಾವಿನ ನಡುವೆ ಮನುಷ್ಯ ತನ್ನ ಜೀವನವನ್ನು ಅರ್ಥ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.

ಈಶ್ವರೀಯ ವಿಶ್ವವಿದ್ಯಾಲಯದ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಉಪ ವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ, ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ್ರು, ಈಶ್ವರೀಯ ವಿಶ್ವವಿದ್ಯಾಲಯ ವಿದ್ಯಾನಗರ ಶಾಖೆ ಕಟ್ಟಡದ ಭೂ ದಾನಿ ಶ್ರೀಮತಿ ಸಣ್ಣಗೌಡ್ರು ಲಕ್ಕಮ್ಮ ದ್ಯಾಮಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಈಶ್ವರೀಯ ವಿಶ್ವವಿದ್ಯಾಲಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ 'ಶರಣರು ಕಂಡ ಶಿವ' ಪ್ರವಚನದ ಸದುದ್ದೇಶವನ್ನು ವಿವರಿಸಿದರು.

ಓಂಕಾರಪ್ಪ ಸ್ವಾಗತಿಸಿದರು. ಸೀತಮ್ಮ ಕಾಲೇಜಿನ ಶ್ರೀಮತಿ ಅನ್ನಪೂರ್ಣ ಪಾಟೀಲ್ ಕಾರ್ಯಕ್ರಮ ನಿರೂಪಿಸಿದರು.

# ಆರ್ಥಿಕತೆಯತ್ತ ಭಾರತ

**(1ನೇ ಪುಟದಿಂದ)** ಹಿಡಿದು ವಿಜಯನಗರ ಸಾಮ್ರಾಜ್ಯದವರೆಗಿನ ಶ್ರೇಷ್ಠ ಆರ್ಥಿಕತೆಗಳಲ್ಲಿ ವಾಣಿಜ್ಯ, ವ್ಯಾಪಾರ ಹಾಗೂ ಅರ್ಥ ವ್ಯವಸ್ಥೆ ಉತ್ತಮವಾಗಿತ್ತು ಎಂದು ಶೊಲ್ಲಾಪುರ್ ಹೇಳಿದರು. ವಾಣಿಜ್ಯ ವಲಯಕ್ಕೆ ಬರುವ ವಿದ್ಯಾರ್ಥಿಗಳು ಕೇವಲ ಅಂಕ ಗಳಿಸಿದರಷ್ಟೇ ಸಾಲದು. ಕೌಶಲ್ಯಗಳನ್ನೂ ಬೆಳೆಸಿಕೊಳ್ಳಬೇಕು. ಆರ್ಥಿಕ ವಿದ್ಯಮಾನಗಳ ಬಗ್ಗೆ ಈಗಿನಿಂದಲೇ ತಿಳಿದುಕೊಳ್ಳಬೇಕು ಎಂದವರು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಾಪೂಜಿ ಎಂ.ಬಿ.ಎ. ಕಾಲೇಜಿನ ನಿರ್ದೇಶಕ ಹೆಚ್.ವಿ. ಸ್ವಾಮಿ ತ್ರಿಭುವಾನಂದ, ವಿವಿಧ ಪಿ.ಯು. ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ವಾಣಿಜ್ಯೋತ್ಸವ ರೂಪಿಸಲಾಗಿದೆ. ವಾಣಿಜ್ಯ ಚಟುವಟಿಕೆಗಳಿಗೆ ಅಗತ್ಯ ಪ್ರತಿಭೆ ಹಾಗೂ ಕೌಶಲ್ಯ ಬೆಳೆಸಿಕೊಳ್ಳಲು ಇದು ನೆರವಾಗಲಿದೆ ಎಂದರು.

ಪ್ರಾಂಶುಪಾಲ ಬಿ. ವೀರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಾಲ್ಗುಣಿ ಹಾಗೂ ಪ್ರಜ್ಞ ಪ್ರಾರ್ಥಿಸಿದರು. ವಿ.ಎನ್. ಸಂಜನ ಹಾಗೂ ಆದಿಲ್ ಅತ್ತಾರ್ ನಿರೂಪಿಸಿದರು. ಪ್ರೊ. ಬಿ.ಬಿ. ಮಂಜುನಾಥ್ ವಂದಿಸಿದರು.

# ಸ್ಯಾನಿಟರಿ ಪ್ಯಾಡ್ ವಿತರಣೆ

**(1ನೇ ಪುಟದಿಂದ)** ಹದಿಹರೆಯದವರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಬಳಕೆ ಹಾಗೂ ಉಪಯೋಗಗಳ ಬಗ್ಗೆ ತಿಳಿವಳಿಕೆ ನೀಡಲಾಗುತ್ತಿದೆ. ಸಮುದಾಯ ಮತ್ತು ವಿಶೇಷವಾಗಿ ಹದಿಹರೆಯ ದವರಲ್ಲಿ ಋತುಸ್ರಾವ ನೈರ್ಮಲ್ಯದ ಕುರಿತು ದೃಷ್ಟಿಕೋನ ಬದಲಾಯಿಸಲಾಗುತ್ತಿದೆ. ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದರ ಮುಖಾಂತರ ಬಳಕೆಯನ್ನು ಪ್ರೋತ್ಸಾಹಿಸುವುದು ಹಾಗೂ ಮುಟ್ಟಿನ ವೈಜ್ಞಾನಿಕ ನಿರ್ವಹಣೆಯ ಕುರಿತು ಮಾರ್ಗದರ್ಶನ ನೀಡಲಾಗುತ್ತಿದೆ ಎಂದರು.

# ಶಿಕ್ಷಕರ ಕೊರತೆ ನೀಗಿಸಲು ಕ್ರಮ

**(1ನೇ ಪುಟದಿಂದ)** ಶಿಕ್ಷಣ ಆಯುಕ್ತಾಲಯದಲ್ಲಿ ಹಲವು ವರ್ಷಗಳಿಂದ ಬೀಡು ಬಿಟ್ಟಿರುವ ಸಿಬ್ಬಂದಿಗಳ ವರ್ಗಾವಣೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು. ರಾಜ್ಯದ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ನೇಮಕ ಕುರಿತಂತೆ ಎಸ್.ವಿ. ಸಂಕನೂರ ಪ್ರಶ್ನೆಗೆ ಉತ್ತರಿಸಿದ ಸಚಿವ ಎಸ್. ಮಧು ಬಂಗಾರಪ್ಪ, ಪ್ರಾಥಮಿಕ ಶಾಲಾ ವಿಭಾಗದಲ್ಲಿ ಖಾಲಿ ಇರುವ 2,120 ದೈಹಿಕ ಶಿಕ್ಷಕರು ಹಾಗೂ ಪ್ರೌಢಶಾಲಾ ವಿಭಾಗದಲ್ಲಿ 2,500 ಹುದ್ದೆಗಳ ಭರ್ತಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಸಮಾಲೋಚನೆಯಲ್ಲಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರನ್ನು ಆದಷ್ಟು ಶೀಘ್ರದಲ್ಲಿ ನೇಮಕ ಮಾಡಲಾಗುವುದು ಎಂದರು.


**ಕಛೇರಿಯ ಕಟ್ಟಡ ವಿಳಾಸ ಬದಲಾವಣೆ**

**ಶ್ರೀ ಸೇವಾಲಾಲ್ ಪತ್ತಿನ ಸಹಕಾರ ಸಂಘ ನಿಯಮಿತ #13821/9 ಎ, ಸರಸ್ವತಿ ನಗರ, ಬಿ ಬ್ಲಾಕ್, ದಾವಣಗೆರೆ. ಈ ಸಂಘದ ಕಛೇರಿಯನ್ನು ಈ ಕೆಳಕಂಡ ವಿಳಾಸಕ್ಕೆ ಕಛೇರಿಯು ಬದಲಾವಣೆ ಮಾಡಿದೆ. ಶ್ರೀ ಸೇವಾಲಾಲ್ ಪತ್ತಿನ ಸಹಕಾರ ಸಂಘ ನಿಯಮಿತ, ದಾವಣಗೆರೆ ಸಿಟಿ.,ಸರಸ್ವತಿ ನಗರ, ದುರ್ಗಾಂಬಿಕಾ ಸ್ಕೂಲ್ ಹತ್ತಿರ, ಡೋ.ನಂ. 548/4ಎ, ಶ್ರೀ ಆರ್. ಕಾಳಾನಾಯ್ಕ ಬಿನ್ ಲೇಟ್ ರೂಪ್ಲಾನಾಯ್ಕ ಇವರ ಕಟ್ಟಡಕ್ಕೆ ಸಂಘದ ಕಛೇರಿ ಬದಲಾಯಿಸಲಾಗಿದೆ.**

**ಸಹಿ/- ಅಧ್ಯಕ್ಷರು,**
**ಶ್ರೀ ಸೇವಾಲಾಲ್ ಪತ್ತಿನ ಸಹಕಾರಿ ಸಂಘ ನಿ., ದಾವಣಗೆರೆ.**


# ನೆಪಮಾತ್ರಕ್ಕೆ ಸಭೆ, ಕಾರ್ಯಗತವಾಗದ ಸಲಹೆಗಳು: ಅಸಮಾಧಾನ



ದಾವಣಗೆರೆ, ಡಿ.4- ಆರ್ಥಿಕ ವರ್ಷದ ಬಜೆಟ್ ಸಿದ್ಧತೆ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ಮಹಾನಗರ ಪಾಲಿಕೆ ಬಜೆಟ್ ಪೂರ್ವ ಸಾರ್ವಜನಿಕ ಸಲಹಾ ಸಭೆಗೆ ಕೇವಲ ಬೆರಳೆಣಿಕೆಯಷ್ಟು ಸಾರ್ವಜನಿಕರು ಹಾಜರಿದ್ದರು.

ಆರಂಭದಲ್ಲಿ ಒಂದಿಬ್ಬರನ್ನು ಹೊರತುಪಡಿಸಿ, ಯಾವ ಸಂಘ-ಸಂಸ್ಥೆ ಪದಾಧಿಕಾರಿಗಳಾಗಲೀ, ಸಾರ್ವಜನಿಕರಾಗಲೀ ಮಹಾನಗರ ಪಾಲಿಕೆಯತ್ತ ಸುಳಿಯಲೇ ಇಲ್ಲ.

ತಡವಾಗಿಯಾದರೂ ಮೇಯರ್ ವಿನಾಯಕ ಪೈಲ್ವಾನ್, ಪಾಲಿಕೆ ಸಿಇಓ ಪ್ರಿಯಾಂಕ ಅವರ ನಾಯಕತ್ವದಲ್ಲಿ ಸಭೆ ನಡೆಯಿತಾದರೂ, ಸಭೆಯಲ್ಲಿ ಉಪಸ್ಥಿತರಿದ್ದವರು ಯಥಾಪ್ರಕಾರ ಚರಂಡಿ, ರಸ್ತೆ, ಸ್ಮಶಾನ, ಧೂಳು ಇನ್ನಿತರೆ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಇದೇ ವೇಳೆ ದಲಿತ ಮುಖಂಡ ಸೋಮಲಾಪುರ ಹನುಮಂತಪ್ಪ ಮಾತನಾಡಿ, ಸಾರ್ವಜನಿಕರಿಂದ ಪಡೆಯುವ ಸಲಹೆಗಳು ನೆಪ ಮಾತ್ರಕ್ಕೆ ಎನ್ನುವಂತಾಗಿದೆ. ಸಂಘ-ಸಂಸ್ಥೆ, ವಿವಿಧ ಸಂಘಟನೆಗಳ ಪದಾಧಿಕಾರಿಗಳು ನೀಡಿದ ಸಲಹೆಗಳು ಯಾವ ಬಜೆಟ್‌ನಲ್ಲಿಯೂ ಕೂಡ ಅನುಷ್ಠಾನಗೊಳ್ಳದಿರುವುದು ವಿಷಾದದ ಸಂಗತಿ ಎಂದರು.

ಹಿಂದಿನ ಸಭೆಯಲ್ಲಿ ಸಲಹೆ-ಅಹವಾಲುಗಳನ್ನು ಸ್ವೀಕರಿಸಿದ ಆಯುಕ್ತರೇ ಸಭೆಗೆ ಹಾಜರಾಗಿಲ್ಲ. ನಾವು ಸಮಸ್ಯೆಗಳನ್ನು ಯಾರ ಮುಂದಿಡಬೇಕೆಂಬುದೇ ತೋಚುತ್ತಿಲ್ಲ. ಇದೊಂದು ನೆಪ ಮಾತ್ರದ ಸಭೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರದೇವತೆ ಶ್ರೀ ದುರ್ಗಾಂಬಿಕ ದೇವಿ ದೇವಸ್ಥಾನದ ಧರ್ಮದರ್ಶಿ ಗೌಡ್ರು ಚನ್ನಬಸಪ್ಪ ಮಾತನಾಡಿ, ಬಹಳಷ್ಟು ಮಂದಿಗೆ ಈ ಸಭೆಯ ಮಾಹಿತಿಯೇ ಇಲ್ಲ ಎಂದರು.

ಗಡಿಯಾರ ಕಂಬದ ಬಳಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ನಾಯಿಗಳು ಅಟ್ಟಿಸಿಕೊಂಡು ಹೋದಾಗ ಅನೇಕ ಬೈಕ್ ಸವಾರರು ಬಿದ್ದಿರುವ ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ. ಕೂಡಲೇ ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಪಾಲಿಕೆ ಮುಂದಾಗಬೇಕಾಗಿದೆ ಎಂದು ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್ ವಿನಾಯಕ ಪೈಲ್ವಾನ್, ಬೀದಿ ನಾಯಿಗಳ ಸಂತಾನಹರಣಕ್ಕಾಗಿ ಬೆಂಗಳೂರು ಮಟ್ಟದಲ್ಲಿ 45 ಲಕ್ಷ ರೂ. ಗಳ ಟೆಂಡರ್ ಸಹ ಕರೆಯಲಾಗಿದೆ. ಸಂತಾನಹರಣ ಮಾಡಲು ಮೂರು ಕೊಠಡಿಗಳ ಅವಶ್ಯವಿದ್ದು, ಈಗಾಗಲೇ ಎಪಿಎಂಸಿ ಆವರಣದಲ್ಲಿ ಎರಡು ಕೊಠಡಿಗಳನ್ನು ಗುರುತಿಸಲಾಗಿದೆ ಎಂದರು.

ಕನ್ನಡಪರ ಹೋರಾಟಗಾರ ನಾಗೇಂದ್ರ ಬಂಡೀಕರ್ ಮಾತನಾಡಿ, ಮಹಾನಗರ ಪಾಲಿಕೆ ಮುಂಭಾಗದ ರಸ್ತೆ ಬದಿ ಆಟೋಗಳು, ಬಸ್‌ಗಳ ನಿಲುಗಡೆ ಹೆಚ್ಚಾಗಿದ್ದು, ಪಾಲಿಕೆ ಪ್ರವೇಶಿಸಲು ದ್ವಿಚಕ್ರ ವಾಹನಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಕಳೆದ ಬಾರಿ ವೈಜ್ಞಾನಿಕ ರೀತಿಯಲ್ಲಿ ಹಂಪ್ಸ್ ನಿರ್ಮಿಸಬೇಕು ಮತ್ತು ಶಾಲಾ-ಕಾಲೇಜುಗಳ ಬಳಿ ಕಡ್ಡಾಯವಾಗಿ ಹಂಪ್ಸ್ ಹಾಕಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಗಾಂಧಿನಗರದ ಬಳಿ ಇರುವ ರುದ್ರಭೂಮಿಯಲ್ಲಿ ಹೆಣಗಳನ್ನು ಊಳಲು ಜಾಗವಿಲ್ಲದಂತಾಗಿದೆ. ವಿದ್ಯುತ್ ಚಿತಾಗಾರದ ಅವಶ್ಯಕತೆ ಇದ್ದು, ಕೂಡಲೇ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಮನವಿ ಮಾಡಿದರು.

ಮುಂದಿನ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ ಮೇಯರ್ ವಿನಾಯಕ ಪೈಲ್ವಾನ್ ತಿಳಿಸಿದರು.

ಪತ್ರಕರ್ತರಾದ ಆರ್.ಎಸ್. ತಿಪ್ಪೇಸ್ವಾಮಿ, ಎ. ಫಕೃದ್ದೀನ್, ಜೆ.ಎಸ್. ವೀರೇಶ್ ಮತ್ತಿತರರು ಸಲಹೆಗಳನ್ನು ನೀಡಿದರು.


**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ರೇವಣಸಿದ್ದಪ್ಪ ಬಿನ್ ಕರಿಬಸಪ್ಪ (ಮೊಬೈಲ್ ನಂ.6360611661. 9008250843) ದೊಡ್ಡಬಾತಿ ದಾವಣಗೆರೆ ತಾಲ್ಲೂಕು ಇವರು ದೊಡ್ಡಬಾತಿ ಗ್ರಾಮದ ವಾಸಿಗಳಾದ ಬಿ.ಜಿ. ಮಂಜುನಾಥ್ ಬಿನ್ ಬಿ.ಜಿ. ರೇವಣಸಿದ್ದಪ್ಪ (ಮೊ. 8747581530) ಇವರಿಂದ ದೊಡ್ಡಬಾತಿ ಗ್ರಾಮದ ಸರಹದ್ದಿಗೆ ಸೇರಿದ ರೇವಣಸಿದ್ದೇಶ್ವರ ದೇವಸ್ಥಾನದ ಹತ್ತಿರ ಇರುವ ಪಂಚಾಯಿತಿ ನಂ. 60/2 ಇ-ಸ್ವತ್ತು ನಂ. 151200201400101892 ಅಳತೆ 28x100 ಅಡಿ ಉಳ್ಳ ಖಾಲಿ ನಿವೇಶನವನ್ನು ಖರೀದಿಸಲು ಇಚ್ಛಿಸಿರುತ್ತಾರೆ. ಆದ ಕಾರಣ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು ಇದ್ದಲ್ಲಿ ಅಥವಾ ತಂಟೆ-ತಕರಾರು ಇದ್ದಲ್ಲಿ ತಮ್ಮ ತಕರಾರನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ನನ್ನ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಲಾಗುವುದು. 7 ದಿನಗಳು ಮುಗಿದ ನಂತರ ಬಂದ ತಕಾರಾರಿಗೆ ಯಾವುದೇ ಮಾನ್ಯತೆ ಇರುವುದಿಲ್ಲ ತಿಳಿಯಿರಿ.

**ಕೆ.ಬಿ. ಶೈಲಾಶ್ರೀ**
**ವಕೀಲರು, #1963/1,2**
**SS ಲೇಔಟ್, ಎ ಬ್ಲಾಕ್,**
**ಒಳಾಂಗಣ ಕ್ರೀಡಾಂಗಣ ಹತ್ತಿರ,**
**ದಾವಣಗೆರೆ.**
**ಮೊ. : 9448658502**

**ಸಹಿ/- ಕೆ.ಬಿ. ಶೈಲಾಶ್ರೀ**
**ಬಿ.ಎಸ್ಸಿ ಎಲ್.ಎಲ್.ಬಿ., ಪಿಜಿಡಿಎಂ**
**ವಕೀಲರು KAR-70/98**

# ತುರ್ಚಘಟ್ಟದಲ್ಲಿ ಕಸಾಪ ಶಾಲಾ-ಕಾಲೇಜು ಅಂಗಳದಲ್ಲಿ ದತ್ತಿ ಉಪನ್ಯಾಸ



ದಾವಣಗೆರೆ, ಡಿ. 4 - ತಾಲೂಕು ಕನ್ನಡ ಸಾಹಿತ್ಯ ಪರಿಷತ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತುರ್ಚಘಟ್ಟ, ಹಿರಿಯ ನಾಗರಿಕರ ಸಹಾಯವಾಣಿ (ದಾವಣಗೆರೆ) ಇವರ ಸಂಯುಕ್ತ ಆಶ್ರಯದಲ್ಲಿ 'ಶಾಲಾ-ಕಾಲೇಜು ಅಂಗಳದಲ್ಲಿ ದತ್ತಿ ಉಪನ್ಯಾಸ' ಹಾಗೂ 'ಮಕ್ಕಳ ದಿನಾಚರಣೆ' ಪ್ರಯುಕ್ತ ಆಟೋಟಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮವು ತುರ್ಚಘಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ್ ಸಿ.ಎಂ. ವಹಿಸಿದ್ದರು. ಉದ್ಘಾಟನೆಯನ್ನು ವೇದಿಕೆಯ ಗಣ್ಯರು ನೆಹರು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರಾಸ್ತಾವಿಕ ನುಡಿಯನ್ನು ತಾಲ್ಲೂಕು ಕಸಾಪ ನಿರ್ದೇಶಕ ಎಂ. ಷಡಕ್ಷರಪ್ಪ ಬೇತೂರು ಮಾತನಾಡುತ್ತಾ, ಕನ್ನಡ ಸಾಹಿತ್ಯ ಪರಿಷತ್ತಿನ ಹಿನ್ನೆಲೆ-ಉದ್ದೇಶ ಕುರಿತು ಪ್ರಸ್ತಾಪಿಸಿದರು.

ಕಾರ್ಯಕ್ರಮದ ಉಪನ್ಯಾಸವನ್ನು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ನಿರ್ದೇಶಕ ಹಾಗೂ ಬಾಪೂಜಿ ವಿದ್ಯಾ ಸಂಸ್ಥೆಯ ಕುಣೆಬೆಳಕೆರೆ ಕನ್ನಡ ಭಾಷಾ ಶಿಕ್ಷಕ ಶಿವಕುಮಾರ್ ಆರ್. ವಚನ ಸಾಹಿತ್ಯ ಮತ್ತು ಜೀವನದ ಮೌಲ್ಯಗಳ ಕುರಿತು ಮಾತನಾಡುತ್ತಾ, 12ನೇ ಶತಮಾನದಲ್ಲಿ ವಚನ ಸಾಹಿತ್ಯ ಬೆಳೆದು ಬಂದ ರೀತಿ ವಚನಕಾರರು ತಮ್ಮ ವಚನಗಳ ಮೂಲಕ ಜೀವನದ ಮೌಲ್ಯಗಳನ್ನು ಹೇಗೆ ಜಾಗೃತಿಗೊಳಿಸಬೇಕೆಂಬುದನ್ನು ತಿಳಿಸಿದರು. ಬಾಲ್ಯದಿಂದಲೇ ಮಕ್ಕಳಿಗೆ ಶಾಲೆಗಳಲ್ಲಿ ವಚನ ಸಾಹಿತ್ಯದ ಮೌಲ್ಯಗಳ ಬಗ್ಗೆ ತಿಳಿಸಿದರೆ ಮುಂದೆ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ರೂಪು ಗೊಳ್ಳಲು ಸಹಾಯವಾಗುತ್ತದೆ ಎಂದು ತಿಳಿಸಿದರು.

ಪ್ರತಿಯೊಬ್ಬರೂ ಅಂತರಂಗ ಶುದ್ಧಿಯಿಂದ ಬಹಿರಂಗ ಶುದ್ಧಿಗೊಳ್ಳಬಹುದು ಎಂದು ಕಳಬೇಡ ಕೊಲಬೇಡ, ಹುಸಿಯ ನುಡಿಯಲೂ ಬೇಡ, ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ ಇದೇ ಕೂಡಲಸಂಗಮದೇವನೊಲಿಸುವ ಪರಿ ಎಂಬ ವಚನಗಳನ್ನು ಮಕ್ಕಳಿಗೆ ಹೇಳಿಕೊಡುವ ಮೂಲಕ ವಚನ ಸಾಹಿತ್ಯದ ಮಹತ್ವವನ್ನು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ನಾಗರಿಕರ ಸಹಾಯವಾಣಿಯ ನವೀನ್ ಮಾತನಾಡುತ್ತಾ, ಹಿರಿಯ ನಾಗರಿಕರಿಗೆ ಸಿಗುವಂತಹ ಸೌಲಭ್ಯಗಳ ಬಗ್ಗೆ ತಿಳಿಸಿದರು.

ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಹಾಗೂ ತಾಲ್ಲೂಕು ಕಸಾಪ ನಿರ್ದೇಶಕಿ ಕಲ್ಪನಾ ಉಪಸ್ಥಿತರಿದ್ದರು. ನಿರೂಪಣೆಯನ್ನು ಶಿಕ್ಷಕಿ ಸುಮಿತ್ರಾ ಎಂ.ಎಲ್., ಸ್ವಾಗತವನ್ನು ಶಿಕ್ಷಕ ಕೆ.ಎಂ. ವಿರೂಪಾಕ್ಷಯ್ಯ, ವಂದನಾರ್ಪಣೆಯನ್ನು ಶಿಕ್ಷಕಿ ವೀಣಾ ಕೆ. ನಡೆಸಿಕೊಟ್ಟರು.

# 1015.6 ಎಂ.ಟಿ ಸರಕು ಸಾಗಣೆ ಮಾಡಿದ ಭಾರತೀಯ ರೈಲ್ವೆ



ಹುಬ್ಬಳ್ಳಿ, ಡಿ.4- ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸರಕು ಸಾಗಣೆ 36.9 ಮಿಲಿಯನ್ ಟನ್ ಹೆಚ್ಚಾಗಿದೆ ಎಂದು ಹುಬ್ಬಳ್ಳಿ ನೈಋತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಅನೀಶ್ ಹೆಗಡೆ ತಿಳಿಸಿದ್ದಾರೆ.

2023 ರ ಏಪ್ರಿಲ್ - ನವೆಂಬರ್ ಅವಧಿಯಲ್ಲಿ ಸರಕು ಸಾಗಣೆಯಿಂದ ಭಾರತೀಯ ರೈಲ್ವೆ 110007.5 ಕೋಟಿ ರೂ. ಆದಾಯ ಗಳಿಸಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸರಕು ಸಾಗಣೆ ಆದಾಯ 4102.4 ಕೋಟಿ ರೂ.ಗಳಷ್ಟು ಹೆಚ್ಚಾಗಿದೆ. ಭಾರತೀಯ ರೈಲ್ವೆ ನವೆಂಬರ್ 2023 ರಲ್ಲಿ 128.4 ಮಿಲಿಯನ್ ಟನ್ ಸರಕು ಸಾಗಣೆಯನ್ನು ಸಾಧಿಸಿದೆ. ಇದು ಕಳೆದ ವರ್ಷದ ಇದೇ ಅವಧಿಯ ಸರಕು ಸಾಗಣೆಗಿಂತ ಶೇ.4.3 ಹೆಚ್ಚಾಗಿದೆ.

ಭಾರತೀಯ ರೈಲ್ವೆಯು ಏಪ್ರಿಲ್ - ನವೆಂಬರ್ 2023ರ ಅವಧಿಯಲ್ಲಿ 1015.669 ಮಿಲಿಯನ್ ಟನ್ ಸರಕುಗಳನ್ನು ಲೋಡ್ ಮಾಡಿದೆ. ಕಳೆದ ವರ್ಷದ ಇದೆ ಅವಧಿಯಲ್ಲಿ 978.724 ಮಿಲಿಯನ್ ಟನ್ ಸರಕುಗಳನ್ನು ಲೋಡ್ ಮಾಡಲಾಗಿತ್ತು. ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ, ಸುಮಾರು 36.945 ಮಿಲಿಯನ್ ಟನ್ ಹೆಚ್ಚಾಗಿದೆ. ಭಾರತೀಯ ರೈಲ್ವೆ ಏಪ್ರಿಲ್ - ನವೆಂಬರ್ 2023 ಅವಧಿಯಲ್ಲಿ 110007.5 ಕೋಟಿ ರೂ.ಗಳನ್ನು ಗಳಿಸಿದೆ. ಕಳೆದ ವರ್ಷದ ಇದೆ ಅವಧಿಯಲ್ಲಿ 105905.1 ಕೋಟಿ ರೂ.ಗಳನ್ನು ಗಳಿಸಿದ್ದು, ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸುಮಾರು ರೂ 4102.445 ಕೋಟಿ ಹೆಚ್ಚಳವಾಗಿದೆ.

ಭಾರತೀಯ ರೈಲ್ವೆಯು ನವೆಂಬರ್ 2023 ರಲ್ಲಿ 128.419 ಮಿಲಿಯನ್ ಟನ್ ಸರಕುಗಳನ್ನು ಲೋಡ್ ಮಾಡಲಾಗಿದ್ದು, ಇದು ಕಳೆದ ವರ್ಷದ ಇದೆ ಅವಧಿಯ (123.088 ಮಿಲಿಯನ್ ಟನ್ ಲೋಡಿಂಗ್) ಕ್ಕಿಂತ ಶೇ.4.33 ಹೆಚ್ಚಳವಾಗಿದೆ. ಭಾರತೀಯ ರೈಲ್ವೆಯು ನವೆಂಬರ್ 2023ರಲ್ಲಿ 14077.94 ಕೋಟಿ ರೂ.ಗಳ ಸರಕು ಆದಾಯವನ್ನು ಗಳಿಸಿದ್ದು, ಇದು ಕಳೆದ ವರ್ಷ ಇದೆ ಅವಧಿಯಲ್ಲಿ ಗಳಿಸಿದ ಆದಾಯ (13559.83 ಕೋಟಿ ರೂ.) ಕ್ಕಿಂತ ಶೇ.3.82 ಹೆಚ್ಚಳವಾಗಿದೆ.

ಭಾರತೀಯ ರೈಲ್ವೆಯು 65.48 ಮಿಲಿಯನ್ ಟನ್ ಕಲ್ಲಿದ್ದಲು, 14.99 ಮಿಲಿಯನ್ ಟನ್ ಕಬ್ಬಿಣದ ಅದಿರು, 5.25 ಮಿಲಿಯನ್ ಟನ್ ಪಿಗ್ ಐರನ್ ಹಾಗೂ ಸಿದ್ಧಪಡಿಸಿದ ಸ್ಟೀಲ್, 5.58 ಮಿಲಿಯನ್ ಟನ್ ಸಿಮೆಂಟ್, 4.61 ಮಿಲಿಯನ್ ಟನ್ ಕ್ಲಿಂಕರ್, 3.82 ಮಿಲಿಯನ್ ಟನ್ ಆಹಾರ ಧಾನ್ಯ, 5.97 ರಸಗೊಬ್ಬರಗಳು, 4.176 ಮಿಲಿಯನ್ ಟನ್ ಖನಿಜ ತೈಲ, ಕಂಟೇನರ್‌ಗಳಲ್ಲಿ 6.91 ಮಿಲಿಯನ್ ಟನ್ ಮತ್ತು ಉಳಿದ ಇತರ ಸರಕುಗಳಲ್ಲಿ 8.59 ಮಿಲಿಯನ್ ಟನ್ ಲೋಡ್ ಮಾಡಿದೆ.

ಭಾರತೀಯ ರೈಲ್ವೆ ವ್ಯಾಪಾರವನ್ನು ಸುಲಭಗೊಳಿಸಲು ಮತ್ತು ಸ್ಪರ್ಧಾತ್ಮಕ ಬೆಲೆಗಳಲ್ಲಿ ಸೇವಾ ವಿತರಣೆಯನ್ನು ಸುಧಾರಿಸಲು ನಿರಂತರ ಪ್ರಯತ್ನಗಳನ್ನು ಮಾಡಿದೆ. ಗ್ರಾಹಕ ಕೇಂದ್ರಿತ ವಿಧಾನ ಮತ್ತು ಚುರುಕಾದ ನೀತಿ ನಿರೂಪಣೆಯ ಬೆಂಬಲದೊಂದಿಗೆ ವ್ಯವಹಾರ ಅಭಿವೃದ್ಧಿ ಘಟಕಗಳ ಕೆಲಸವು ರೈಲ್ವೆಗೆ ಈ ಮಹತ್ವದ ಸಾಧನೆಯತ್ತ ಸಹಾಯ ಮಾಡಿದೆ ಎಂದು ಹೆಗಡೆ ವಿವರಿಸಿದ್ದಾರೆ.

# ಬಿಜೆಪಿ ಮೂಲ ಕಾರ್ಯಕರ್ತರ ಸಭೆ; ಸಮಿತಿ ರಚನೆ



**ಜಗಳೂರು**

ಜಗಳೂರು, ಡಿ.4- ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಿಜೆಪಿ ಮೂಲ ಕಾರ್ಯಕರ್ತರ ಸಭೆ ನಡೆಯಿತು, ಸಭೆಯಲ್ಲಿ ಹುಲಿಕುಂಟ ಶೆಟ್ಟಿ, ಮಂಜುನಾಥ ಸಾಹುಕಾರ್, ಓ. ಬಾಬುರೆಡ್ಡಿ ಕೃಷ್ಣಮೂರ್ತಿ, ಪುರುಷೋತ್ತಮ ನಾಯಕ್, ಹೆಚ್.ಎಂ.ನಾಗರಾಜ, ಬಿ.ಎಸ್. ಪ್ರಕಾಶ್, ಕೆ.ಎಂ. ನಾಗೇಂದ್ರಯ್ಯ, ಇ.ಎನ್.ಪ್ರಕಾಶ್, ಲೋಕಣ್ಣ, ಕಲ್ಲಪ್ಪ ಕೆ.ಟಿ., ಇನ್ನೂ ಮುಂತಾದವರು ಪಾಲ್ಗೊಂಡಿದ್ದರು.

ಸಂಸದರು ಮತ್ತು ಶಾಸಕರು ಕಾರ್ಯಕರ್ತರನ್ನು ಕಡೆಗಣಿಸಿದ ಕಾರಣ ಕಳೆದ ಚುನಾವಣೆಯಲ್ಲಿ ಸೋಲು ಅನುಭವಿಸಿಬೇಕಾಯಿತು ಎಂದು ತಮ್ಮ ನೋವು ತೋಡಿಕೊಂಡರು.

ಇದೇ ಸಂದರ್ಭದಲ್ಲಿ ಮೂಲ ಬಿಜೆಪಿ ಕಾರ್ಯಕರ್ತರ ತಾಲ್ಲೂಕು ಸಮಿತಿ ರಚಿಸಲಾಯಿತು, ಗೌರವ ಅಧ್ಯಕ್ಷರಾಗಿ ಮಂಜುನಾಥ್ ಸಾಹುಕಾರ್, ಅಧ್ಯಕ್ಷರಾಗಿ ಬಾಬುರೆಡ್ಡಿ, ಪ್ರಧಾನ ಕಾರ್ಯದರ್ಶಿ ಆಗಿ ಕೃಷ್ಣಮೂರ್ತಿ ಇವರುಗಳನ್ನು ಆಯ್ಕೆ ಮಾಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಆವರಗೊಳ್ಳದ ಷಣ್ಮುಖಯ್ಯ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಎಂ.ಪಿ.ಕೃಷ್ಣಮೂರ್ತಿ ಪವಾರ್, ಹೆಚ್.ಎಸ್.ಲಿಂಗರಾಜ್ ಮಾತನಾಡಿದರು.

ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಭಾರಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿ ಜಗಳೂರು ಗಾಂಧಿ ಸರ್ಕಲ್‌ನಲ್ಲಿ ಪಟಾಕಿ ಸಿಡಿಸಿ ಹರ್ಷ ವ್ಯಕ್ತಪಡಿಸಲಾಯಿತು. ನಿವೃತ್ತ ಡಿವೈಎಸ್ಪಿ ಶೇಖರಪ್ಪ ಸಭೆಯಲ್ಲಿ ಉಪಸ್ಥಿತರಿದ್ದರು.

# ವಿಧಾನಸಭಾ ಸೋಲಿನ ನಂತರ ಕಾಂಗ್ರೆಸ್ ಮೇಲೆ ಮಿತ್ರರ ವಾಗ್ದಾಳಿ

ನವದೆಹಲಿ, ಡಿ. 4 – ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆ ಆಗಿರುವುದು ಐ.ಎನ್.ಡಿ.ಐ.ಎ. ಮೈತ್ರಿಕೂಟದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಕಾಂಗ್ರೆಸ್ ವಿರುದ್ಧ ಮಿತ್ರ ಪಕ್ಷಗಳು ಟೀಕಾಪ್ರಹಾರ ನಡೆಸಿವೆ.

ಕಾಂಗ್ರೆಸ್ ಪಕ್ಷದ ಉದಾಸೀನ ವರ್ತನೆಯಿಂದಾಗಿ ಹಿನ್ನಡೆಯಾಗಿದೆ. 2024ರ ಲೋಕಸಭಾ ಚುನಾವಣೆಯ ಒಳಗೆ ಅದರ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು ಎಂದು ತೃಣಮೂಲ ಕಾಂಗ್ರೆಸ್ ನಾಯಕ ಅಭಿಷೇಕ್ ಬ್ಯಾನರ್ಜಿ ಹೇಳಿದ್ದಾರೆ.

ನಾನು ಯಾರ ಮೇಲೂ ಆರೋಪ ಮಾಡಲು ಬಯಸುವುದಿಲ್ಲ. ಆದರೆ, ಹಲವಾರು ಕಾಂಗ್ರೆಸ್ ನಾಯಕರು ಉದಾಸೀನ ಹಾಗೂ ಹೆಮ್ಮೆಯ ವರ್ತನೆ ತೋರುತ್ತಿದ್ದಾರೆ. ಅವರು ಅರ್ಹರಿಗೆ ಅವಕಾಶ ನಿರಾಕರಿಸುತ್ತಿದ್ದಾರೆ ಮತ್ತು ತಾವೇ ಪ್ರಚಾರದಲ್ಲಿರಲು ಬಯಸುತ್ತಿದ್ದಾರೆ ಎಂದು ಬ್ಯಾನರ್ಜಿ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ಅರ್ಹರಿಗೆ ಕೆಲಸ ಮಾಡಲು ಅವಕಾಶ ಸಿಗುತ್ತಿಲ್ಲ, ಅವರನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂದೂ ಅವರು ಹೇಳಿದ್ದಾರೆ.

ಡಿಸೆಂಬರ್ 6ರಂದು ಪ್ರತಿಪಕ್ಷಗಳ ಮೈತ್ರಿಕೂಟವಾದ ಐ.ಎನ್.ಡಿ.ಐ.ಎ. ಸಭೆ ದೆಹಲಿಯಲ್ಲಿ ನಡೆಯಲಿದೆ. ಆದರೆ, ಪೂರ್ವ ನಿಯೋಜಿತ ಕಾರ್ಯಕ್ರಮದ ಕಾರಣ ದಿಂದ ಈ ಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಸಭೆ ಇರುವುದು ಗೊತ್ತಿರಲಿಲ್ಲ. ಮೊದಲೇ ತಿಳಿಸಿದ್ದರೆ ಪೂರ್ವ ನಿಯೋಜಿತ ಕಾರ್ಯಕ್ರಮದ ವೇಳೆ ಬದಲಿಸಿಕೊಂಡಿರುತ್ತಿದ್ದೆ ಎಂದು ಮಮತಾ ಬ್ಯಾನರ್ಜಿ ಇಂಗಿತ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ದೆಹಲಿ ನಿವಾಸದಲ್ಲಿ ಮುಖಂಡರು ಸಭೆ ಸೇರಿ 2024ರ ಲೋಕಸಭಾ ಚುನಾವಣಾ ತಂತ್ರಗಾರಿಕೆ ಚರ್ಚಿಸಲು ನಿರ್ಧರಿಸಿದ್ದರು.

ಈ ನಡುವೆ ಹೇಳಿಕೆ ನೀಡಿರುವ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಆಪ್ತರು, ಐ.ಎನ್.ಡಿ.ಐ.ಎ. ಮೈತ್ರಿಕೂಟ ಮುನ್ನಡೆಸಲು ನಿತೀಶ್ ರೀತಿಯ ನಂಬಿಕಾರ್ಹ ವ್ಯಕ್ತಿಗಳು ಬೇಕು ಎಂದು ಹೇಳಿದ್ದಾರೆ.

ಸಚಿವರು ಹಾಗೂ ಜೆಡಿಯು ನಾಯಕರಾದ ವಿಜಯ್ ಕುಮಾರ್ ಚೌಧರಿ ಹಾಗೂ ಅಶೋಕ್ ಚೌಧರಿ ಅವರು ಪ್ರತ್ಯೇಕ ಹೇಳಿಕೆಗಳನ್ನು ನೀಡಿದ್ದು, ಕಾಂಗ್ರೆಸ್ ದೊಡ್ಡಣ್ಣನ ರೀತಿ ಇದೆ. ಆದರೆ, ಆ ಪಕ್ಷ ದೊಡ್ಡ ಹೃದಯವನ್ನೂ ತೋರಬೇಕು ಎಂದಿದ್ದಾರೆ.

ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅತಿ ದೊಡ್ಡ ಹಿನ್ನಡೆಯಾಗಿದೆ. ಇದರಿಂದ ಐ.ಎನ್.ಡಿ.ಐ.ಎ. ಸಭೆಯಲ್ಲಿ ಪಾಠ ಕಲಿಯುವ ನಿರೀಕ್ಷೆ ಇದೆ ಎಂದಿದ್ದಾರೆ.

ಕಾಂಗ್ರೆಸ್ ಇತರೆ ಪಕ್ಷಗಳನ್ನು ಕಡೆಗಣಿಸಿದೆ. ಆದರೆ, ಸ್ವಂತವಾಗಿ ಚುನಾವಣೆಗಳಲ್ಲಿ ಗೆಲ್ಲಲೂ ಸಾಧ್ಯವಾಗಿಲ್ಲ ಎಂದು ಕೆಲ ಮುಖಂಡರು ಹೇಳಿದ್ದಾರೆ.

ವಿಧಾನಸಭಾ ಸೋಲು ಐ.ಎನ್.ಡಿ.ಐ.ಎ. ಮೈತ್ರಿಕೂಟದಲ್ಲಿ ಕಾಂಗ್ರೆಸ್ ವರ್ಚಸ್ಸು ಕುಂದುವಂತೆ ಮಾಡಿದೆ. ನೂತನ ಮೈತ್ರಿಕೂಟದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಕೇಂದ್ರ ಸ್ಥಾನ ನೀಡಲು ಇತರೆ ಪಕ್ಷಗಳು ಹಿಂಜರಿಯುವಂತೆ ಕಾಣುತ್ತಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಹಿಂದಿ ಭಾಷಿಗರ ನಾಡಿನಲ್ಲಿ ಕಾಂಗ್ರೆಸ್ ವಿರುದ್ಧ ಮಹತ್ವಪೂರ್ಣ ಅಲೆ ಇರುವುದು ಕಂಡು ಬರುತ್ತಿದೆ ಎಂದು ಆಮ್ ಆದ್ಮಿ ಪಾರ್ಟಿಯ ಹಿರಿಯ ನಾಯಕರು ಹೇಳಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲಿಸುವುದು ಐ.ಎನ್.ಡಿ.ಐ.ಎ. ಮುಖ್ಯ ಉದ್ದೇಶವಾಗಿದೆ. ಹೀಗಾಗಿ ಬಿಜೆಪಿ ವಿರುದ್ಧ ಹೋರಾಟ ನಡೆಸಲು ಪ್ರಾಂತೀಯ ಪಕ್ಷಗಳಿಗೆ ಹೆಚ್ಚು ಅವಕಾಶ ಬಿಟ್ಟು ಕೊಡಬೇಕು ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಹಿರಿಯ ನಾಯಕ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದ ಅಧಿಕಾರ ದಾಹವೇ ಸೋಲಿಗೆ ಕಾರಣ ಎಂದು ಕೇರಳದ ಮುಖ್ಯಮಂತ್ರಿ ಹಾಗೂ ಸಿಪಿಐ (ಎಂ) ನಾಯಕ ಪಿಣರಾಯಿ ವಿಜಯನ್ ಹೇಳಿದ್ದಾರೆ.

# ವಲಯ ಮಟ್ಟಕ್ಕೆ ರಾಘವೇಂದ್ರ ಪಿಯು ಕಾಲೇಜ್ ವಿದ್ಯಾರ್ಥಿಗಳು



ದಾವಣಗೆರೆ, ಡಿ.4- ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನಗರದ ರಾಘವೇಂದ್ರ ಹೈಟೆಕ್ ಪಿಯು ಕಾಲೇಜು ವಿದ್ಯಾರ್ಥಿಗಳು ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮಾನಸ ಜಿ. ಎಚ್. ಇಂಗ್ಲಿಷ್ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಮಂಜುಳಾ ಎನ್. ಎಚ್. ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಶಶಾಂಕ್ ಕೆ ಚಿತ್ರಕಲಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ, ಅಮೂಲ್ಯ ಲಕ್ಷ್ಮಿ ಭಾವಗೀತೆ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಹಾಗೂ ಸಾನಿಯಾ ಡಿ. ಎಸ್ ಇಂಗ್ಲಿಷ್ ಚರ್ಚಾ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು, ಚಿತ್ರದುರ್ಗದಲ್ಲಿ ನಡೆಯುವ ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕಾಲೇಜಿನ ಪ್ರಾಚಾರ್ಯ ಡಾ. ಅನಿಲ್‌ಕುಮಾರ್ ಶ್ಯಾಗಲೆ, ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯದರ್ಶಿ ಹರೀಶ್ ಎಂ.ಆರ್, ಸಂಚಾಲಕರಾದ ಮೋಹನ್ ಎಚ್, ದಿವ್ಯಾ ಕೆ. ಜಿ. ವಿದ್ಯಾರ್ಥಿ ಗಳನ್ನು ಅಭಿನಂದಿಸಿದ್ದಾರೆ.

# ವಿಪಕ್ಷದ ಪ್ರತಿ ಪ್ರಶ್ನೆಗೂ ಉತ್ತರಿಸಲು ಸರ್ಕಾರ ಸಿದ್ಧ : ಸಿಎಂ

ಬೆಳಗಾವಿ, ಡಿ. 4 - ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ವಿರೋಧ ಪಕ್ಷದವರು ಕೇಳುವ ಪ್ರತಿಯೊಂದು ಪ್ರಶ್ನೆಗೂ ಉತ್ತರಿಸಲು ಸರ್ಕಾರ ಸಿದ್ಧ, ಉತ್ತರ ಕರ್ನಾಟಕದ ಸಮಸ್ಯೆಗಳಿಗೂ ಗಮನಹರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಂಚರಾಜ್ಯಗಳ ಚುನಾವಣೆಗೆ ಸಂಬಂಧಿಸಿದಂತೆ ತೆಲಂಗಾಣದಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಗೆಲುವು ಸಾಧಿಸಿದೆ. ಮಧ್ಯಪ್ರದೇಶದಲ್ಲಿ ಗೆಲುವು ಸಾಧಿಸಿರುವ ಬಿಜೆಪಿ ಸಹ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿತ್ತು ಎಂದರು. ಕಾಂಗ್ರೆಸ್ ಸರ್ಕಾರ ಎಂದಿಗೂ ಚುನಾವಣೆಯಲ್ಲಿ ಗೆಲುವು ಸಾಧಿಸಲೆಂದು ಗ್ಯಾರಂಟಿ ಯೋಜನೆಗಳನ್ನು ಘೋಷಿಸುವುದಿಲ್ಲ, ಬಡಜನರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬುವ ಪ್ರಾಮಾಣಿಕತೆಯಿಂದ ಇವುಗಳನ್ನು ಜಾರಿಗೊಳಿಸಲಾಗಿದೆ. ಗ್ಯಾರಂಟಿ ಯೋಜನೆಗಳೆಲ್ಲ ಬಡವರ ಕಾರ್ಯಕ್ರಮಗಳಾಗಿವೆ.

ಸರ್ಕಾರ ರಚನೆಯಾಗಿ ಆರು ತಿಂಗಳು ಕಳೆದರೂ ಬಿಜೆಪಿಯವರಿಗೆ ವಿಪಕ್ಷ ನಾಯಕನನ್ನು ಆಯ್ಕೆ ಮಾಡಲು ಆಗಿರಲಿಲ್ಲ. ಅವರಿಗೆ ಸರ್ಕಾರವನ್ನು ಪ್ರಶ್ನಿಸುವ ಯಾವ ನೈತಿಕತೆಯೂ ಇಲ್ಲ, ಅವರು ಜಂಟಿಯಾಗಿ ಹೋರಾಟ ನಡೆಸಿದರೂ, ಅವರ ಎಲ್ಲ ಹೋರಾಟ ಎದುರಿಸಲು ಸರ್ಕಾರ ಸಿದ್ಧವಿದೆ ಎಂದರು. ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದು, ಇನ್ನುಳಿದ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಗೆಲ್ಲಲು ಸಾಧ್ಯವಾಗಿಲ್ಲ. ಜನರ ತೀರ್ಮಾನವನ್ನು ಗೌರವಿಸುವ ಜೊತೆಗೆ ಸೋಲಿನ ಕಾರಣಗಳ ಬಗ್ಗೆ ಚಿಂತನೆ ಮಾಡಲಾಗುವುದು ಎಂದು ಹೇಳಿದರು.

ವಿಧಾನಸಭಾಧ್ಯಕ್ಷರ ವಿಷಯ ಕುರಿತು ಸಚಿವ ಜಮೀರ್ ಅಹ್ಮದ್ ಹೇಳಿಕೆಗೆ ಬಿಜೆಪಿಯವರು ರಾಜೀನಾಮೆ ಕೇಳುತ್ತಿರುವುದು ಸರಿಯಿಲ್ಲ, ಸಚಿವರು, ಉದ್ದೇಶಪೂರ್ವಕವಾಗಿ ಹೇಳಿಕೆ ನೀಡಿಲ್ಲ ಎಂದು ಸಮರ್ಥಿಸಿಕೊಂಡರು. ವಿಧಾನಸಭೆಯ ಒಳಗೆ ಸಾವರ್ಕರ್ ಭಾವಚಿತ್ರ ತೆಗೆಯುವ ಬಗ್ಗೆ ಸಭಾಧ್ಯಕ್ಷರು ತೀರ್ಮಾನ ಕೈಗೊಳ್ಳುತ್ತಾರೆ ಎಂದರು.

# ಭರಮಸಾಗರ ಮುಕ್ತಿಧಾಮ ಅಭಿವೃದ್ಧಿಗೆ ಸಹಕಾರಕ್ಕೆ ಮನವಿ

ಭರಮಸಾಗರ, ಡಿ.4- ಸ್ಥಳೀಯ ಮುಕ್ತಿಧಾಮದಲ್ಲಿ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಸಂಸ್ಥೆ ಹಾಗೂ ಕೆಲವು ದಾನಿಗಳಿಂದ ಸಹಕಾರ ಪಡೆದು ಅಭಿವೃದ್ಧಿ ಕಾರ್ಯ ಮಾಡಲಾಗಿದೆ. ಆದರೆ ಮುಕ್ತಿಧಾಮ ಸುತ್ತಲೂ ಇರುವ ಜಾಗಕ್ಕೆ ಕಾಂಪೌಂಡ್ ಮಾಡಲು ಸಮಿತಿಯಲ್ಲಿ ಹಣದ ಕೊರತೆ ಇದೆ. ಇದರ ಅಂದಾಜು 3.5 ಲಕ್ಷ ರೂ. ಇಂಜಿನಿಯರ್ ರವರು ತಿಳಿಸಿರುತ್ತಾರೆ. ಇಂತಹ ಒಂದು ಉತ್ತಮ ಕೆಲಸಕ್ಕೆ ಸಮಿತಿ ಸಾರ್ವಜನಿಕರ ಸಹಕಾರ ಬಯಸುತ್ತದೆ ಎಂದು ಮುಕ್ತಿ ಧಾಮ ಸಮಿತಿ ಕಾರ್ಯದರ್ಶಿ ಬಿ. ಜೆ. ಅನಂತಪದ್ಮನಾಭ ರಾವ್ ಮನವಿ ಮಾಡಿಕೊಂಡಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9964891029. ಸಹಕಾರ ನೀಡುವವರು, ಭರಮಸಾಗರ ಕೆನರಾ ಬ್ಯಾಂಕ್ ಮುಕ್ತಿಧಾಮ ಅಕೌಂಟ್ ನಂಬರ್ 0483101106738, ಐಎಫ್‌ಎಸ್‌ಸಿ ಕೋಡ್ CNRB0000483 ಮೂಲಕ ಹಣ ಕಳುಹಿಸಬಹುದಾಗಿದೆ.

# ಚುನಾವಣೆಗಳಿಂದ ಐ.ಎನ್.ಡಿ.ಐ.ಎ. ಮೇಲೆ ಪರಿಣಾಮವಿಲ್ಲ


ನವದೆಹಲಿ, ಡಿ. 4 – ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳ ಫಲಿತಾಂಶದಿಂದ ಐ.ಎನ್.ಡಿ.ಐ.ಎ. ಒಕ್ಕೂಟದ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ಅದರ ನಾಯಕರು ಹೇಳಿದ್ದಾರೆ.

ಐ.ಎನ್.ಡಿ.ಐ.ಎ. ಮಿತ್ರಪಕ್ಷಗಳು ಕಠಿಣ ಪರಿಶ್ರಮ ತೋರಬೇಕಿದೆ. ಸೋಲು - ಗೆಲುವು ಇದ್ದೇ ಇರುತ್ತವೆ. ನಾವು ಸೋಲಿನಿಂದ ಪಾಠ ಕಲಿಯಬೇಕು ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಹೇಳಿದ್ದಾರೆ.

ಈ ಫಲಿತಾಂಶದಿಂದ ಮೈತ್ರಿಕೂಟದ ಮೇಲೆ ಪರಿಣಾಮವಾಗುವುದಿಲ್ಲ. ಇವು ರಾಜ್ಯಗಳ ಚುನಾವಣೆಗಳಷ್ಟೇ. ರಾಷ್ಟ್ರೀಯ ಚುನಾವಣೆಗಳನ್ನು ಬೇರೆ ವಿಷಯಗಳ ಮೇಲೆ ಎದುರಿಸಲಾಗುತ್ತದೆ ಎಂದು ಆರ್.ಜೆ.ಡಿ. ನಾಯಕ ಮನೋಜ್ ಝಾ ಹೇಳಿದ್ದಾರೆ.

ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಹೇಳಿಕೆ ನೀಡಿದ್ದು, ಚುನಾವಣೆಗಳಲ್ಲಿ ಎಲ್ಲಿ ತಪ್ಪಾಗಿದೆ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲಾಗುವುದು. ಆದರೆ, ಈ ಫಲಿತಾಂಶದಿಂದ ಪ್ರತಿಪಕ್ಷಗಳ ಒಕ್ಕೂಟದ ಮೇಲೆ ಪರಿಣಾಮವಾಗುವುದಿಲ್ಲ ಎಂದಿದ್ದಾರೆ. ಸೋಮವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸಂಸದೀಯ ಕಚೇರಿಯಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಪ್ರತಿಪಕ್ಷಗಳ ಎಲ್ಲ ನಾಯಕರು ಪಾಲ್ಗೊಂಡಿದ್ದರು.

# ಅಂತರ ಕಾಲೇಜು ಚೆಸ್ - ಯೋಗ ಪಂದ್ಯಾವಳಿ




ದಾವಣಗೆರೆ, ಡಿ.4- ಅಂತರ ಕಾಲೇಜು ಪಂದ್ಯಾವಳಿಯಲ್ಲಿ ಚೈತನ್ಯ ಹೈಟೆಕ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್, ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಕಾಲೇಜಿನ ವಿದ್ಯಾರ್ಥಿ ಸಾಜಿದ್ ಬಳ್ಳೂರು ಚೆಸ್ ಸ್ಪರ್ಧೆಯಲ್ಲಿ ಹಾಗೂ ಸೃಷ್ಟಿ ಜಿ.ಲಕ್ಕುಂಡಿ ಯೋಗಾಸನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆಯುವುದರ ಮೂಲಕ ಚೆನ್ನೈನಲ್ಲಿ ನಡೆಯುವ ಸೌತ್‌ವೆಸ್ಟ್ ಝೋನ್ ಅಂತರ ವಿಶ್ವವಿದ್ಯಾನಿಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಸೈಯದ್ ರಿಹಾನ್ ವೈಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

**ಸೈಟು ಮಾರಾಟಕ್ಕೆ (KHB)**
ಕರ್ನಾಟಕ ಗೃಹಮಂಡಳಿಯಲ್ಲಿ ಮತ್ತು ಪಕ್ಕ
1) 30x40 ಪೂರ್ವ, 2,500 ಅಡಿಗೆ
2) 30x40 ದಕ್ಷಿಣ, 2,450 ಅಡಿಗೆ
3) 40x60 ದಕ್ಷಿಣ, 2,600 ಅಡಿಗೆ
4) ಪಕ್ಕ 30x40 ಕಾರ್ನರ್, 2,300 ಅಡಿಗೆ
5) ಪಕ್ಕ 30x40 ಪೂರ್ವ, 2,300 ಅಡಿಗೆ
ಕಿರಣ್ ಬೂಸ್ನೂರ್ (ಏಜೆಂಟ್)
97315 63409

**ಬೇಕಾಗಿದ್ದಾರೆ**
ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಭೇಟಿಯ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ.
ಸಂಪರ್ಕಿಸಿ:
08192 254736

**ಖಾಲಿ ಜಾಗ ಬಾಡಿಗೆಗೆ ಇದೆ**
BIET ರಸ್ತೆಯ ಹೇಮಾವತಿ ಹಾಸ್ಟೆಲ್ ಎದುರು ಇರುವ ಖಾಲಿ ಜಾಗವನ್ನು ಬಿಡಿ ಬಿಡಿಯಾಗಿ ಅಥವಾ ಪೂರ್ತಿಯಾಗಿ ಬಾಡಿಗೆಗೆ ಕೊಡಲಾಗುವುದು. ಸಂಪರ್ಕಿಸಿ :
97424 34049

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ, ಎಎನ್‌ಎಂ
91486 83185, 95355 32369

**ಸೈಟ್/ಮನೆ ಮಾರಾಟಕ್ಕಿವೆ**
30x20 ಮನೆ ಮಾರಾಟಕ್ಕೆ ಮುಸ್ಲಿಂ family Only
40x60 ಮನೆ ದೇವರಾಜ ಅರಸು ಎ ಬ್ಲಾಕ್, ಮಾರಾಟಕ್ಕಿದೆ.
40x80 ಸೈಟ್ ಎಸ್.ಎಸ್. ಲೇ ಔಟ್ ಬಿ ಬ್ಲಾಕ್
27x69 ಕಾಂಪ್ಲೆಕ್ಸ್ For Sale
19x37 ಸೈಟ್ ಮಾರಾಟಕ್ಕಿದೆ.
97402 00533

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಮತ್ತು ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ. M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್ #43H, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
99001 42052

**ಲಿಂಗಾಯತ ವಧು ಬೇಕಾಗಿದೆ**
ಲಿಂಗಾಯತ ಸಾದರ 28 ವರ್ಷದ BE, ಒಬ್ಬನೇ ಮಗ, ಸ್ವಂತ ಪೆಟ್ರೋಲ್ ಬಂಕ್ ಬ್ಯುಸಿನೆಸ್ ಹೊಂದಿರುವ ವರನಿಗೆ ಸುಂದರ ವಧು ಬೇಕಾಗಿದೆ.
98807 29108

**ಸೇಲ್ಸ್ & ಮಾರ್ಕೆಟಿಂಗ್**
ಸೇಲ್ಸ್ & ಮಾರ್ಕೆಟಿಂಗ್ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ.
ವಯೋಮಿತಿ-20 ರಿಂದ 30 ವರ್ಷ ಒಳಗೆ
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
96206 38679

**ಬೇಕಾಗಿದ್ದಾರೆ**
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 15000 (ESI, PF, ಸೌಲಭ್ಯವಿರುತ್ತದೆ) ಸ್ಥಳ: ಮೈಸೂರು.
98450 10281

**ಬೇಕಾಗಿದ್ದಾರೆ**
ವಿಡಿಯೋ ಎಡಿಟಿಂಗ್ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ.
ಮನೆ ಬಾಡಿಗೆಗೆ ಇದೆ. ಸಾಯಿಬಾಬಾ ದೇವಸ್ಥಾನ ಹಿಂಭಾಗ ಎಂ.ಸಿ.ಸಿ. 'ಎ' ಬ್ಲಾಕ್, ಪೂರ್ವ 3BHK (ರೂ. 7500) Veg Only.
70196 18397

**ಪತ್ರ ಕಳೆದಿದೆ**
ರುದ್ರಮ್ಮ ಬಿ.ಆರ್. ಕೋಂ ಸಿದ್ದಲಿಂಗಸ್ವಾಮಿ ಎಂ. ನಂ. 363, ಬಿ ಬ್ಲಾಕ್, ಎಸ್.ಓ.ಜಿ. ಕಾಲೋನಿ, ಇವರ ಹೆಸರಿನಲ್ಲಿರುವ ಆಧಾರ್ ಖುಲ್ಲಾಸ್ ಪತ್ರವು ದಿ.. 3.12.2023ರಂದು ಮನೆಯನ್ನು ಸ್ವಚ್ಛ ಮಾಡುವಾಗ ಕಳೆದಿದ್ದು ಸಿಕ್ಕಲ್ಲಿ ಈ ಕೆಳಗಿನ ನಂಬರ್‌ಗೆ ತಿಳಿಸಿ.
89513 45250

**ಹುಡುಗರು ಬೇಕಾಗಿದ್ದಾರೆ**
ಶ್ರೀ ಆಪ್ಟಿಕಲ್ಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಶ್ರೀ ಆಪ್ಟಿಕಲ್ಸ್
ಪಿ.ಜೆ. ಬಡಾವಣೆ, ದಾವಣಗೆರೆ.
98864 04287

**Finance Advisor**
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96326 11005

**FOR SALE**
1) 22x60 House with 3 BHK @ 3rd cross, MCC 'A' Block 2) 44x60 East facing, Land Sai Mandir Road, MCC 'A' Block, Davangere.
80883 44383

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ ಪಾರ್ಕ್ ಹಿಂಭಾಗ, ವಿನಾಯಕ ಬಡಾವಣೆಯ ಮೊದಲನೇ ಮುಖ್ಯರಸ್ತೆಯಲ್ಲಿ 2BHK ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
63648 13491, 94496 29021

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.6.12.2023ರ ಬುಧವಾರ
ದಿ.7.12.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**REQUIRED**
B.Com Graduate with tally knoweldge.
Contact between 11 AM to 60 PM.
94496 29021, 96861 39621

**Need Computer Operator**
Near Ram & Co. Circle
Male Only
70221 58395

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TO LET - 1 BHK**
No. 903, 2nd Floor, 2nd main, 4th Cross, Nijalingappa Layout, Near Ayyappa Swamy Temple, Davangere -04. Karnataka.
98452 52505

**Site For Sale**
30x40 North West Corner, Behind SS Hi-Tech Hospital, Davangere.
96069 04902

**Site For Sale**
30x40 North West Corner, Behind SS Hi-Tech Hospital, Davangere.
96069 04902

**WANTED**
Office Assistant cum Car Driver
Winners Career Academy
Davanagere.
98869 97892

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಕೆಲಸಕ್ಕೆ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ
(Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ.. ಮೇಕಪ್, ಸ್ಯಾರೀ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್, ಮೇಕಪ್ ಕಲಿಕೆಗೆ ಪ್ರಾಡಕ್ಟ್‌ಗಳನ್ನು ಕೊಡಲಾಗುತ್ತದೆ. ಎರಡು portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio
ಗಿರಿಜ - ಮೇಕಪ್ ಆರ್ಟಿಸ್ಟ್
94817 76305

**ಶ್ರೀ ಸಾಯಿಬಾಬಾ ಬೋರ್‌ವೆಲ್**
350ರಿಂದ 450ರ ವರೆಗೂ ಕೊರೆಯಬಹುದು. ಮನೆ ಒಳಗೆ / ಮನೆ ಹೊರಗೆ. ದಾವಣಗೆರೆ.
99640 78484, 95906 15776

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**LADIES STAFF**
REQUIRED FOR EXCLUSIVE TEXTILE SHOWROOM
PH : 9886757688

**WANTED**
Female Candidate having the Degree of Commerce is required to work in Auditor office.
Contact : B.G. Basavarajappa, #43H SJJM Complex, Jayadeva Circle Road, Davanagere.
99001 42052

# ಸರ್ವರ ದುಃಖ ನಿವಾರಿಸಿ, ಆನಂದದ ಪಯಣ ಮಾಡಿದ 'ಜೆಕೆ'



## ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ

ದಾವಣಗೆರೆ, ಡಿ. 4- 20ನೇ ಶತಮಾನದ ದಾರ್ಶನಿಕ, ಚಿಂತಕ ಜಿದ್ದು ಕೃಷ್ಣಮೂರ್ತಿಯವರು ತಮ್ಮ ತೊಂಭತ್ತೊಂದುವರೆ ವರ್ಷದ ಜೀವನದಲ್ಲಿ ಸರ್ವರ ದುಃಖ ನಿವಾರಿಸಿ ಆನಂದದ ಪಯಣವ ತಾವೂ ಮಾಡಿ, ಜಗತ್ತಿಗೂ ಮಾರ್ಗದರ್ಶಕರಾದರು ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಅಭಿಪ್ರಾಯಿಸಿದರು.

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ್ ಕಚೇರಿಯಲ್ಲಿ ಜರುಗಿದ 'ಚಿಂತನ ಮಂಥನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಿದ್ದು ಕೃಷ್ಣಮೂರ್ತಿ ಎಲ್ಲಾ ಜಾತಿ, ಕುಲ, ದೇಶ, ಭಾಷೆ ಅವರು ಭೇದಗಳಿಂದ ಮುಕ್ತರಾಗಿದ್ದರು. ತಾವು ವಿಶ್ವ ಪ್ರಜೆ ಎಂದು ಹೇಳಿಕೊಳ್ಳುತ್ತಿದ್ದರು. ಪ್ರೀತಿಯಿಂದ, ಆನಂದವಾಗಿ ಜೀವನ ಸಾಗಿಸುವುದು ಹೇಗೆ? ಎಂದು 65 ವರ್ಷಗಳ ಕಾಲ ಭಾಷಣ ಮಾಡುತ್ತಾ ಜೀವನ ಸಾಗಿಸಿದರು.

ಆಲೋಚನೆಗಳ ಖ್ಯಾತಿ, ಹಣ, ನಿರರ್ಥಕ ಆಲೋಚನೆಗಳಲ್ಲಿ ಸಿಕ್ಕಾಕಿಕೊಂಡು ಅಮೂಲ್ಯವಾದ ಜೀವನ ಹಾಳುಮಾಡಿಕೊಳ್ಳುತ್ತಾನೆ. ಜಾನಪದದಲ್ಲಿನ ಕವಿತೆಯಂತೆ 'ಆಚಾರಕ್ಕೆ ಅರಸನಾಗಿ, ನೀತಿಗೆ ಪ್ರಭುವಾಗಿ, ಮಾತಿನಲ್ಲಿ ಚೂಡಾಮಣಿಯಾಗಿ, ಜಗಕ್ಕೆ ಜ್ಯೋತಿಯಾಗು..' ಎನ್ನುವಂತೆ ಅವರು ಇಡೀ ಜೀವನ ನಡೆಸಿದರು ಎಂದು ಬಸವಲಿಂಗಪ್ಪ ಸ್ಮರಿಸಿದರು.

ಪ್ರೊ. ಎಂ. ಬಸವರಾಜ್ ಮಾತನಾಡಿ ಜೆ.ಕೆ. ಯವರ ಚಿಂತನೆಗಳನ್ನು ನಾವು ಗಂಭೀರವಾಗಿ ಪರಿಗಣಿಸಿ ಬಾಳುತ್ತಾ ಹೋದರೆ ಅರಿವು ಆಧಾರಿತ ಸಾಮೂಹಿಕ ಕಾರ್ಯಗಳಾಗುತ್ತವೆ. ಸಮಷ್ಟಿ ಜೀವನ ಚೆನ್ನವಾದರೆ, ವ್ಯಕ್ತಿಯ ಜೀವನವೂ ಚೆನ್ನಗಾಗುತ್ತದೆ. ಆ ದೆಸೆಯಲ್ಲಿ ನಾವು ಬಾಳೋಣ ಎಂದರು.

ಚಿಂತಕ ಮಲ್ಲಾಬಾದಿ ಬಸವರಾಜ್ ಮಾತನಾಡಿ, ಜೆ.ಕೆ ಯವರ ಚಿಂತನೆಗಳಿಂದ ಪ್ರೇರೇಪಿತನಾದ ನಾನು, ವೈಯಕ್ತಿಕವಾಗಿ ಸಾಕಷ್ಟು ಬದಲಾವಣೆ ಮಾಡಿಕೊಂಡಿದ್ದೇನೆ. ಜೆ.ಕೆಯವರ ವೈಚಾರಿಕ ಮತ್ತು ಮಾನವೀಯ ಚಿಂತನೆಗಳನ್ನು ಅಳವಡಿಸಿಕೊಂಡಿರುವುದರಿಂದ ನನ್ನ ಜೀವನ ಆನಂದಮಯವಾಗಿದೆ ಎಂದರು.

ಚಿಂತನ-ಮಂಥನದಲ್ಲಿ ದಯಾನಂದ್, ರಾಮನಗೌಡ ಕುಸಗೂರು, ರಾಜಗೋಪಾಲ್, ಮುರಳೀಧರ ಮುಂತಾದವರಿದ್ದರು.

# ಗಾಯಾಳುಗಳಿಗೆ ಶಾಸಕ ಬಸವಂತಪ್ಪ ನೆರವು



ದಾವಣಗೆರೆ, ಡಿ.4- ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಮುಂಭಾಗದ ಶಿರಮಗೊಂಡನಹಳ್ಳಿ ಬ್ರಿಡ್ಜ್ ಬಳಿ ಸೋಮವಾರ ಸಂಜೆ ರಸ್ತೆ ಅಪಘಾತ ಸಂಭವಿಸಿದ್ದು, ಗಾಯಗೊಂಡವರನ್ನು ಶಾಸಕ ಕೆ.ಎಸ್. ಬಸವಂತಪ್ಪ ಅವರು ಉಚಿತ ಆಂಬ್ಯುಲೆನ್ಸ್ ಮಾಡಿಸಿ, ಆಸ್ಪತ್ರೆಗೆ ಸಾಗಿಸಲು ನೆರವಾಗಿ ಮಾನವೀಯತೆ ಮೆರೆದಿದ್ದಾರೆ. ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಬೆಳಗಾವಿ ಅಧಿವೇಶನಕ್ಕೆ ತೆರಳುತ್ತಿದ್ದ ಬಸವಂತಪ್ಪ ಅವರು, ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ.

ಬಳಿಕ ಮೃತಪಟ್ಟ ಮಹಿಳೆಯ ಕೊರಳಲ್ಲಿದ್ದ ಚಿನ್ನಾಭರಣಗಳನ್ನು ತೆಗೆದು ಅವರ ಸಂಬಂಧಿಕರಿಗೆ ಹಸ್ತಾಂತರ ಮಾಡಿಸಿದ್ದಾರೆ. ನಂತರ ಚಿಗಟೇರಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿ, ವೈದ್ಯರಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದ್ದಾರೆ. ಬಳಿಕ ಅಧಿವೇಶನಕ್ಕೆ ತೆರಳಿದ್ದಾರೆ.

# ಸಂವಿಧಾನದ ಪೀಠಿಕೆಯೊಂದಿಗೆ ಅಧಿವೇಶನಕ್ಕೆ ಚಾಲನೆ : ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ

ಬೆಂಗಳೂರು, ಡಿ. 4 - ಬೆಳಗಾವಿಯ ಸುವರ್ಣ ಸೌಧದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ಸದನ ಸದಸ್ಯರು ಸಂವಿಧಾನ ಪೀಠಿಕೆ ಓದುವ ಮೂಲಕ ಅಧಿವೇಶನದ ಕಾರ್ಯ ಕಲಾಪಗಳಿಗೆ ಚಾಲನೆ ನೀಡಿದರು.

ನಂತರ ಸಭಾಧ್ಯಕ್ಷ ಯು.ಟಿ.ಖಾದರ್ ಅವರು, ಇತ್ತೀಚೆಗೆ ನಿಧನರಾದ ಮಾಜಿ ಸಭಾಧ್ಯಕ್ಷ ಡಿ.ಬಿ. ಚಂದ್ರೇಗೌಡ, ಮಾಜಿ ಸಚಿವ ಶ್ರೀರಂಗದೇವರಾಯಲು, ಮಾಜಿ ಶಾಸಕರುಗಳಾದ ಸಿ.ವೆಂಕಟೇಶಪ್ಪ, ಶ್ರೀಕಾಂತ್ ಶೆಟ್ಟೆಪ್ಪ ಭೀಮಣ್ಣವರ, ವಿಲಾಸಬಾಬು ಆಲಮೇಕರ್, ಈಶಾನ್ಯ ರಾಜ್ಯಗಳ ಮಾಜಿ ರಾಜ್ಯಪಾಲರಾಗಿದ್ದ ಪಿ.ಬಿ.ಆಚಾರ್ಯ ಹಾಗೂ ಇತ್ತೀಚೆಗೆ ಉಗ್ರರ ದಾಳಿಯಲ್ಲಿ ಮೃತಪಟ್ಟ ಕರ್ನಾಟಕದ ಮಂಗಳೂರು ಜಿಲ್ಲೆಯ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಸೇರಿದಂತೆ ಕ್ಯಾಪ್ಟನ್ ಶುಭಂ ಗುಪ್ತಾ, ಹವಾಲ್ದಾರ್ ಅಬ್ದುಲ್ ಮಜಿದ್, ಲಾನ್ಸ್ ನಾಯಕ ಸಂಜಯ್ ಬಿಸ್ಟ್ ಮತ್ತು ಪ್ಯಾರಾ ಟ್ರೂಪರ್ ಸಚಿನ್ ಲಾರ್ ಅವರಿಗೆ ಸಂತಾಪ ಸೂಚನಾ ನಿರ್ಣಯವನ್ನು ಸದನದಲ್ಲಿ ಮಂಡಿಸಿದರು.

ಮೃತರ ಗೌರವಾರ್ಥ ಸದನದಲ್ಲಿ ಒಂದು ನಿಮಿಷ ಮೌನಾಚರಣೆ ಆಚರಿಸಲಾಯಿತು.

# ದೇವದಾಸಿಯರ ಪುನರ್ ಸಮೀಕ್ಷೆ ಕೈಗೊಳ್ಳಲು ಆಗ್ರಹ

ದಾವಣಗೆರೆ, ಡಿ. 4- ದೇವದಾಸಿಯರ ಮತ್ತು ಮಾಜಿ ದೇವದಾಸಿಯರ ಪುನರ್ ಸಮೀಕ್ಷೆ ಕಾರ್ಯಕ್ಕೆ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳಬೇಕು. ಮತ್ತವರ ಮಕ್ಕಳಿಗೆ ಶಿಕ್ಷಣ, ಉದ್ಯೋಗ ಕಲ್ಪಿಸಬೇಕೆಂಬ ನಿರ್ಣಯಗಳನ್ನು ಹರಿಹರದಲ್ಲಿ ನಡೆದ ಮಹಿಳಾ ಒಕ್ಕೂಟದ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ತೆಗೆದುಕೊಳ್ಳಲಾಯಿತು ಎಂದು ಒಕ್ಕೂಟದ ರಾಜ್ಯಾಧ್ಯಕ್ಷರಾದ ಎ. ಜ್ಯೋತಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹರಿಹರದಲ್ಲಿ ಡಿ.2 ಮತ್ತು 3 ರಂದು ಎರಡು ದಿನಗಳ ಕಾಲ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಇದೇ ವೇಳೆ ನೂತನ ಪದಾಧಿಕಾರಿಗಳ ಸಹ ಆಯ್ಕೆ ಮಾಡಲಾಯಿತು ಎಂದರು.

ಅಧ್ಯಕ್ಷರಾಗಿ ಎ. ಜ್ಯೋತಿ, ಕಾರ್ಯದರ್ಶಿಯಾಗಿ ಕೆ. ರೇಣುಕಾ, ಖಜಾಂಚಿಯಾಗಿ ದಿವ್ಯಾ ಎಸ್. ಬಿರಾದಾರ್, ಉಪಾಧ್ಯಕ್ಷೆಯಾಗಿ ಪದ್ಮಾ ಪಾಟೀಲ್, ಸಹ ಕಾರ್ಯದರ್ಶಿಯಾಗಿ ವೈ.ಮಹಾದೇವಮ್ಮ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿರುವ ಮಹಿಳೆಯರ ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ, ಮುಂದಿನ ಹೋರಾಟಗಳ ರೂಪು-ರೇಷೆಗಳ ಕುರಿತು ಚಿಂತನೆ ನಡೆಸಲಾಯಿತು ಎಂದು ಹೇಳಿದರು.

ಹೆಣ್ಣು ಭ್ರೂಣ ಹತ್ಯೆ, ಮಕ್ಕಳ ಮಾರಾಟ ದಂಧೆ, ಕ್ಷೀಣಿಸುತ್ತಿರುವ ಲಿಂಗಾನುಪಾತ, ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು, ನಿರ್ಲಕ್ಷಿತ ಮಹಿಳೆಯರ ಆರೋಗ್ಯ ಸಮಸ್ಯೆ, ಉದ್ಯೋಗ ಖಾತ್ರಿಯಲ್ಲಿನ ಲೋಪದೋಷಗಳು, ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸುವ ಬಗ್ಗೆ ಲಿಂಗ ತಾರತಮ್ಯವನ್ನು ಹೋಗಲಾಡಿಸುವ ಕುರಿತು, ಕೋಮುವಾದವನ್ನು ನಿಯಂತ್ರಿಸುವುದು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ನಿರ್ಣಯಗಳನ್ನು ಸಭೆಯಲ್ಲಿ ಅಂಗೀಕರಿಸಲಾಯಿತು ಎಂದರು.

ಸುದ್ದಿಗೋಷ್ಠಿಯಲ್ಲಿ ಎಸ್. ದಿವ್ಯಾ, ಎಂ.ಬಿ. ಶಾರದಮ್ಮ, ರೇಣುಕಾ, ಎಸ್.ಎಸ್. ಮಲ್ಲಮ್ಮ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು 'ನಮ್ಮ ಹೆಮ್ಮೆಯ ಕನ್ನಡಿಗ'

ಕೋಟಕ್ ಸಂಸ್ಥೆ ವತಿಯಿಂದ ಗ್ರೀನ್ ಪಾರ್ಕ್ ಹೋಟೆಲ್ ಪಕ್ಕ ಸಂಕಮ್‌ನಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ತಾಲ್ಲೂಕು ಘಟಕದ ಎಲ್ಲಾ ಪದಾಧಿಕಾರಿಗಳೆಲ್ಲರಿಗೂ 'ನಾನು ಹೆಮ್ಮೆಯ ಕನ್ನಡಿಗ' ಎಂಬ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

# ಇ-ಜನ್ಮ ತಂತ್ರಾಂಶದಲ್ಲಿ ಜನನ-ಮರಣ ನೋಂದಣಿ ಕಡ್ಡಾಯ



## ಜಿಲ್ಲೆಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅಭಿಯಾನದಡಿ ಒಂದು ದಿನ ನಿಗದಿ ಮಾಡಿ ನೊಂದಣಿಗೆ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಸೂಚನೆ

ದಾವಣಗೆರೆ, ಡಿ. 4 - ಜಿಲ್ಲೆಯಲ್ಲಿನ ಜನನ ಹಾಗೂ ಮರಣ ನೋಂದಣಿಯನ್ನು ಕಡ್ಡಾಯವಾಗಿ ಇ-ಜನ್ಮ ತಂತ್ರಾಂಶದಲ್ಲಿ ದಾಖಲಿಸಬೇಕು, ನೊಂದಣಿಗೆ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅಭಿಯಾನದಡಿ ಒಂದು ದಿನ ನಿಗದಿ ಮಾಡಿ ನೊಂದಣಿಗೆ ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೊನ್ನೆ ನಡೆದ ಜಿಲ್ಲಾ ಮಟ್ಟದ ನಾಗರೀಕ ನೋಂದಣಿ ಪದ್ಧತಿ ಹಾಗೂ ಕೃಷಿ ಅಂಕಿ ಅಂಶಗಳ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸಕ್ತ 2023 ರ ಸಾಲಿನ ಜನವರಿಯಿಂದ ಅಕ್ಟೋಬರ್ ವರೆಗೆ ಜನನ ಅಂಕಿ ಅಂಶದಲ್ಲಿ 12601 ಗಂಡು, 11830 ಹೆಣ್ಣು ಸೇರಿ 24998 ಜನನ ಪ್ರಕರಣಗಳಿವೆ. ಮರಣ ಪ್ರಕರಣಗಳಲ್ಲಿ ಇದೇ ಅವಧಿಯಲ್ಲಿ 7951 ಗಂಡು, 5678 ಹೆಣ್ಣು ಸೇರಿ 13629 ಮರಣ ಪ್ರಕರಣಗಳು ಜಿಲ್ಲೆಯಲ್ಲಿ ಜರುಗಿದೆ. ಜನನ ಹಾಗೂ ಮರಣಗಳ ಅಂಕಿ ಅಂಶಗಳನ್ನು ಇ-ಜನ್ಮ ತಂತ್ರಾಂಶದಲ್ಲಿ ನೋಂದಾಯಿಸಲಾಗಿದ್ದು, 2015 ರಿಂದ 2021 ರ ವರೆಗೆ 3689 ಜನನ ಪ್ರಕರಣಗಳು, 1427 ಮರಣದ ಪ್ರಕರಣಗಳು ಸೇರಿ 5116 ನೋಂದಣಿಯಾಗದ ಪ್ರಕಾರಣಗಳನ್ನು ಶೀಘ್ರವೇ ಅಭಿಯಾನದ ಮೂಲಕ ಇತ್ಯರ್ಥ ಮಾಡಿ ಇ-ಜನ್ಮ ತಂತ್ರಾಂಶದಲ್ಲಿ ನೋಂದಣಿಗೆ ಅಧಿಕಾರಿಗಳು ಕ್ರಮ ವಹಿಸಬೇಕು.

ಗ್ರಾಮೀಣ ಪ್ರದೇಶದಲ್ಲಿ ಗ್ರಾಮಲೆಕ್ಕಿಗರು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಜನನ, ಮರಣ ನೊಂದಣಿ ಪ್ರಾಧಿಕಾರವಾಗಿದ್ದು ನಗರ, ಪಟ್ಟಣ ಪ್ರದೇಶದಲ್ಲಿ ಮುಖ್ಯಾಧಿಕಾರಿ, ಆಯುಕ್ತರು ಪ್ರಾಧಿಕಾರವಾಗಿರುತ್ತಾರೆ.

ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೂ ತೆರಳಿ ಜನನ, ಮರಣದ ಸಂಪೂರ್ಣ ಮಾಹಿತಿಯನ್ನು ಪಡೆದು ನೋಂದಣಿ ಕಾರ್ಯದಲ್ಲಿ ಕಡ್ಡಾಯವಾಗಿ ಭಾಗವಹಿಸಿ ನೂರರಷ್ಟು ಗುರಿ ಸಾಧಿಸಬೇಕು. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಮರಣ ಹೊಂದಿದವರ ಮರಣ ಪ್ರಮಾಣ ಪತ್ರ ಪಡೆಯಲು 4 ಮತ್ತು 4.ಎ ಅರ್ಜಿಯನ್ನು ಭರ್ತಿ ಮಾಡಿ, ವೈದ್ಯಕೀಯ ಪ್ರಮಾಣ ಪತ್ರ ಪಡೆದು ಇ-ಜನ್ಮ ತಂತ್ರಾಂಶದಲ್ಲಿ ನೋಂದಾಯಿಸಬೇಕು. ಜನನ-ಮರಣ ದರ; 2022 ರಲ್ಲಿ ಜನನ ಮತ್ತು ಮರಣ ದರ 1000 ಕ್ಕೆ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ 11.61, ನಗರ ಪ್ರದೇಶದಲ್ಲಿ 22.52 ಸೇರಿದಂತೆ ಒಟ್ಟು ಜನನ ದರ 15.30 ಹಾಗೂ ಮರಣ ದರ ಗ್ರಾಮೀಣ 7.71, ನಗರ ಪ್ರದೇಶ 7.55 ಸೇರಿ ಒಟ್ಟು 7.66 ರಷ್ಟಿದ್ದು, ಗ್ರಾಮೀಣ ಭಾಗದಲ್ಲಿ ಮರಣ ಪ್ರಮಾಣ ಹೆಚ್ಚಾಗುತ್ತಿದ್ದು ಆರೋಗ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ನೋಂದಣಿ ಕುರಿತಂತೆ ಜನರಲ್ಲಿ ಅರಿವು ಮೂಡಿಸಿ ಕೂಲಂಕುಶವಾಗಿ ಪರಿಶೀಲನೆ ನಡೆಸಿ, ಜನನ ಹಾಗೂ ಮರಣ ಪ್ರಮಾಣ ಪತ್ರಗಳು ಸುಲಭವಾಗಿ ಸಿಗುವಂತೆ ನೋಡಿಕೊಳ್ಳಬೇಕು.

ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ 916 ನೊಂದಣಿ ಘಟಕಗಳು, ನಗರ ಪ್ರದೇಶದಲ್ಲಿ 20 ಸೇರಿದಂತೆ ಒಟ್ಟು 936 ನೊಂದಣಿ ಘಟಕಗಳಿರುತ್ತವೆ.

ಪ್ರಸಕ್ತ ಸಾಲಿನಲ್ಲಿ ಮಳೆಯ ಕೊರತೆಯಿಂದಾಗಿ ಮುಂಗಾರು ಹಂಗಾಮಿನ ಬೆಳೆಗಳು ಸಂಪೂರ್ಣವಾಗಿ ಹಾನಿಯಾಗಿದ್ದು, ವಿಮಾ ಕಂಪನಿಗಳು ರೈತರಿಗೆ ಗೊಂದಲಕ್ಕೆ ಎಡೆಮಾಡಿಕೊಡದೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಗ್ರಾಮ, ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮೀಕ್ಷೆ ನಡೆಸಿ ರೈತರ ಬಳಿ ಮೂಲ ದಾಖಲೆಗಳನ್ನು ಪಡೆದು ಪರಿಶೀಲಿಸಿಬೇಕು ಎಂದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ನೀಲಾ ಎಸ್, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ರಾಘವೇಂದ್ರ ಪ್ರಸಾದ್, ಜಿಲ್ಲಾ ಕುಷ್ಠ ರೋಗ ನಿರ್ಮೂಲನಾಧಿಕಾರಿ ಡಾ. ಮಂಜುನಾಥ್ ಪಾಟೀಲ್ ಉಪಸ್ಥಿತರಿದ್ದರು.

# ಚುನಾವಣಾ ತೀರ್ಪನ್ನು ಕಾಂಗ್ರೆಸ್ ತಲೆಬಾಗಿ ಸ್ವೀಕರಿಸುತ್ತದೆ: ಡಿಬಿ



ದಾವಣಗೆರೆ, ಡಿ.4- ಪಂಚ ರಾಜ್ಯಗಳ ಚುನಾವಣಾ ತೀರ್ಪನ್ನು ಕಾಂಗ್ರೆಸ್ ಪಕ್ಷ ತಲೆಬಾಗಿ ಸ್ವೀಕರಿಸುತ್ತದೆ ಎಂದು ಕೆಪಿಸಿಸಿ ವಕ್ತಾರ ಡಿ ಬಸವರಾಜ್ ತಿಳಿಸಿದ್ದಾರೆ.

ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷ ಅಭೂತಪೂರ್ವ ಗೆಲ್ಲುವು ಸಾಧಿಸಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿ ಮಾಡಿರುವ ಗ್ಯಾರೆಂಟಿಗಳ ಬಗ್ಗೆ ನಂಬಿಕೆ ಇಟ್ಟು ಅಲ್ಲಿನ ಮತದಾರರು ಮತದಾನ ಮಾಡಿದ್ದಾರೆ. ಆದ್ದರಿಂದ ನಾವು ಗೆಲ್ಲಲು ಸಾಧ್ಯವಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಅಧೀನದಲ್ಲಿರುವ ಇಡಿ ಮುಖಾಂತರ ಛತ್ತೀಸಗಡ್ ಮುಖ್ಯಮಂತ್ರಿ ಭೂಪೇಶ್ ಬಘೇಲ ಅವರು ಮಹಾದೇವ್ ಬೆಟ್ಟಿಂಗ್ ಆ್ಯಪ್‌ನಿಂದ 508 ಕೋಟಿ ಹಣ ಪಡೆದಿದ್ದಾರೆಂದು ಸುಳ್ಳು ಆರೋಪಗಳನ್ನು ಮಾಡಿ ಅಪಪ್ರಚಾರ ಮಾಡಿದರು. ಇದರ ಫಲವಾಗಿ ಛತ್ತೀಸ್‌ಗಡದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ. ರಾಜಸ್ಥಾನ ಹಾಗೂ ಮಧ್ಯಪ್ರದೇಶದಲ್ಲಿ ಬಿಜೆಪಿ ಹಣದ ಹೊಳೆಹರಿಸಿದೆ. ಜೊತೆಗೆ ಕಾಂಗ್ರೆಸ್ ನಾಯಕರ ವಿರುದ್ಧ ಐಟಿ, ಇಡಿ, ಸಿಬಿಐ ಮೂಲಕ ಚುನಾವಣಾ ಸಂದರ್ಭದಲ್ಲಿ ಕಿರುಕುಳ ನೀಡುತ್ತಾ ಬಂದಿದ್ದಾರೆ. ಈ ಎಲ್ಲಾ ಕಾರಣಗಳಿಂದ ಅಲ್ಲಿ ಕಾಂಗ್ರೆಸ್ ಗೆ ಹಿನ್ನಡೆಯಾಗಿದೆ.

2003ರಲ್ಲಿ ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳಾಗಿ ಅಟಲ್ ಬಿಹಾರಿ ವಾಜಪೇಯಿ ಅವರಿದ್ದಾಗ ಇದೇ ರೀತಿ ಫಲಿತಾಂಶ ಬಂದಿತ್ತು. ನಂತರ 2004ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲು ಅನುಭವಿಸಿತ್ತು. 2018ರಲ್ಲಿ ಕಾಂಗ್ರೆಸ್ ಪಕ್ಷ ಇದೇ ರೀತಿ ಜಯ ಸಾಧಿಸಿತ್ತು ಆದರೆ 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಹಿನ್ನಡೆಯಾಗಿತ್ತು. ಇದೀಗ ಪಂಚ ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆದ್ದಿದ್ದರೂ ಸಹ 2024ರ ಲೋಕಸಭಾ ಚುನಾವಣೆಯಲ್ಲಿ ದೇಶದ ಜನ ಮೋದಿ ಆಡಳಿತಕ್ಕೆ ಅಂತ್ಯ ಆಡಲಿದ್ದಾರೆ ಎಂದು ಬಸವರಾಜ್ ಭವಿಷ್ಯ ನುಡಿದಿದ್ದಾರೆ.

# ಹಳೇಕಡ್ಲೇಬಾಳು : ಸ.ಉ.ಶಾಲೆಯಲ್ಲಿ ಇಂದು ಚಿಗುರು ಕಾರ್ಯಕ್ರಮ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಇಂದು ಮಧ್ಯಾಹ್ನ 3 ಗಂಟೆಗೆ ಹಳೇಕಡ್ಲೇಬಾಳು ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚಿಗುರು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಡ್ಲೇಬಾಳು ಗ್ರಾ.ಪಂ ಉಪಾಧ್ಯಕ್ಷ ಎ.ಬಿ.ಪ್ರಭಾಕರ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಗ್ರಾ.ಪಂ ಅಧ್ಯಕ್ಷರಾದ ಅಕ್ಕಮ್ಮ ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸುವರು. ಎಸ್.ಎಸ್.ಕೇರ್ ಟ್ರಸ್ಟ್ ಲೈಫ್ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್ ವಿಶೇಷ ಆಹ್ವಾನಿತರಾಗಿರುವರು.

ಮುಖ್ಯ ಅತಿಥಿಗಳಾಗಿ ಗ್ರಾ.ಪಂ.ಸದಸ್ಯರಾದ ಹೆಚ್.ರಾಮಪ್ಪ, ಎಲ್. ಹೆಚ್.ಪರಮೇಶ್ವರಪ್ಪ, ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ಎನ್.ನಾಗರಾಜ್, ಉಪಾಧ್ಯಕ್ಷ ಹಾಲಮ್ಮ ಬಸವರಾಜ, ಮುಖ್ಯೋಪಾಧ್ಯಾಯರಾದ ಐ.ಕೆ.ಜ್ಯೋತಿ ಭಾಗವಹಿಸುವರು.

# ಕಾಂಗ್ರೆಸ್ ಗ್ಯಾರಂಟಿಗಳು 'ಫೇಲ್'



ದಾವಣಗೆರೆ, ಡಿ.4- ಕಾಂಗ್ರೆಸ್ ಪಕ್ಷದ 'ಗ್ಯಾರಂಟಿ'ಗಳು ಫೇಲ್ ಆಗಿವೆ. ಮೂರು ರಾಜ್ಯಗಳ ಜನರು ಕಾಂಗ್ರೆಸ್ಸನ್ನು ತಿರಸ್ಕರಿಸಿದ್ದಾರೆ ಎಂದು ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಪ್ರಸನ್ನಕುಮಾರ್ ಎಂದು ಟೀಕಿಸಿದ್ದಾರೆ.

ಈ ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಜಯ ಸಾಧಿಸಿರುವುದು 2024ರಲ್ಲಿ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ಶತಸಿದ್ಧ ಎಂಬ ಸ್ಪಷ್ಟ ಸಂದೇಶವನ್ನು ಮತದಾತ ಪ್ರಭುಗಳು ವಿರೋಧ ಪಕ್ಷಗಳಿಗೆ ನೀಡಿದ್ದಾರೆ ಎಂದು ಅವರು ಅಭಿಪ್ರಾಯಿಸಿದ್ದಾರೆ.

# ನಿಟ್ಟುವಳ್ಳಿಯ ಸರ್ಕಾರಿ ಶಾಲೆಗೆ ಡೆಸ್ಕ್ ಕೊಡುಗೆ



ದಾವಣಗೆರೆ, ಡಿ.4- ನಗರದ ಇ.ಎಸ್.ಐ ಆಸ್ಪತ್ರೆ ರಸ್ತೆಯಲ್ಲಿ ಇರುವ ನಿಟ್ಟುವಳ್ಳಿ ಪ್ರಾಥಮಿಕ, ಪ್ರೌಢಶಾಲೆಗೆ ಇನ್ ಸೈಟ್ಸ್ ಐಎಎಸ್ ಸಂಸ್ಥೆ ವಿನಯ್ ಮಾರ್ಗ ಟ್ರಸ್ಟ್‌ನ ವಿನಯಕುಮಾರ್ ಅಭಿಮಾನಿ ಬಳಗದ ವತಿಯಿಂದ ಶಾಲಾ ಮಕ್ಕಳಿಗೆ ಡೆಸ್ಕ್ ಕೊಡುಗೆ ನೀಡಲಾಯಿತು.

ಹಿಂದುಳಿದ ವರ್ಗದ ಮಕ್ಕಳೇ ಹೆಚ್ಚಿನದಾಗಿ ಅಭ್ಯಾಸ ಮಾಡುವ ಈ ಶಾಲೆಗೆ ನೆರವು ನೀಡಿದ ವಿನಯಕುಮಾರ್ ಅವರನ್ನು ಆವರಣದಲ್ಲಿ ನಡೆದ ಸಮಾರಂಭದಲ್ಲಿ ಹೃದಯಸ್ಪರ್ಶಿ ಸನ್ಮಾನ ನೀಡಿ, ಗೌರವಿಸಲಾಯಿತು.

ರಾಜಕೀಯವಾಗಿ ಅಭಿವೃದ್ಧಿ ಕನಸುಗಳ ಹೊತ್ತು ತಮ್ಮದೇ ವಿಶಿಷ್ಟ, ವಿಭಿನ್ನ ರೀತಿಯ ವಿಷನ್ ಇಟ್ಟುಕೊಂಡು ಸಮ ಸಮಾಜದ ಕನಸು ನನಸು ಮಾಡಲು ಹೊರಟಿರುವ ಅವರ ಸೇವೆಯನ್ನು ಸ್ಮರಿಸಿ, ಶುಭ ಕೋರಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಿನಯಕುಮಾರ್, ತಮಗೆ ಇರುವ ಒಂದಿಷ್ಟು ಆದಾಯದಲ್ಲಿ ಇಂಥ ಸಮಾಜಮುಖಿ ಕಾರ್ಯ ಮಾಡುವ ಉದ್ದೇಶದಿಂದ ಅಳಿಲು ಸೇವೆ ಸಲ್ಲಿಸುತ್ತಿರುವೆ. ಕೆಲವರಿಗೆ ಹಣವಿದ್ದರೆ ಕೊಡುವ ಮನಸ್ಸು ಇರುವುದಿಲ್ಲ. ಇನ್ನು ಕೆಲವರಿಗೆ ಕೊಡುವ ಮನಸ್ಸಿದ್ದರೂ ಹಣದ ಕೊರತೆ. ಹಾಗಾಗಿ ಗುಡಿ, ಗೋಪುರ ನಿರ್ಮಾಣ ಮಾಡುವುದಕ್ಕಿಂತ ಇಂತಹ ಹಿಂದುಳಿದ ಶಾಲೆಗಳ ಸುಧಾರಣೆಗೆ ಸರ್ವರೂ ಕೈಜೋಡಿಸಿದರೆ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗಿಂತ ಕಡಿಮೆ ಇಲ್ಲ ಎಂಬಂತೆ ನಿಮ್ಮ ಸುತ್ತ ಮುತ್ತಲಿನ ಹಳ್ಳಿಗಳು ಮತ್ತು ನಗರದ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸಬಹುದು ಎಂದು ಹೇಳಿದರು.

ವೇದಿಕೆ ಮೇಲೆ ಮುಖ್ಯೋಪಾಧ್ಯಾಯ ಸುರೇಶ್, ಎ. ಕೆ. ಚಂದ್ರಪ್ಪ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಶ್ರೀಮತಿ ಲತಾ, ಸದಸ್ಯರಾದ ಹಾಲೇಶ್ ನಾಯ್ಕ, ಟಿ. ಎಸ್. ಸ್ವಾಮಿ, ಗಾಯತ್ರಮ್ಮ, ಸುಧಾ ಜಗದೀಶ್, ಪ್ರೇಮ, ಲೀಲಾವತಿ ರಾಮಪ್ಪ ಮತ್ತಿತರರು ಪಾಲ್ಗೊಂಡಿದ್ದರು. ಆರಂಭದಲ್ಲಿ ಶಿಕ್ಷಕ ಜಯಪ್ಪ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

# ಪವರ್‌ಗ್ರಿಡ್ ರೂ.1.63 ಕೋಟಿ ಸಿಎಸ್‌ಆರ್ ನಿಧಿಯಡಿ ಬಿಸಿ ನೀರು ಪೂರೈಕೆಗೆ ಜಿಲ್ಲಾಧಿಕಾರಿಗಳೊಂದಿಗೆ ಒಡಂಬಡಿಕೆ



ದಾವಣಗೆರೆ, ಡಿ.4- ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಯಿಂದ ಸಿಎಸ್‌ಆರ್ ನಿಧಿಯಡಿ ಜಿಲ್ಲೆಯ ಬಾಲಕಿಯರ ಬಾಲ ಮಂದಿರ, ರಾಜ್ಯ ಮಹಿಳಾ ಹಾಸ್ಟೆಲ್, ಇಎಸ್‌ಐ ಆಸ್ಪತ್ರೆಯಲ್ಲಿ ಬಿಸಿ ನೀರು ಪೂರೈಕೆ ಮಾಡಲು 1.63 ಕೋಟಿ ರೂ. ಕಾಮಗಾರಿಗೆ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಹಾಗೂ ಪವರ್ ಗ್ರಿಡ್ ಕಂಪನಿಯ ಜನರಲ್ ಮ್ಯಾನೇಜರ್ ಹರೀಶ್ ನಾಯರ್ ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಒಡಂಬಡಿಕೆಗೆ ಸಹಿ ಹಾಕಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ಈಗಾಗಲೇ ಪವರ್‌ಗ್ರಿಡ್ ಕಾರ್ಪೊರೇಷನ್ ಸಂಸ್ಥೆಯಿಂದ ವಿವಿಧ 4 ಕಾಮಗಾರಿಗಳಿಗೆ ಒಟ್ಟು ಈ ವರ್ಷ 15 ಕೋಟಿ ರೂ. ಮೊತ್ತಕ್ಕೆ ಒಡಂಬಡಿಕೆ ಮಾಡಿಕೊಂಡು ಅನುಷ್ಠಾನ ಮಾಡಲಾಗುತ್ತಿದೆ. ಬರುವ 2024 ರ ಮಾರ್ಚ್ ಅಂತ್ಯದೊಳಗೆ ಈ ಎಲ್ಲಾ ಕಾಮಗಾರಿಗಳನ್ನು ಅನುಷ್ಠಾನ ಮಾಡುವ ಮೂಲಕ ಉಪಯುಕ್ತತಾ ಪ್ರಮಾಣ ಪತ್ರ ನೀಡಬೇಕಾಗಿದೆ.

ಈ ನಿಟ್ಟಿನಲ್ಲಿ ಇಲಾಖೆಯವರು ಕಾಲಮಿತಿಯಲ್ಲಿ ಸಿವಿಲ್ ಕಾಮಗಾರಿ ಮತ್ತು ಪೂರೈಕೆ ಮಾಡಲು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಸರ್ಜನ್ ಮತ್ತು ಕೆಆರ್‌ಡಿಎಲ್ ಇಂಜಿನಿಯರ್‌ಗೆ ಸೂಚನೆ ನೀಡಿದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಷಣ್ಮುಖಪ್ಪ, ಜಿಲ್ಲಾ ಸರ್ಜನ್ ಡಾ. ನಾಗೇಂದ್ರಪ್ಪ ಉಪಸ್ಥಿತರಿದ್ದರು.

# ಬೆಳಗಾವಿಗಾಗಿ ಎಂಇಎಸ್, ಶಿವಸೇನೆ ಪ್ರತಿಭಟನೆ

ಮುಂಬೈ, ಡಿ. 4 – ಬೆಳಗಾವಿ ಅಧಿವೇಶನದ ಮೊದಲ ದಿನದಂದು ಮಹಾರಾಷ್ಟ್ರ ಏಕೀಕರಣ ಸಮಿತಿ ಹಾಗೂ ಶಿವಸೇನೆ (ಯು.ಬಿ.ಟಿ.)ಗಳು ಕೊಲ್ಹಾಪುರದ ಶಿನೋಲಿಯಲ್ಲಿ ಪ್ರತಿಭಟನೆ ನಡೆಸಿವೆ.

ಕರ್ನಾಟಕದಲ್ಲಿರುವ ಮರಾಠಿ ಭಾಷಿಗರ ಪ್ರದೇಶಗಳನ್ನು ಮಹಾರಾಷ್ಟ್ರದಲ್ಲಿ ವಿಲೀನ ಮಾಡುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು. ಕೇಂದ್ರ ಸರ್ಕಾರ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

# ವಾಯುಪಡೆ ತರಬೇತಿ ವಿಮಾನ ಪತನ, ಇಬ್ಬರು ಪೈಲಟ್ ನಿಧನ

ಹೈದರಾಬಾದ್, ಡಿ. 4 – ವಾಯುಪಡೆಯ ತರಬೇತಿ ವಿಮಾನ ತೆಲಂಗಾಣದ ಮೇಡಕ್ ಜಿಲ್ಲೆಯಲ್ಲಿ ಪತನಗೊಂಡಿದ್ದು, ಅದರಲ್ಲಿದ್ದ ವಾಯುಪಡೆಯ ಇಬ್ಬರು ಪೈಲಟ್‌ಗಳು ಕೊನೆಯುಸಿರೆಳೆದಿದ್ದಾರೆ. ಹೈದರಾಬಾದ್‌ನ ವೈಮಾನಿಕ ಕೇಂದ್ರದಿಂದ ತರಬೇತಿ ಹಾರಾಟ ನಡೆಸುವ ವೇಳೆ ವಿಮಾನ ಪತನಗೊಂಡಿದೆ.

# ನಗದು ರಹಿತ ಚಿಕಿತ್ಸೆಗೆ ಕ್ರಮ

**(1ನೇ ಪುಟದಿಂದ)** ಮಾಡಲಾಗುವುದು. ಇದು ಗೋಲ್ಡನ್ ಅವರ್ ವಿಷಯಕ್ಕೂ ಅನ್ವಯವಾಗಲಿದೆ ಎಂದು ಜೈನ್ ತಿಳಿಸಿದ್ದಾರೆ. ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ಮೊದಲ ಗಂಟೆಯಲ್ಲಿ ಚಿಕಿತ್ಸೆ ನೀಡುವುದು ಮಹತ್ವದ್ದಾಗಿದೆ. ಈ ಅವಧಿಯನ್ನು ಗೋಲ್ಡನ್ ಅವರ್ ಎಂದು ಕರೆಯಲಾಗುತ್ತದೆ.

# ಕರಾಟೆ : ಈಗಲ್ ಫಿಟ್‌ನೆಸ್‌ನ ವಿದ್ಯಾರ್ಥಿಗಳಿಗೆ ಪ್ರಶಸ್ತಿ




ದಾವಣಗೆರೆ, ಡಿ.4- ಮಹಾತ್ಮ ಗಾಂಧಿ ಸ್ಮರಣಾರ್ಥ ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್ ಶಿಫ್-2023 ಶಿವಮೊಗ್ಗದ ಇಂಡೋರ್ ಸ್ಟೇಡಿಯಂನಲ್ಲಿ ಕಳೆದ ವಾರ ನಡೆಯಿತು. ಈಗಲ್ ಫಿಟ್‌ನೆಸ್ ಮತ್ತು ಮಾರ್ಷಲ್ ಆರ್ಟ್ಸ್ ಸೆಂಟರ್‌ನ ವೆಂಕಿ ಸೆನ್ಸಾಯ್ ಇವರಿಂದ ತರಬೇತಿ ಪಡೆದ ವಿದ್ಯಾರ್ಥಿಗಳು ಭಾಗವಹಿಸಿ ಪ್ರಶಸ್ತಿಗೆ ಭಾಜನರಾದರು.

**ಕಥಾ ವಿಭಾಗದಲ್ಲಿ :** ಹರ್ಷಿತ್, ಸಮರ್ಥ, ನಿಧಿ, ಪವನಿಕಾ ಆರ್ಯನ್ ಇವರುಗಳು ಪ್ರಥಮ ಸ್ಥಾನ ಪಡೆದುಕೊಂಡರೆ, ಸಮರ್ಥ ಬಿ.ಎಸ್. ಆರ್ಯ ಪಿ., ಸುಶೀಲ್, ಸಮರ್ಥ, ವಿನಾಯಕ, ಪವಿಕಿರಣ್ ಇವರುಗಳು ದ್ವಿತೀಯ ಸ್ಥಾನ ಹಾಗೂ ಆರ್ಯನ್, ಆರೋಹಿ, ಶ್ರೇಷ್ಠಾ, ಸಾಯಿದ್ರುವ, ಯೋಗೀಶ್, ಖುಶಾಂಕ್, ಯಸ್ವಿನ್, ಪುರುಷೋತ್ತಮ್, ಕುಂದನ್, ಅಥರ್ವ, ನಂದಕೃಷ್ಣ, ಅಕ್ಷಯ್, ಆರ್ವಿ ಇವರುಗಳು ತೃತೀಯ ಸ್ಥಾನ ಪಡೆದುಕೊಂಡಿರುತ್ತಾರೆ.

**ಕುಮುತೆ ವಿಭಾಗದಲ್ಲಿ :** ಆರ್ಯನ್ ಪ್ರಥಮ ಸ್ಥಾನ, ಹರ್ಷಿತ್, ಪವನಿಕಾ ದ್ವಿತೀಯ ಸ್ಥಾನ ಹಾಗೂ ವಿನಾಯಕ, ಪವಿಕಿರಣ್, ಪುರುಷೋತ್ತಮ್ ಇವರುಗಳು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ತಿಮ್ಮಾರೆಡ್ಡಿ ಫೌಂಡೇಷನ್‌ನ ಟ್ರಸ್ಟಿ ಡಾ॥ ಎ. ತಿಮ್ಮಾರೆಡ್ಡಿ, ಪ್ರಾಂಶುಪಾಲ ಮಹಾಂತೇಶ್ ಕಮ್ಮಾರ್ ಅವರು ಅಭಿನಂದಿಸಿದ್ದಾರೆ.

# ನಗರದಲ್ಲಿ ಇಂದು ಸಾಂಸ್ಕೃತಿಕ ಸಂಗೀತ

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದಾವಣಗೆರೆ ದಕ್ಷಿಣ ವಲಯದ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 'ಮಕ್ಕಳಿಗಾಗಿ ಸಾಂಸ್ಕೃತಿಕ ಸಂಗೀತ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ರವಿಕುಮಾರ್ ಎ.ಜೆ. ವಹಿಸುವರು. ಮುಖ್ಯ ಅತಿಥಿಗಳಾಗಿ ಎಂ.ವಿ. ವೆಂಕಟೇಶ್, ಶ್ರೀಮತಿ ಉಮಾ ಪ್ರಶಾಂತ್, ವಿನಾಯಕ ಪೈಲ್ವಾನ್, ಶ್ರೀಮತಿ ರೇಣುಕಾ, ಶಿವನಹಳ್ಳಿ ರಮೇಶ್, ರವಿಚಂದ್ರ, ಕೊಟ್ರೇಶ್ ಜಿ., ಶಿವಪ್ಪ ಎನ್., ರಾಮಪ್ಪ ಆಗಮಿಸುವರು. ನಂತರ ಶರಣಯ್ಯ ಎಂ. ಗುಡ್ಡಮಠ ಮತ್ತು ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ನಡೆಯುವುದು.

# ನಗರದಲ್ಲಿ ಇಂದು ವಕೀಲರ ದಿನಾಚರಣೆ

ಜಿಲ್ಲಾ ವಕೀಲರ ಸಂಘದಿಂದ ಇಂದು ಬೆಳಿಗ್ಗೆ 10.30ಕ್ಕೆ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ವಕೀಲರ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಆಗಮಿಸುವರು. ಮುಖ್ಯ ಅತಿಥಿಗಳಾಗಿ ಮಕ್ಕಳ ಸ್ನೇಹಿ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶರಾದ ಶ್ರೀಪಾದ ಎನ್., ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರವೀಣ್ ಕುಮಾರ್ ಆರ್.ಎನ್. ಹಿರಿಯ ವಕೀಲರುಗಳಾದ ಹೆಚ್. ಎನ್. ರಾಜಶೇಖರಪ್ಪ, ಎಂ.ಬಿ. ಶಿವಾನಂದಪ್ಪ, ರಾಮಚಂದ್ರ ಕಲಾಲ್ ಆಗಮಿಸುವರು.

# ಉಕ್ಕಡಗಾತ್ರಿಯಲ್ಲಿ ಪ್ರತಿಭಾ ಪುರಸ್ಕಾರ



ಮಲೇಬೆನ್ನೂರು, ಡಿ.4- ಉಕ್ಕಡಗಾತ್ರಿಯಲ್ಲಿ ಮಾನವ ಬಂಧುತ್ವ ವೇದಿಕೆ ಹಾಗೂ ಗ್ರಾಮದ ಯುವಕರಿಂದ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಯಲ್ಲಿ ಶೇ.80 ರಷ್ಟು ಅಂಕ ತೆಗೆದ ಮಕ್ಕಳಿಗೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಸಂವಿಧಾನ ಪೀಠಿಕೆ ಓದುವ ಮೂಲಕ ಉದ್ಘಾಟಿಸಲಾಯಿತು.

ಶಾಸಕ ಬಿ.ಪಿ.ಹರೀಶ್, ವಕೀಲ ಮಾರುತಿ ಬೇಡರ್, ಕರಿಬಸವೇಶ್ವರ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್.ಸುರೇಶ್, ಸಿದ್ದಪ್ಪ ಬಸಲಿ, ಶಿಕ್ಷಕ ಮಾಲತೇಶ್, ಡಾ.ನಾಗರಾಜ್, ಹೇಮಂತ್, ದಾನಯ್ಯ, ಸಿದ್ದೇಶ್, ವಸಂತ್, ನಾಗರಾಜ ದೋಣಿ, ಹನುಮಂತ, ಬಸವರಾಜ ಕುರಿಯರ್ ಕರಿಬಸವ, ಮಾನವ ಬಂಧುತ್ವ ವೇದಿಕೆಯ ತಾಲ್ಲೂಕು ಸಂಚಾಲಕರೂ ಆದ ವಕೀಲ ದೊಡ್ಮನಿ ಮಂಜುನಾಥ್, ಸಂಗೀತ ಬಂಗೇರ ಮತ್ತು ಮಕ್ಕಳ ಪ್ರತಿಭಾ ಪುರಸ್ಕಾರದ ದಾನಿಯಾಗಿದ್ದ ಬಿ.ಜಿ.ವಿನಯ್ ಕುಮಾರ್ ಅವರ ಪರವಾಗಿ ಅವರ ಅಳಿಯ ಶರತ್ ಮತ್ತಿತರರು ಭಾಗವಹಿಸಿದ್ದರು.

## ಹರಿಹರ : ಆರ್‌ಎಸ್‌ಎಸ್ ಪಥ ಸಂಚಲನ



ಹರಿಹರ, ಡಿ. 4 - ನಗರದಲ್ಲಿ ಆರ್.ಎಸ್.ಎಸ್. ಸಂಘಟನೆ ವತಿಯಿಂದ ಪಥ ಸಂಚಲನ ಮೆರವಣಿಗೆ ಮಾಡಲಾಯಿತು. ಮೆರವಣಿಗೆ ನಗರದ ರಾಜಾ ಬೀದಿಯಲ್ಲಿ ಸಂಚರಿಸಿ ಡಿ. ಆರ್.ಎಂ. ಶಾಲಾ ಮೈದಾನಕ್ಕೆ ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಧರಣೇಂದ್ರ, ತುಳಜಪ್ಪ ಭೂತೆ, ರಾಘವೇಂದ್ರ ಪ್ರಕಾಶ್, ಮಂಜಾನಾಯ್ಕ್, ರಾಜು ರೋಖಡೆ, ದಿನೇಶ್, ಚಂದನ್ ಮೂರ್ಕಲ್, ಶಿವು, ವೀರೇಶ್ ಅಜ್ಜಣ್ಣನವರ್, ದೀಟೂರು ನಿರಂಜನ, ಚಂದ್ರಕಾಂತ, ರಟ್ಟಿಹಳ್ಳಿ ಮಂಜುನಾಥ್, ರವಿ ರಾಯ್ಕರ್ ಇತರರು ಹಾಜರಿದ್ದರು.

# ಏತ ನೀರಾವರಿ ಯೋಜನೆಯಡಿ ಶ್ರೀರಾಮನ ಕೆರೆಗೆ ನೀರು

ಹೊನ್ನಾಳಿ, ಡಿ 4 - ಎಂ.ಹನುಮನಹಳ್ಳಿ, ಸಿಂಗಟಗೆರೆ ಸಮೀಪದ ಕೆರೆಗೆ ಏತ ನೀರಾವರಿ ಯೋಜನೆಯಡಿ ನೀರು ತುಂಬಿಸಿದೆ. ಈ ಕೆರೆಗೆ ಶಾಸಕ ಡಿ.ಜಿ.ಶಾಂತನಗೌಡ ಗಂಗಾ ಪೂಜೆ ಸಲ್ಲಿಸಿ, ಹಲವಾರು ಮುಖಂಡರೊಂದಿಗೆ ಬಾಗಿನ ಅರ್ಪಿಸಿದರು.

ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಮಳೆ ಅಭಾವ ಆದಾಗಲೆಲ್ಲಾ ವಿಶೇಷವಾಗಿ ಕುಡಿಯುವ ನೀರು ಮತ್ತು ಜಮೀನುಗಳ ಕೊಳವೆ ಬಾವಿಗಳಲ್ಲಿ ಅಂತರ್ಜಲ ಕಡಿಮೆಯಾಗುವ ಸಮಸ್ಯೆ ಎದುರಾಗುತ್ತಿತ್ತು. ಇದಕ್ಕೆ ಪರಿಹಾರ ಎಂಬಂತೆ ತುಂಗಭದ್ರಾ ನದಿಯಿಂದ ಏತ ನೀರಾವರಿ ಯೋಜನೆಯ ಮೂಲಕ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ನಡೆಸಲಾಗಿದ್ದು. ತಾಲ್ಲೂಕಿನ ಎಂ.ಹನುಮನಹಳ್ಳಿ, ಸಿಂಗಟಗೆರೆ ಶ್ರೀರಾಮನಕೆರೆಗೆ ನೀರು ಹರಿಸಿದೆ. ಇದರಿಂದ ರೈತರ ಕೊಳವೆ ಬಾವಿಗಳ ಅಂತರ್ಜಲ ಹೆಚ್ಚಾಗುವ ಮೂಲಕ ಹತ್ತಾರು ಹಳ್ಳಿಗಳಿಗೆ ಅನುಕೂಲವಾಗುತ್ತಿದೆ ಎಂದು ಶಾಸಕ ಶಾಂತನಗೌಡ ಹೇಳಿದರು.

ಶಿವಮೊಗ್ಗದ ಕೆ.ಎಂ.ಎಫ್ ನಿರ್ದೇಶಕರಾದ ಹನುಮನಹಳ್ಳಿ ಬಿ.ಜಿ.ಬಸವರಾಜಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಕರೆ ಅಭಿವೃದ್ದಿಯ ಕೆಲಸದಲ್ಲಿ ಸುತ್ತಮುತ್ತಲ ಗ್ರಾಮಗಳ ಮುಖಂಡರು ಕೂಡ ಸಹಕರಿಸಿದ್ದು ಸರ್ಕಾರ ಮತ್ತು ಗ್ರಾಮಸ್ಥರುಗಳ ಸಹಕಾರದಿಂದ ಇಂದು ಶ್ರೀರಾಮನಕೆರೆ ನೀರಿನಿಂದ ಭರ್ತಿಯಾಗಿದೆ.



ರೈತರಲ್ಲಿ ಜೀವನದ ಭರವಸೆ ನೀಡಿದೆ ಎಂದು ಹೇಳಿದ ಅವರು, ಈ ಕೆರೆಯು ಇಂದು ತುಂಬಿದ್ದು ಇದಕ್ಕೆ ಪ್ರಸ್ತುತ ಶಾಸಕ ಶಾಂತನಗೌಡರ ಪ್ರಯತ್ನ ಮತ್ತು ಸಹಕಾರ ಅನನ್ಯವಾಗಿದೆ. 2023 ರಿಂದ ಏತ ನೀರಾವರಿ ಮೂಲಕ ನದಿಯಿಂದ ನೀರು ತುಂಬಿಸಲು ಚಾಲನೆ ನೀಡಲಾಗಿದೆ ಎಂದರು.

**ಗಂಗಾ ಪೂಜೆ ಸಲ್ಲಿಸಿ ಕೆರೆಗೆ ಬಾಗಿನ ಅರ್ಪಿಸಿದ ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ**

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎಂ. ಉಮಾಪತಿ, ಹಿರಿಯ ಮುಖಂಡರಾದ ಬಿ.ಸಿದ್ದಪ್ಪ, ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಶಿವಯೋಗಿ, ಟಿ.ಎ.ಪಿ. ಸಿ.ಎಂ.ಸಿ. ನಿರ್ದೇಶಕ ಸಿಂಗಟಗೆರೆ ಜಯಣ್ಣ, ಗಜೇಂದ್ರಪ್ಪ, ಗ್ರಾ.ಪಂ.ಅನುಪಮ, ಶಾಂತಮ್ಮ ಅಶ್ವಿನಿ, ವರದರಾಜಪ್ಪ, ಡಿ.ಸಿ.ಸಿಬ್ಯಾಂಕ್ ನಿರ್ದೇಶಕ ಷಣ್ಮುಖಪ್ಪ, ಹಾಲು ಒಕ್ಕೂಟದ ಸೋಮಶೇಖರ್, ಸಾಧು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎ. ಗದ್ದಿಗೇಶ್, ಆರ್.ನಾಗಪ್ಪ, ವಾಲ್ಮೀಕಿ ಸಮಾಜದ ಅಧ್ಯಕ್ಷ ಶಿವಾನಂದಪ್ಪ, ಅರಬಗಟ್ಟೆ ರಮೇಶ್, ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ಬಿ.ಜಿ.ಜಗದೀಶ್, ಶಂಕ್ರಣ್ಣ, ಬೆಸ್ಕಾಂ ಎ.ಇ.ಇ. ಜಯಣ್ಣ, ನೀರಾವರಿ ಇಲಾಖೆ ಅಧಿಕಾರಿಗಳು ಇದ್ದರು.

# ಅಶೋಕ ಟಾಕೀಸ್ ಬಳಿ ರೈಲ್ವೆ ಅಂಡರ್ ಪಾಸ್ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲು ಡಿಸಿ ಸೂಚನೆ

ದಾವಣಗೆರೆ, ಡಿ.4- ನಗರದ ಅಶೋಕ ಟಾಕೀಸ್ ಬಳಿ ರೈಲ್ವೆ ಅಂಡರ್ ಬಸ್ ನಿರ್ಮಾಣಕ್ಕೆ ಅಗತ್ಯವಿರುವ ಸ್ವತ್ತುಗಳನ್ನು ಭೂ ಸ್ವಾಧೀನಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಶೋಕ ಟಾಕೀಸ್ ಬಳಿ ರೈಲ್ವೆ ಅಂಡರ್ ಪಾಸ್ ನಿರ್ಮಾಣ ಕುರಿತಂತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಶೋಕ ಟಾಕೀಸ್ ಬಳಿಯ ರೈಲ್ವೆ ಅಂಡರ್ ಪಾಸ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು 49 ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿದ್ದು, ಕೂಡಲೇ ರೈಲ್ವೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಅಗತ್ಯವಿರುವ ಸ್ವತ್ತುಗಳನ್ನು ಭೂಸ್ವಾಧೀನಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚನೆ ನೀಡಿದರು. ಉಪ ವಿಭಾಗಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳಬೇಕು ಎಂದರು.



ತುಮಕೂರು - ದಾವಣಗೆರೆ ನೇರ ರೈಲು ಮಾರ್ಗವು ದಾವಣಗೆರೆ ತಾಲ್ಲೂಕಿನ ತೋಳಹುಣಸೆ, ಬುಳ್ಳಾಪುರ, ಆನಗೋಡು, ನೀರ್ಥಡಿ, ಹೆಬ್ಬಾಳ, ಹುಣಸೇಕಟ್ಟೆ, ಪಂಚೇನಹಳ್ಳಿ, ಚಿಕ್ಕವ್ವನಹಳ್ಳಿ, ಕರೆಲಕ್ಕೇನಹಳ್ಳಿ, ಚಟ್ಟೋಬನಹಳ್ಳಿ, ಕೊಗ್ಗನೂರು, ಹಾಲುವರ್ತಿ ಗ್ರಾಮಗಳ ಮೂಲಕ ರೈಲು ಮಾರ್ಗ ಹಾದು ಹೋಗಲಿದ್ದು, ರಂಗವ್ವನಹಳ್ಳಿ ಹಾಗೂ ಚಟ್ಟೋಬನಹಳ್ಳಿಯಲ್ಲಿ ಬಾಕಿ ಇರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರವೇ ರೈತರ ಜಮೀನುಗಳನ್ನು ಸರ್ವೇ ಅಧಿಕಾರಿಗಳು ಪರಿಶೀಲಿಸಬೇಕು. ಸರ್ಕಾರ ನಿಗದಿಪಡಿಸಿರುವ ನಿಗದಿತ ದರವನ್ನು ಅರ್ಹ ರೈತರಿಗೆ ಪಾವತಿಸಿ, ಆರ್.ಟಿ.ಸಿ ತಿದ್ದುಪಡಿ ಮಾಡಿ ಕ್ರಯ ಮಾಡಿಕೊಳ್ಳಬೇಕು ಎಂದರು.

ರೈಲ್ವೇ ಮತ್ತು ಕಂದಾಯ ಇಲಾಖೆಗಳ ಮೂಲಕ ಈಗಾಗಲೇ ಸರ್ವೇ ಕಾರ್ಯ ಆರಂಭಗೊಂಡಿದ್ದು, ಶೀಘ್ರವೇ ಸ್ವಾಧೀನಕ್ಕೆ ಒಳಪಡುವ ಜಮೀನುಗಳ ಮೂಲ ದಾಖಲೆಗಳನ್ನು ಪರಿಶೀಲಿಸಿ ಪೋಡಿ ದುರಸ್ತಿ ಕಾರ್ಯ ನಡೆಸಬೇಕು. ರೈತರು ಯಾವುದೇ ಗೊಂದಲಕ್ಕೆ ಒಳಗಾಗದಂತೆ ನ್ಯಾಯ ಸಮ್ಮತವಾಗಿ ಭೂಸ್ವಾಧೀನ ಮಾಡಿಕೊಳ್ಳಬೇಕು. ರೈಲ್ವೆ ಮಾರ್ಗ ಹಾದು ಹೋಗಿರುವ ಜಮೀನುಗಳಲ್ಲಿ ಯಾವುದೇ ತಕರಾರು, ಇಂಡೀಕರಣ, ಪೋಡಿ ಹಾಗೂ ತಾಂತ್ರಿಕ ಸಮಸ್ಯೆಗಳಾದಲ್ಲಿ ಶೀಘ್ರವೇ ಪರಿಹರಿಸಬೇಕು ಹಾಗೂ ಅರಣ್ಯ ಪ್ರದೇಶದಲ್ಲಿ ಸಾಗುವಳಿ ಮಾಡಿದವರಿಗೆ ಬೇರೆಡೆ ಜಮೀನು ನೀಡಿ ಸಕ್ರಮಗೊಳಿಸಿಕೊಳ್ಳಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಉಪವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ, ಜಿಲ್ಲಾ ಭೂ ದಾಖಲೆಗಳ ಉಪನಿರ್ದೇಶಕರಾದ ಭಾವನಾ ಬಸವರಾಜ್ ಹಾಗೂ ರೈಲ್ವೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಫ್ರೆಂಡ್ಸ್ ಬೆಂಗಳೂರು ತಂಡ ಪ್ರಥಮ ಸ್ಥಾನ ಇಜಾನ್ ಸ್ಪೋರ್ಟ್ಸ್ ಉಡುಪಿ ರನ್ನರ್ ಅಪ್



**ದಾವಣಗೆರೆಯ ಕ್ರಿಕೆಟ್ ಹಬ್ಬಕ್ಕೆ ತೆರೆ**

ದಾವಣಗೆರೆ, ಡಿ.4- ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸವಿ ನೆನಪಿನ ಅಂಗವಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಕ್ರಿಕೆಟ್ ಹಬ್ಬಕ್ಕೆ ಸೋಮವಾರ ಬೆಳಗಿನ ಜಾವ 3 ಗಂಟೆಗೆ ತೆರೆ ಬಿದ್ದಿತ್ತು.

ಫ್ರೆಂಡ್ಸ್ ಬೆಂಗಳೂರು ಮತ್ತು ಉಡುಪಿಯ ಇಜಾನ್ ಸ್ಪೋರ್ಟ್ಸ್ ಮಧ್ಯೆ ನಡೆದ ಪಂದ್ಯದಲ್ಲಿ ಫ್ರೆಂಡ್ಸ್ ಬೆಂಗಳೂರು ಗೆಲುವು ಸಾಧಿಸುವ ಮೂಲಕ 5,00,000 ರೂ. ನಗದು ಮತ್ತು ಆಕರ್ಷಕ ಟ್ರೋಪಿಯನ್ನು ಪಡೆಯಿತು. ಫ್ರೆಂಡ್ಸ್ ಬೆಂಗಳೂರು ವಿರುದ್ಧ ಸೋಲನ್ನುಭವಿಸಿದ ಉಡುಪಿಯ ಇಜಾನ್ ಸ್ಪೋರ್ಟ್ಸ್ ತಂಡವು 3,55,000 ರೂ. ನಗದು ಹಾಗೂ ಆಕರ್ಷಕ ಟ್ರೋಫಿಯನ್ನು ಪಡೆಯಿತು.

ಟಾಸ್ ಗೆದ್ದು ಫಿಲ್ಡಿಂಗ್‌ಗೆ ಇಳಿದ ಫ್ರೆಂಡ್ಸ್ ಬೆಂಗಳೂರು, ಇಜಾನ್ ಸ್ಪೋರ್ಟ್ಸ್ ಕ್ಲಬ್ ಅನ್ನು ನಾಲ್ಕು ವಿಕೆಟ್ ಪಡೆದು, 48 ರನ್‌ಗೆ ಕಟ್ಟಿ ಹಾಕುವಲ್ಲಿ ಯಶಸ್ವಿಯಾಯಿತು. ಇದನ್ನು ಬೆನ್ನಟ್ಟಿದ ಫ್ರೆಂಡ್ಸ್ ಬೆಂಗಳೂರಿನ ಆಟಗಾರರು, ಆರಂಭದಲ್ಲಿ ಉತ್ತಮ ಆಟಗಾರರ ವಿಕೆಟ್ ಕಳೆದುಕೊಂಡು ಆಘಾತಕಾರಿ ಸ್ಥಿತಿಯಲ್ಲಿ ಕಂಡುಬಂದಿತ್ತು. ನಂತರ ಚೇತರಿಸಿಕೊಂಡ ಫ್ರೆಂಡ್ಸ್ ಬೆಂಗಳೂರು ತಂಡ 7 ವಿಕೆಟ್ ನಷ್ಟಕ್ಕೆ 51 ರನ್ ಗಳಿಸುವ ಮೂಲಕ ವಿಜಯಿ ಆಯಿತು.

ಈ ಪಂದ್ಯವನ್ನು ಸುಮಾರು 25 ಸಾವಿರಕ್ಕೂ ಹೆಚ್ಚು ಕ್ರೀಡಾಭಿಮಾನಿಗಳು ವೀಕ್ಷಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಬಹುಮಾನ ವಿತರಣೆ ಮಾಡಿದರು.

ಬಹುಮಾನ ವಿತರಣೆ ಸಮಾರಂಭದಲ್ಲಿ ಆಯೋಜಕರಾದ ಶಿವಗಂಗಾ ಶ್ರೀನಿವಾಸ್, ರಾಜು ರೆಡ್ಡಿ, ಕುರುಡಿ ಗಿರೀಶ್, ಜಯಪ್ರಕಾಶ್ ಗೌಡ, ನಿಖಿಲ್ ಶೆಟ್ಟಿ, ಪಾಲಿಕೆ ಸದಸ್ಯ ಜೆ.ಎನ್.ಶ್ರೀನಿವಾಸ್ ಸೇರಿದಂತೆ ಕ್ರೀಡಾಭಿಮಾನಿಗಳು ಹಾಜರಿದ್ದರು.

## ಸೋಲಿನ ಹತಾಶೆ ಸದನದಲ್ಲಿ ತೋರಬೇಡಿ : ಮೋದಿ ಸಲಹೆ

ನವದೆಹಲಿ, ಡಿ. 4 – ವಿಧಾನಸಭಾ ಚುನಾವಣಾ ಸೋಲಿನ ಹತಾಶೆಯನ್ನು ಸಂಸತ್ತಿನ ಒಳಗೆ ತೋರಿಸದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರತಿಪಕ್ಷಗಳಿಗೆ ಸಲಹೆ ನೀಡಿದ್ದಾರೆ. ಚಳಿಗಾಲದ ಅಧಿವೇಶನದ ಆರಂಭಕ್ಕೆ ಮುಂಚೆ ಮಾಧ್ಯಮಗಳ ಜೊತೆ ಮಾತನಾಡಿರುವ ಮೋದಿ, ಪ್ರತಿಪಕ್ಷಗಳು ನಕಾರಾತ್ಮಕತೆ ಬಿಡಬೇಕು. ಇದರಿಂದ ಜನರು ಅವರ ಬಗ್ಗೆ ಹೊಂದಿರುವ ಭಾವನೆ ಬದಲಾಗಬಹುದು. ಈ ಅಧಿವೇಶನ ಅವರ ಪಾಲಿಗೆ ಸುವರ್ಣಾವಕಾಶ ಎಂದರು.

ದೇಶ ನಕಾರಾತ್ಮಕತೆಯನ್ನು ತಿರಸ್ಕರಿಸಿದೆ. ಪ್ರತಿ ಅಧಿವೇಶನದ ಆರಂಭಕ್ಕೆ ಮುಂಚೆ ನಾವು ವಿಪಕ್ಷಗಳ ಸ್ನೇಹಿತರ ಜೊತೆ ಮಾತನಾಡುತ್ತೇವೆ, ಅವರ ಸಹಕಾರ ಕೇಳುತ್ತೇವೆ. ಈ ಬಾರಿಯೂ ಆ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದರು.

### ನಗರದಲ್ಲಿ ಇಂದು 'ಅಭಿರುಚಿ' : ಇದು ಓದುಗರ ವೇದಿಕೆ

ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಲೈಬ್ರರಿ ಮತ್ತು ಇನ್‌ಫರ್ಮೇಷನ್ ವಿಭಾಗದ ಆಶ್ರಯದಲ್ಲಿ 'ಅಭಿರುಚಿ' ಇದು ಓದುಗರ ವೇದಿಕೆ ಕಾರ್ಯಕ್ರಮವು ಇಂದು ಬೆಳಿಗ್ಗೆ 11.30 ಕ್ಕೆ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ಸಂಪನ್ಮೂಲ ವ್ಯಕ್ತಿಯಾಗಿ ಲೈಬ್ರರಿಯನ್ ಡಾ. ಕೆ.ವಿ. ಮಂಜುನಾಥ ಆಗಮಿಸುವರು. ಮುಖ್ಯ ಅತಿಥಿಗಳಾಗಿ ಡಾ. ಎಂ.ಜಿ. ಈಶ್ವರಪ್ಪ ಭಾಗವಹಿಸುವರು. ಪ್ರಾಂಶುಪಾಲ ರಾದ ಕಮಲಾ ಸೊಪ್ಪಿನ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ಕೋ-ಆರ್ಡಿನೇಟರ್ ಮತ್ತು ವಿಭಾಗದ ಮುಖ್ಯಸ್ಥರಾದ ಆರ್.ಆರ್. ಶಿವಕುಮಾರ್ ಉಪಸ್ಥಿತರಿರುವರು.

### ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಇಂದಿನಿಂದ ಇದೇ ದಿನಾಂಕ 7 ರವರೆಗೆ ಪ್ರತಿ ದಿನ ಬೆಳಿಗ್ಗೆ 6 ರಿಂದ 7.30 ರವರೆಗೆ ಆಲೂರು ಕನ್‌ವೆನ್ಷನ್ ಹಾಲ್‌ನಲ್ಲಿ ಓಶೋ ಧ್ಯಾನ ಶಿಬಿರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ಪುಷ್ಪ (9036 719573) ಅರ್ಚನ (9738572311).

## ಮಾತೃಭಾಷೆಯನ್ನು ಪ್ರೀತಿಸಿ, ಬೆಳೆಸಬೇಕು : ಡಾ. ನೀತಾ




ದಾವಣಗೆರೆ, ಡಿ.4- ಆವರಗೆರೆಯ ಶ್ರೀ ಸಿದ್ದಲಿಂಗೇಶ್ವರ ವಿದ್ಯಾಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಶ್ರೀ ಗುರು ಪಂಚಾಕ್ಷರಿ ಗವಾಯಿ ಮೆಮೋರಿಯಲ್ ಕಾಂಪೋಜಿಟ್ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಸಂಭ್ರಮ ನಡೆಯಿತು.

ಬಾಪೂಜಿ ವಿದ್ಯಾಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮತಿ ಡಾ. ಎ.ಜೆ. ನೀತಾ ಕಾರ್ಯಕ್ರಮವನ್ನು ಉದ್ದೇಶಿಸಿ, ನಮ್ಮ ಭಾಷೆ ನಮ್ಮ ಹೆಮ್ಮೆ, ಮಾತೃ ಭಾಷೆಯನ್ನು ಪ್ರೀತಿಸಬೇಕು, ಬೆಳೆಸಬೇಕು, ಬೇರೆ ಭಾಷೆಯನ್ನು ವ್ಯಾವಹಾರಿಕವಾಗಿ ಬಳಸಬೇಕು ಎಂದು ಮಾತೃಭಾಷೆ ಕನ್ನಡದ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು.

ತೆಲಗಿಯ ಕೆ.ಎಸ್. ವೀರಭದ್ರಪ್ಪ ಮಾತನಾಡಿ, ದಿನದ 24 ಗಂಟೆಯೂ ನಮ್ಮ ಉಸಿರಿನಲ್ಲಿ ಕನ್ನಡ ಬೆರೆತಿರಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಸ್ಫೂರ್ತಿ ಪ್ರಕಾಶನ ಸಂಸ್ಥೆಯ ಅಧ್ಯಕ್ಷ ಎಂ. ಬಸವರಾಜ್, ಕನ್ನಡ, ನಾಡು, ನುಡಿ ಹಾಗೂ ಮಕ್ಕಳ ದಿನಾಚರಣೆಯ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಎ. ಹೆಚ್. ಸುಗ್ಗಲಾದೇವಿ, ಕನ್ನಡ ಭಾಷೆಯ ಹಿರಿಮೆಗಳ ಕುರಿತು ಹಾಗೂ ಮಾತೃಭಾಷೆಯನ್ನು ಪೋಷಿಸಬೇಕು, ಬೆಳೆಸಬೇಕು ಎಂದರು.

ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಎ. ಹೆಚ್. ಲಕ್ಷ್ಮೀ ಛಾಯಾ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. 8ನೇ ತರಗತಿಯ ವಿದ್ಯಾರ್ಥಿನಿ ಕೆ.ಬಿ. ಗುಣಶೀಲ ನಿರೂಪಿಸಿದರು. ಡಿ. ಇಂಚರ ಸ್ವಾಗತಿಸಿದರು. ಎಸ್. ಸ್ಫೂರ್ತಿ ವಂದಿಸಿದರು.

### ನಗರಕ್ಕೆ ಇಂದು ಡಾ. ಅಂಬೇಡ್ಕರ್ ಜ್ಯೋತಿಯಾತ್ರೆ

ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್‌ರವರ 67ನೇ ಮಹಾಪರಿನಿರ್ವಾಣ ಪ್ರಯುಕ್ತ ಅಸ್ಪೃಶ್ಯತಾ ನಿವಾರಣೆಗಾಗಿ ಹಮ್ಮಿಕೊಂಡಿರುವ ಅಂಬೇಡ್ಕರ್ ಜ್ಯೋತಿಯಾತ್ರೆ ಇಂದು ನಗರಕ್ಕೆ ಆಗಮಿಸಲಿದೆ. ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಮಿತಿಯು ಸಂಜೆ 7 ಗಂಟೆಗೆ ಕೆಇಬಿ ಬಳಿ ಇರುವ ಡಾ.ಬಿ. ಆರ್.ಅಂಬೇಡ್ಕರ್ ಸರ್ಕಲ್ ಬಳಿ ಆಗಮಿಸುವ ಜ್ಯೋತಿಯಾತ್ರೆಯನ್ನು ಸ್ವಾಗತಿಸಿ, ನಂತರ ಬೀಳ್ಕೊಡಲಿದೆ.

# ಜಗತ್ತಿಗೆ ಭಾರತದ 'ಕಂಪ್ಯೂಟರ್ ಸೈನ್ಸ್'ನ ಕೊಡುಗೆ ಅಪಾರ

**ಬಿಎಸ್‌ಸಿ ಕಾಲೇಜಿನ ಸಮಾರಂಭದಲ್ಲಿ ದಾವಿವಿ ಪ್ರಾಧ್ಯಾಪಕ ಡಾ.ಯು.ಎಸ್ ಮಹಾಬಲೇಶ್ವರ**



ದಾವಣಗೆರೆ, ಡಿ.4- ವ್ಯವಹಾರದಲ್ಲಿ ಯಶಸ್ಸು ಮುಖ್ಯ, ಅದಕ್ಕೆ ಪೂರ್ವ ತಯಾರಿಬೇಕು, ಪಠ್ಯ ಚಟುವಟಿಕೆಗಳ ಜೊತೆ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಅತೀ ಮುಖ್ಯ ವಾಗಿರುತ್ತವೆ ಎಂದು ದಾವಣಗೆರೆ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಯು.ಎಸ್. ಮಹಾಬಲೇಶ್ವರ ಹೇಳಿದರು.

ನಗರದ ಬಿ. ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಸಂಘ, ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್ ಘಟಕ ಹಾಗೂ ಯುವ ರೆಡ್ ಕ್ರಾಸ್ ಘಟಕದ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯ ಪರಿಪಾಲನೆ, ಮಾತನಾಡುವ ಕೌಶಲ್ಯಗಳು ಮುಖ್ಯ, ಕಂಪ್ಯೂಟರ್ ಸೈನ್ಸ್ ನಲ್ಲಿ ಅತೀ ಹೆಚ್ಚು ಅವಕಾಶಗಳಿದ್ದು ಅವುಗಳನ್ನು ಬಳಸಿಕೊಳ್ಳುವ ಕಡೆ ನಿಮ್ಮ ಗಮನ ಇರಲಿ, ಕಂಪ್ಯೂಟರ್ ಸೈನ್ಸ್ ನಲ್ಲಿ ಜಗತ್ತಿಗೆ ಭಾರತದ ಕೊಡುಗೆ ಅಪಾರವಾದದ್ದು ಎಂದರು. ಅಲ್ಲದೇ, ಗಣಿತಶಾಸ್ತ್ರ ಭಾರತದ ಮಹತ್ವದ ಕೊಡುಗೆ, ನಿಮ್ಮ ಕೆಲಸದಿಂದ ನಿಮ್ಮ ಬಗ್ಗೆ ಮಾತನಾಡಿದವರಿಗೆ ಉತ್ತರಿಸಿ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಎನ್. ಎ. ಮುರುಗೇಶ್, ಮನೆಯೇ ಮೊದಲ ಶಾಲೆ, ತಾಯಿಯೇ ಮೊದಲ ಗುರು, ದೇಶದಲ್ಲಿ ನಾರೀ ಶಕ್ತಿ ಹೆಚ್ಚುತ್ತಿದೆ, ಅದರಂತೆ ಶಿಕ್ಷಣದಲ್ಲೂ ಅವರ ಸಾಧನೆ ಉನ್ನತವಾಗಿದೆ ಎಂದರು, ಭಿಕ್ಷೆ ಬೇಡಿ ತಂದು ಗುರುಗಳಿಗೆ ನೈವೇದ್ಯ ಅರ್ಪಿಸಿ, ನಂತರ ವಿದ್ಯೆ ಪಡೆದ ನಾಡು ನಮ್ಮದು. ಗುರುವಿನ ಗುಲಾಮನಾಗುವವನು ಎಲ್ಲವನ್ನೂ ಕಲಿಯುತ್ತಾನೆ, ಜಗತ್ತಿಗೆ ಶೂನ್ಯ ಪರಿಚಯಿಸಿದ ನಾಡು ನಮ್ಮದು. ಶೂನ್ಯವಿಲ್ಲದ ಎಲ್ಲಾ ಸಂಖ್ಯೆಗಳು ಹೆಚ್ಚು ಮೌಲ್ಯ ಪಡೆಯಲಾರವು ಎಂದರು.

**'ಭಿಕ್ಷೆ ಬೇಡಿ ತಂದು ಗುರುಗಳಿಗೆ ನೈವೇದ್ಯ ಅರ್ಪಿಸಿ, ವಿದ್ಯೆ ಪಡೆದ ನಾಡು ನಮ್ಮದು'**
**- ಎನ್.ಎ.ಮುರುಗೇಶ್**

ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕೌಶಲ್ಯಗಳು ಮುಖ್ಯ. ಅಂತಹ ಕೌಶಲ್ಯಗಳನ್ನು ಬೆಳೆಸುವಲ್ಲಿ ನಮ್ಮ ಕಾಲೇಜು ಸದಾ ಮುಂಚೂಣಿಯಲ್ಲಿದೆ, ನಾವು ನಮ್ಮ ಸಾಮರ್ಥ್ಯವನ್ನು ತೋರ್ಪಡಿಸಬೇಕು, ಎನ್‌ಸಿಸಿ, ಎನ್‌ಎಸ್‌ಎಸ್, ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಜೀವನದ ನೆನಪಿನ ಬುತ್ತಿ ಇವು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ ಎಂದರು.

ಎಸ್.ಬಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ. ಸಿ. ಗುರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಂಶುಪಾಲ ಡಾ. ಕೆ. ಷಣ್ಮುಖ, ಅಥಣಿ ಪಿಯು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಡಯಾನಾ ದಿವ್ಯ ಉಪಸ್ಥಿತರಿದ್ದರು.

ಕು.ಸಾಹಿತ್ಯ ನಿರೂಪಿಸಿದರು. ಕು. ಐಶ್ವರ್ಯ ಸ್ವಾಗತಿಸಿದರು. ಕು. ನಯನ ವಂದಿಸಿದರು.


|| ಶ್ರೀ ಮಜ್ಜಿಗೇರಿ ಮುರುಡಬಸವೇಶ್ವರ ಪ್ರಸನ್ನ || || ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ಪ್ರಸನ್ನ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



**ಶ್ರೀ ಉಮಾಪತಿ ಮಾಗಾನಹಳ್ಳಿ,** ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 27.11.2023ನೇ ಸೋಮವಾರ ಮಧ್ಯಾಹ್ನ 12.15ಕ್ಕೆ
ನನ್ನ ಪೂಜ್ಯ ಮಾತೋಶ್ರೀಯವರಾದ
**ಶ್ರೀಮತಿ ಮಾಗಾನಹಳ್ಳಿ ಚೆನ್ನಮ್ಮನವರು**
(ದಿ. ಶ್ರೀ ಮಾಗಾನಹಳ್ಳಿ ಸಂಗನಬಸಪ್ಪನವರ ಧರ್ಮಪತ್ನಿ)
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 05.12.2023ನೇ ಮಂಗಳವಾರ ಮಧ್ಯಾಹ್ನ 12.30ಕ್ಕೆ
ಶ್ರೀಮತಿ ಬಸಮ್ಮ ಬಸಪ್ಪ ಕಲ್ಯಾಣ ಮಂಟಪ, ಶ್ರೀ ಬಕ್ಕೇಶ್ವರ ಸ್ವಾಮಿ ದೇವಸ್ಥಾನದ ಆವರಣ, ಚೌಕಿಪೇಟೆ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಮಾಗಾನಹಳ್ಳಿ ವಂಶಸ್ಥರು, ಮುಂಡಾಸದ ವಂಶಸ್ಥರು ಹಾಗೂ ಬಂಧು-ಮಿತ್ರರು.

**ಶ್ರೀ ಬಸವರಾಜ ಎಲೆಕ್ಟ್ರಿಕಲ್ ಸ್ಟೋರ್ಸ್**
ಪಿ.ಬಿ.ರಸ್ತೆ, ದಾವಣಗೆರೆ. ಮೊ : 98451 55955, 98866 48411

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.